Sri M. NAGAPPA.—Sir, with due respect to the Hon. Chair, I would like to have a clarification. Suppose a Bill is directly sent to the Legislature Secretariat and no member is aware of it and the Government is not supposed to give a copy of it to the members and if the Legislature Secretariat has published it without bringing it to the knowledge of the hon. Members. In such case, what is the right time for taking objection ? Sometimes when we want to raise an objection at the very stage of its publication the Assembly may or may not be in session. If the Assembly is in session definitely we can take objection under proviso to rule 71 of the Rules of Procedure. But if the Assembly is not in session, what is the mode under which a member can take objection regarding the constitutionality of the Bill. The Ruling that is given means that *suo motu* rules 64, 66, 67, 68, 69, 70 and 71 have all been abrogated and repealed by the Hon. Chair. Therefore I humbly submit that the very purpose of codifying the rules 64, 66, 67, 68, 69, 70 and 71 have been abrogated. Of course I quite understand that there is a difference between introduction of a Bill and leave to introduce a Bill. Further, I think that the Bill is going to be introduced before this House as per the list of business. Therefore, I submit that this is a right time to raise objection about the constitutionality of this particular Bill. I do not know whether this Bill has been published. But it is a right time for me to raise objection under Rule 71 (2). With regard to this particular Bill, which has been sought to be introduced, I have a point to be clarified. They are introducing certain provisions.....

4-00 P.M.

Mr. SPEAKER.—The hon. member is going into the merits. He may raise that objection at the consideration stage.

Sri M. NAGAPPA.—According to the rules of procedure, the Governor's assent is also necessary. The financial memorandum is also not there. After fulfilling these conditions that are necessary, this Bill may be permitted to be introduced.

Sri K. PUTTASWAMY.—As per the order paper, you were pleased to call the Hon. Chief Minister to introduce the Bill. He introduced the Bill. You said that the Bills are introduced. Then you were pleased to call the Hon. Minister for Finance to introduce the Sales Tax Bills and they have been introduced. Now the hon. Member Sri Nagappa is taking objection to the introduction of the Bills which have already been introduced.

Sri H. SIDDAVEERAPPA.—This is not correct.

Sri K. PUTTASWAMY.—First, you were pleased to call upon the Chief Minister to introduce the Bills. He introduced them and then you called upon the Finance Minister to introduce his Bills, and they have been introduced. When this has been done, it is not open to the Hon. Members of this House to take objection or raise point of orders on a subject which has been disposed of.

Sri S. SIVAPPA.—The Bills relating to Finance Minister are to replace the Ordinance No 3. In the earlier stage they were placed on the Table. Objection could be raised at the time of introduction. We have got every right to do so and you should allow the objection.

† ಶ್ರೀ ಹೆಚ್. ಎಂ. ಚನ್ನಬಸಪ್ಪ (ಪಿರಿಯಾಪಟ್ಟಣ).—ಸ್ವಾಮೀ, ತಾವು ಕ್ಷಮಿಸಬೇಕು. ನಾನು ಒಂದು ವಿಷಯದಕಡೆ ತಮ್ಮ ಗಮನವನ್ನು ಸೆಳೆಯಬೇಕೆಂದು ನಾನು ಇಲ್ಲಿ ನಾಲ್ಕು ಬಾರಿ ಎದ್ದು ನಿಂತರೂ ನನಗೆ ಅವಕಾಶ ದೊರಕಲಿಲ್ಲ. ಇದರಿಂದ ನಾನು ತಮ್ಮಲ್ಲಿ ಕೇಳುವುದು ತಮ್ಮ ಗಮನವನ್ನು ಸೆಳೆದು ಮಾತನಾಡಬೇಕಾದರೆ ಏನು ಮಾಡಬೇಕು ಎನ್ನುವುದು? ಸದಸ್ಯರು ಇಲ್ಲಿ ಮಾತನಾಡಬೇಕೆಂದು ಇಚ್ಛೆಪಟ್ಟರೆ ನುಮ್ಮನೆ ಎದ್ದು ನಿಂತು ಇಲ್ಲಿ ಮಾತನಾಡಿದರೆ ತಮ್ಮ ಗಮನ ಸೆಳೆದಂತಾಗುತ್ತದೆಯೇ? ನಾನು ಇದುವರೆಗೂ ಇಲ್ಲಿ ಮಾತನಾಡಬೇಕೆಂದು ಎದ್ದು ನಿಂತರೂ ತಾವು ನನ್ನನ್ನು ಮಾತನಾಡಲು ಕರೆಯಲೇ ಇಲ್ಲ. ಯಾರಾದರೂ ಸದಸ್ಯರು ಇಲ್ಲಿ ಮಾತನಾಡುವಾಗ ಪ್ರಜಾಪ್ರಭುತ್ವದ ವಿಧಿ ನಿಯಮಗಳ ಮೂಲಕ ವಿಚಾರ ಮಾಡಬೇಕೇ, ಇಲ್ಲವೇ; ಸ್ವೇಚ್ಛೆಯಾಗಿ ಅವರಿಗೆ ಮನಸ್ಸಿಗೆ ಬಂದಂತೆ ಇಲ್ಲಿ ಮಾತನಾಡಬಹುದೇ ಎಂದು ತಮ್ಮಲ್ಲಿ ಕೇಳಬೇಕಾಗಿದೆ.

ಎರಡನೇಯದು, ನಾವು ಇಲ್ಲಿ ಶಾಸನಗಳನ್ನು ಮಾಡತಕ್ಕ ವಿಷಯಗಳು ಬಂದಾಗ ಒಬ್ಬ ಸದಸ್ಯರು ಅವರಿಗೆ ತಿಳಿದು ಬಂದಿರುವ ವಿಚಾರಗಳನ್ನು ಇಲ್ಲಿ ಮನ ಬಿಚ್ಚಿ ಹೇಳಬೇಕೆಂದು ಇರುತ್ತಾರೆ. ಆಗ ತಾವು ಇದರ ವಿಚಾರಗಳು ನಮಗೆ ಗೊತ್ತಿದೆ ಎಂದು ಮೊದಲೇ ಹೇಳಿಬಿಟ್ಟರೆ ಇಲ್ಲಿ ಸದಸ್ಯರಾಗಿ ಬಂದಿರುವ ನಮ್ಮಗಳಿಗೆ ಯಾವ ರೀತಿಯಾಗಿ ವ್ಯವಹಾರ ಮಾಡಬೇಕು ಎನ್ನುವುದನ್ನು ನಾನು ಕೇಳ ಬೇಕಾಗಿದೆ. ಈಗತಾನೇ ತಾವು ಹೇಳಿದಿರಿ ಬಿಲ್ಲುಗಳು ಇಂಟ್ರಡ್ಯೂಸು ಆದವು ಎಂದು. ನಾವು ಇಲ್ಲ ಎಂದು ಹೇಳುತ್ತಿದ್ದೇವೆ. ಒಂದು ವೇಳೆ ತಾವೂ ಬಿಲ್ಲುಗಳನ್ನು ಇಂಟ್ರಡ್ಯೂಸು ಮಾಡಿ ಯಾಯಿತು ಎಂದು ಹೇಳಿಬಿಟ್ಟರೆ ನಾವು ಇಲ್ಲಿ ಇದರ ಮೇಲೆ ವ್ಯಾಖ್ಯಾನ ಹೇಗೆ ತಾನೇ ಮಾಡಬೇಕು? ಇದಕ್ಕಾಗಿ ನಾನು ತಮ್ಮಲ್ಲಿ ಹೇಳುವುದು ಯಾರೇ ಸದಸ್ಯರಾಗಲೀ ಇಂತಹ ಶಾಸನಗಳ ಬಗ್ಗೆ ಹೇಳುವುದನ್ನು ಹೇಳಲು ಅವರಿಗೆ ಕಾಲವನ್ನು ಕೊಟ್ಟು ತಾವೂ ಕೇಳಿ ಆ ನಂತರ ಮುಂದುವರಿಯ ಬೇಕೇ ಏನಾ ನುಮ್ಮನೆ ಶಾಸನಗಳನ್ನು ಅತುರಾತುರವಾಗಿ ಮಾಡಿದರೆ ಧರ್ಮ ನತ್ಯ ಉಳಿಯುತ್ತದೆಯೇ?

ಮೂರನೆಯದು ತಾವು ಇಲ್ಲಿ ಧರ್ಮ ಹಾಗೂ ನತ್ಯಗಳನ್ನು ಸ್ಥಾಪನೆ ಮಾಡುವ ಅವಕಾಶವನ್ನು ಜನತೆಗೆ ದೊರಕಿಸಿ ಕೊಡಬೇಕು, ಇದನ್ನು ಜನತೆ ಕೂಡ ತಮ್ಮಿಂದ ಪಡೆಯಲು ಆಶಿಸುತ್ತಾರೆ. ಇದಕ್ಕಾಗಿಯೇ ತಮ್ಮ ಸ್ಥಾನದ ಮೇಲೆ ತಕ್ಕಡಿ ಕೂಡ ಇದೆ. ಆದರಂತೆ ತಾವು ಎಲ್ಲರಿಗೂ ನ್ಯಾಯ ದೊರಕುವಂತೆ ಮಾಡಬೇಕು. ತಾವು ಏನು ಹೇಳುತ್ತೀರೋ ಅದನ್ನು ಚೆನ್ನಾಗಿ ಅರಿತುಕೊಂಡು ಹೇಳಬೇಕು ಎಂದು ನಾನು ತಮ್ಮಲ್ಲಿ ವಿನಯದಿಂದ ಪ್ರಾರ್ಥನೆ ಮಾಡುತ್ತಿದ್ದೇನೆ. ಮತ್ತು ವಿಧಿ ನಿಯಮಗಳ ಬಗ್ಗೆ ಇಲ್ಲಿ ವ್ಯಾಖ್ಯಾನ ಮಾಡತಕ್ಕ ಕಾಲದಲ್ಲಿ ಸ್ವಲ್ಪ ಸಾವಧಾನವಾಗಿ ಇದ್ದು ಸದಸ್ಯರು ಸೂಕ್ತವಾಗಿ ಇಲ್ಲಿ ಪ್ರಸ್ತಾಪಮಾಡಲು ಅವಕಾಶ ಕೊಟ್ಟು ಅದನ್ನು ಚೆನ್ನಾಗಿ ತಿಳಿದುಕೊಂಡು ಆ ನಂತರ ತಾವೂ ವ್ಯಾಖ್ಯಾನ ಮಾಡುವುದೊಳ್ಳೆಯದು.

†ಶ್ರೀ ಹೆಚ್. ಸಿದ್ದವೀರಪ್ಪ.—ಈಗ ಶ್ರೀಮಾನ್ ಪುಟ್ಟಸ್ವಾಮಿಯವರು ಮಾತನಾಡಿದ ಮೇಲೆ ನಾನು ಮಾತನಾಡಬೇಕಾಗಿ ಬಂತು. ಶ್ರೀಮಾನ್ ಪುಟ್ಟಸ್ವಾಮಿಯವರು, ಮಾನ್ಯ ಮುಖ್ಯಮಂತ್ರಿಗಳು ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದರು ಎಂದು ಹೇಳಿಬಿಟ್ಟರು. ಈಗ ಇಂಟ್ರಡ್ಯೂಸ್ ಮಾಡಾಯಿತಲ್ಲ ಎಂದು ಹೇಳಿ ಅಪ್ಪೋಸ್ ಮಾಡಲು ನಮಗೆ ಅವಕಾಶವಿಲ್ಲ ಎಂದು ಹೇಳುವುದಾದರೆ ಇನ್ನು ಉಳಿದಿರುವುದು ನಾವು ಮನೆಗೆ ಹೋಗುವುದು ಒಂದೇ. ಆದರೆ ಈ ರೀತಿ ಶಾಸನ ಮಾಡುವುದಾದರೆ ಸರಿಹೋಗುವುದಿಲ್ಲ. ಶಾಸನ ಮಾಡಬೇಕಾದರೆ ಸ್ವಲ್ಪ ಸಮಾಧಾನದಿಂದ ಮಾಡಬೇಕಾಗುತ್ತದೆ. ಅವಸರವಾಗಿ ಮಾಡುವುದು ಸರಿಹೋಗುವುದಿಲ್ಲ. ಶಾಸನ ಮಾಡತಕ್ಕ ರೀತಿ ನೋಡಿದರೆ ನನಗೆ ಬಹಳ ಮನನೊಂದಿದೆ. ಇಂತಹ ಶಾಸನಗಳು ಬಂದಾಗ ಏನು ಮಾಡಬೇಕು ಎಂದು ಸದಸ್ಯರ ಅಭಿಪ್ರಾಯವನ್ನು ಕೇಳಬೇಕು. ಇವರ ಬಗ್ಗೆ ನಾವು ಏನು ಹೇಳುತ್ತೇವೋ ಅದನ್ನು ಶಾಂತರೀತಿಯಿಂದ ಕೇಳದೇ ಹೋದರೆ ಏನು ಸ್ವಾಮಿ ?

ಒಂದು ಉದಾಹರಣೆ ಹೇಳುವುದಾದರೆ ರೂಲ್ 64ರ ಪ್ರಕಾರ ಒಂದು ಬಿಲ್ ಪಬ್ಲಿಷ್ ಆಗಬೇಕು. ಕಾನೂನು ಬಾಹಿರವಾದ ಅಥವಾ ಕಾನ್‌ಸ್ಟಿಟ್ಯೂಷನಿಗೆ ವಿರುದ್ಧವಾದ ಒಂದು ಬಿಲ್ಲನ್ನು ಪಬ್ಲಿಷ್ ಮಾಡುವುದಕ್ಕೆ ಅವಕಾಶ ಕೊಟ್ಟರೆ ಇಂಟ್ರಡಕ್ಷನ್ ಸ್ಟೇಜ್ ಏನು ಇದೆಯೋ ಅದಕ್ಕೆ ಅಪ್ಪೋಸ್ ಮಾಡುವುದಕ್ಕೆ, ಅಬ್ಜೆಕ್ಷನ್ ತೆಗೆದುಕೊಳ್ಳುವುದಕ್ಕೆ ನಮಗೆ ಇನ್‌ಹೆರಿಟೆಂಟ್ ರೈಟ್ಸ್ ಇದೆ. ರೂಲ್‌ನಲ್ಲಿ ಇನ್ನೂ ಅಮೆಂಡ್ ಆಗುವುದು ಬಹಳ ಇದೆ. ಅದು ನಮ್ಮ ಅನುಮೋದನೆಗೆ ಬರುತ್ತದೊ ಇಲ್ಲವೋ ಗೊತ್ತಿಲ್ಲ. ಆದುದರಿಂದ ಈಗ ಇರತಕ್ಕಂಥದ್ದನ್ನು ನೀವು ಯೋಚನೆ ಮಾಡಿ ಎಂದು ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಗಲಾಟೆ ಮಾಡುತ್ತಾರೆಂದು ತಿಳಿದುಕೊಳ್ಳಬೇಡಿ ಅದಕ್ಕೆ ಅವಕಾಶ ಕೊಡಬೇಡಿ. ಶಾಂತರೀತಿಯಿಂದ ಕೂತುಕೊಂಡು ಕೇಳಿ, ಆಮೇಲೆ ನೀವು ಏನು ಬೇಕಾದರೂ ಹೇಳಿ.

†Sri M. S. KRISHNAN.—I am not questioning the Ruling of the Chair. Nor am I speaking on what the Hon. Minister said. In addition to what Sri Nagappa said, I want to sav one point as a matter of clarification. That would suffice. I wou d like to bring to your kind notice Rule 64, what actually it says is:

> "64: The Speaker may, on request being made to him, order the publication of any Bill (together with the Statement of Objects and Reasons) although no motion has been made for leave to introduce the Bill. In that case it shall not be necessary to move for leave to introduce the Bill, and if the Bill is afterwards introduced, it shall not be necessary to publish it again."

Now the question is whether leave to introduce the Bill has to be made. There are various stages for a Bill. This particular clause of the rule means: If the Hon. Minister who wants to introduce the Bill, makes a request to the Speaker that the Bill may be published, you order its publication. If it is published, then the question of introduction arises. That is the only point. The para pertains to publication before introduction and it does not take away the right of a Member to object to the introduction. The two are sought to be interlinked by you. That is not the purpose of this particular Rule. I therefore request that the point of order raised by Mr. Nagappa may be upheld.

Mr. SPEAKER.—I quite appreciate the sentiment expressed by the hon. Members Sri H. M. Channabasappa, Sri Siddaveerappa and Sri Sivappa that I should give a complete hearing. But then, after hearing the members when a ruling is given hon. Members sometimes they go on raising the same points again and stand up to speak. I cannot

understand that and it is not correct. After I have given a hearing to every Member, I give my ruling and again if hon. Members stand up and speak on the same point, there will be no end to it. After all, raising of points of order and their disposal should be very very brief.

(*At this stage some members entered the House*)

May I tell the hon. Members that when the Presiding Officer stands, nobody should enter the House and no Member of the House should be standing. Hon. Members are expected to be in their seats at least when the Chair is speaking.

In the British House of Commons, points of orders are raised and disposed of in half-a-minute. They conduct their business in a very efficient and businesslike manner. The rulings given by the Chair are respected even if they are wrong sometimes. It is for the Chair to come again before the House and say 'I have given a wrong ruling', the correct position is this. "But for the moment when the ruling is given on the floor of the House, it should not be challenged in the House. On such occasions, the hon Members should meet the Hon. Speaker in his Chambers and point out any defects". That is the procedure.

As regards the point raised by Sri M. Nagappa, I am not giving a new ruling. I am only clarifying the rule. Publication under 64 has got two effects; firstly it dispenses with the necessity for moving a motion for leave to introduce the Bill and secondly, it dispenses with the publication which is required unde rule 72. Mr. Nagappa raised a doubt, when requests are made for publication of Bills, how does the Secretariat or the Speaker permit such publication in the gazette? The position is, when the Bills come to the Legislature Secretariat, the Bill is subjected to examination. The Speaker also examines the Bill, and prima facie, if it is found that the Bills fulfil all the conditions laid down under the Constitution and the rules, they are permitted to be published in the Gazette. Not otherwise. May be, sometimes mistakes may occur. I do not claim infallibility either to myself or the Secretariat. Mistakes might be committed. But the remedy is, objections constitutional or otherwise can be taken at the stage of consideration but not at the introduction stage. Members do not lose their right by reason of permitting the introduction of a Bill. They can raise all their doubts and objections at the consideration stage

Sri M. Nagappa raised objection when the Hon Minister wanted to introduce the Bill included in the list of business. Hon. Member need not be agitated on this point which is very very simple. In the House of Commons, which is considered as the Mother of Parliaments, the first reading stage is simply a mechanical one. When the first reading is taken, the Speaker simply asks when is the second reading to come and who is the Member in charge of the second reading. It does not mean that the hon. Members of the House of Commons are prohibited from challenging the constitutional propriety at the stage of second reading. Therefore, hon. Members do not lose their rights of raising the relevant

(MR. SPEAKER)

points at the appropriate time. This explanation should suffice and set at rest further discusion on this point.

ಶ್ರೀ ಎಸ್. ಶಿವಪ್ಪ.—ತಾವು ಹೇಳಿದ ಪ್ರತಿಯೊಂದು ಮಾತನ್ನೂ ಕೇಳಿ ನನಗೆ ಬಹಳ ಸಂತೋಷವಾಯಿತು. ಬ್ರಿಟಿಷ್ ಹೌಸ್ ಆಫ್ ಕಾಮನ್ಸ್ ಪದ್ಧತಿಯನ್ನು ಹೇಳಿದಿರಿ, ಅದು ಸೂಕ್ತವಾದುದು. ಪಾರ್ಲಿಮೆಂಟರಿ ಪದ್ಧತಿಗೆ ಅದು ಮಾತೃಸ್ಥಾನ. ಅಲ್ಲಿ ಕೆಲಸಕಾರ್ಯಗಳು ಹೇಗೆ ನಡೆಯುತ್ತವೆ, ಸರಕಾರದಿಂದ ಯಾವ ರೀತಿ ಉತ್ತರ ಬರುತ್ತದೆ, ಯಾವ ರೀತಿ ಮಾಡುತ್ತಾರೆ ಎನ್ನುವುದನ್ನು ತಾವು ಹೇಳಿದ್ದೀರಿ, ನಾನೂ ಕೂಡ ನೋಡಿದ್ದೇನೆ. ಅಲ್ಲಿ ಈ ತರಹ ಮಂತ್ರಿಗಳು ಆತುರಾತುರವಾಗಿ ಬಿಲ್ಲುಗಳನ್ನು ಸಭೆಯಲ್ಲಿ ಓದುತ್ತಾರೆಯೇ ಎನ್ನುವುದನ್ನು ತಿಳಿದುಕೊಳ್ಳಬೇಕು. ಅಲ್ಲ ಅವರು ಈ ತರಹ ಮಾಡಿದರೆ ಏನು ಮಾಡುತ್ತಾರೆಂಬುದನ್ನೂ ತಿಳಿಯಬೇಕು. ನಾನು ಅಲ್ಲಗೆ ಹೋಗಿ ಬಂದ ಮೇಲೆ ಕೆಲವು ದಿವಸ ನನ್ನ ತಲೆಯಲ್ಲಿ ಅದೇ ವಿಚಾರಗಳಿದ್ದುವು. ಆದರೆ ಆಡಳಿತ ನಡೆಸುವವರಿಗೆ, ವಿರೋಧ ಪಕ್ಷಕ್ಕೆ ಖಂಡಿತ ಮನ್ನಣೆಯನ್ನು ಕೊಡತಕ್ಕ ಗೌರವವಿದ್ದಿದ್ದರೆ ಈ ದೇಶದಲ್ಲಿ ಪ್ರಜಾಪ್ರಭುತ್ವ ಈ ಮಟ್ಟಕ್ಕೆ ಬರುತ್ತಿರಲಿಲ್ಲ ಎಂದು ಹೇಳುವುದಕ್ಕೋಸ್ಕರವಾಗಿ ನಾನು ಎದ್ದಿದ್ದೇನೆ. ಆದುದರಿಂದ ತಾವು ಹೇಳಿದಂಥ ಉತ್ತಮವಾದ ಸಂಪ್ರದಾಯಗಳನ್ನು ಆಚರಣೆಯಲ್ಲಿ ತಂದು ಅವುಗಳನ್ನು ಪಾಲಿಸುತ್ತೇವೆ ಎನ್ನುವ ತತ್ಪೇನಿದೆ ಅವತಿಯಿಂದ ಅದನ್ನು ಬರಮಾಡಿಕೊಳ್ಳತಕ್ಕ, ಗ್ರಹಿಸತಕ್ಕ ಶಕ್ತಿ ಇಲ್ಲದೆ ಹೋದರೆ ಅದರಿಂದ ಏನಾಗುತ್ತದೆ ಎನ್ನುವುದನ್ನ ತಾವು ಯೋಚನೆ ಮಾಡಬೇಕು.

Sri VEERENDRA PATIL.—Sir, I am extremely sorry for the remarks made by the Hon. Leader of the Opposition. All the while I was sitting looking into files. The Hon. Speaker directed me to introduce the Bill. In fact, on our own, we could introduce a Bill when it is put down in the List of Business. It is our duty to introduce the Bills when they are put down on the agenda. In addition, the Hon. Speaker directed me to introduce it. Then in compliance with the direction received from the Hon. Speaker, I rose in my seat and I introduced. I do not know what is wrong. I do not understand why these uncharitable remarks are being thrown at us.

Sri S. SIVAPPA.—I did not refer to any individual.

Mr. SPEAKER.—My request to the hon. Members is that they should have respect for one another. It is in an atmosphere of mutual respects that the proceedings could go on. Let everybody try in his own way to introduce that spirit of dignity and decorum. I have explained everything. If there is any doubt, I again tell Sri Nagappa that he will be permitted to raise his point of objection at the consideration stage.

Sri H. SIDDAVEERAPPA.—Supposing a wrong ruling or illegal ruling is given, is there any remedy for this House ?

Mr. SPEAKER.—I may inform the House that I had a very serious discussion about this in London. I do not want to disclose the name of the person with whom I had a discussion. I was told that a ruling, right or wrong has got to be respected at the time it is given and if on a second thought, the Speaker finds subsequently that the ruling is not correct, it is his duty to revise it and give a revised ruling in the House. The correct procedure to be followed in this connection is this : the hon. Members may meet the Speaker in his

Chamber and say that a particular ruling is wrong. If the Speaker is convinced about it, he can correct it. I won't hesitate to admit my mistake if there is a mistake. I do not consider myself to be infallible. The hon. Members are always welcome to meet me and point out that my ruling is wrong; or, on my initiative, if I find that I have unfortunately not given a correct ruling, I will come before this House and submit the correct position. I shall certainly do that. So with this explanation, I think the matter should be set at rest.

Sri K. H PATIL.—I always respect the ruling given by the Chair. We have no right to question it. In case the Bill which has been introduced or an ordinance which has been promulgated, contains a number of notifications which are not placed at the disposal of the members or not available at the Notice Office, are we not competent to raise that point?

Mr. SPEAKER.—You can raise all those points at the consideration stage.

Sri M. S. KRISHNAN.—You were pleased to say that we can raise these objections under Rule 63, 64, 65, 66, 67 and 68. We have been raising these objections now so that tomorrow you might not say that no objections were raised.

Sri M. NAGAPPA.—The Hon. Finance Minister has also introduced two Bills. In respect of them, the Hon. Chair may be knowing that I have moved two disapproval motions.

Mr. SPEAKER.—They will come at the consideration stage. I shall state the procedure. That procedure was followed recently in the Parliament in respect of the Bank Nationalisation Ordinance. The Bill was introduced along with the disapproval motion. I shall follow the same procedure here also. If and when the Government moves for consideration of a Bill, I shall also permit the members to move their resolution on it. The discussion on both the Bill and the resolution will proceed simultaneously. The Member's resolution will be put to vote first and then the Bill will be put to vote.

ಶ್ರೀ ಎಚ್. ಎನ್. ನಂಜೇಗೌಡ.—ತಮ್ಮಿಂದ ನನಗೆ ಒಂದು ಕ್ಲಾರಿಫಿಕೇಷನ್ ಬೇಕು. ಒಂದು ಬಿಲ್ ಪಬ್ಲಿಷ್ ಆದಮೇಲೆ ಅದು ಇಂಟ್ರೊಡ್ಯೂಸ್ ಆದಹಾಗೆ ಆಯಿತು, ಆದರ ಮೇಲೆ ಏನಾದರೂ ಅಕ್ಷೇಪಣೆಗಳಿದ್ದರೆ ಅವನ್ನು ಕನ್‌ಸಿಡರೇಷನ್ ಸ್ಟೇಜಿನಲ್ಲಿ ತರಬಹುದು ಎಂದು ಅಪ್ಪಣೆ ಕೊಡಿಸಿದ್ದೀರಿ. ಬಿಲ್ಲುಗಳನ್ನು ಸರ್ಕಾರದವರು ತರಬಹುದು, ಅಥವ ಈ ಮಾನ್ಯ ಸಭೆಯ ಸದಸ್ಯರು ಯಾರಾದರೂ ತರಬಹುದು. ಪಬ್ಲಿಷ್ ಆದ ಪ್ರತಿಯೊಂದು ಬಿಲ್ಲೂ ಕನ್‌ಸಿಡರೇಷನ್ ಸ್ಟೇಜಿಗೆ ಬರುವುದಕ್ಕೆ ಸಭೆಯಲ್ಲಿ ಅವಕಾಶ ಮಾಡಿಕೊಡುವ ಭರವಸೆಯನ್ನು ಕೊಡುತ್ತೀರಾ?

Mr. SPEAKER.—The same consideration can be extended to the Private Members' Bills. Whatever I said will apply to the Private Members' Bills if they are published in the gazette.

ಶ್ರೀ ಎಂ. ನಾಗಪ್ಪ.—ನಾನು ಪಾರ್ಲಮೆಂಟರಿ ಪ್ರೊಸೀಜರ್ ಹೇಳಿದೆ. ತಾವು ಆರ್ಟಿಕಲ್ 213 ನ್ನು ಎರಡು ಸಲ ಓದಿದಿರಿ, ತಮಗೆ ವಿಚಾರ ಗೊತ್ತಿದೆ. ಆರ್ಡಿನೆನ್ಸ್ 1969 ರಲ್ಲಿ ಹೊರಟಿರುವುದು. ಒಂದುವೇಳೆ ಡಿಸ್‌ಅಪ್ರೂವಲ್ ರೆಸಲ್ಯೂಷನ್ ಪಾಸ್ ಆದರೆ ಬಿಲ್ಲನ್ನು ಇಂಟ್ರೊಡ್ಯೂಸ್ ಮಾಡುವುದರಲ್ಲಿ ಅರ್ಥವಿರುವುದಿಲ್ಲ.

4-30 P. M.

Mr. SPEAKER.—The position is, they may themselves withdraw. Nothing prevents the Government from bringing in a Bill and that Bill will have to be rejected or accepted by this House. Even if your resolution is taken up first and is approved, nothing prevents the Government from introducing a Bill with retrospective effect. Therefore everything will be done in a constitutional manner and members might raise all your objections at the appropriate stage.

Sri M. NAGAPPA.—It cannot be brought in the same session. There is a rule.

Mr. SPEAKER.—I have given the ruling.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಶ್ರೀ ಶಿವಪ್ಪನವರು ಮಾತನಾಡಿದ ಮೇಲೆ ಮುಖ್ಯಮಂತ್ರಿಗಳು ಕೆಲವು ರಿಮಾರ್ಕ್ಸ್ ಮಾಡಿದರು, ಅವರು ತಾವು ಫೈಲನ್ನು ನೋಡು ತ್ತಿದ್ದುದಾಗಿ ಹೇಳಿದರು. ಈ ಸಭೆಯಲ್ಲಿ ಮಂತ್ರಿಗಳು ಫೈಲುಗಳನ್ನು ನೋಡಲು ರೂಲ್ಸಿನಲ್ಲಿ ಅವಕಾಶವಿಲ್ಲವೆಂದು ನಾನು ಭಾವಿಸುತ್ತೇನೆ. ಅವರು ಫೈಲುಗಳನ್ನು ಇಲ್ಲಿ ನೋಡಲು ಅವಕಾಶವಿದೆಯೇ ಎಂಬ ವಿಚಾರದಲ್ಲಿ ಅಧ್ಯಕ್ಷರು ರೂಲಿಂಗ್ ಕೊಡಬೇಕು.

Mr. SPEAKER.—Under the rules, hon. Member should attend to the business before the House. I do not know whether he was looking into the files pertaining to these Bills.

The Hon. Minister for Law will introduce the Madras Aliyasanthan (Mysore Amendment) Bill, 1968.

Sri K.PUTTASWAMY.—I am not introducing it today.

Mysore Compulssory Primary Education (Amendment and Miscellaneous Provisions) Bill, 1968 and the Mysore Education Cess (Validation of Levy) Bill, 1969.

Introduction

Sri K. V. SHANKARA GOWDA.—I introduce : (i) the Mysore Compulsory Primary Education (Amendment and Miscellaneouse Provisions) Bill, 1968 and (ii) The Mysore Education Cess (Validation of Levy) Bill, 1969.

Mr. SPEAKER,—The Bills are introduced.

Regarding the Agricultural Produce Marketing (Regulation) (Amendment) Bill, I have said that it may be taken up later.

Sri K. PUTTASWAMY.— Sir, it will place us in difficulty.

Mr. SPEAKER.—This is a matter which at the time of introduction is likely to involve in some controversies. I have postponed its introduction in the interest of other business. One more reason is, the

copies of the Bills are not available. Therefore unless we make available copies of the Bills, it will be difficult for me to permit any introduction.

Sri M. NAGAPPA.—Sir, according to the rule at the time of introduction of Bills no copy is required.

Mr. SPEAKER.—I have given two reasons.

Sri M. NAGAPPA.—On a point of order. I want to submit that under the rules it is stated :

> ".....as soon as may be after the Bill has been introduced unless it has, already been published shall be published in the gazette....."

So, there is no hindrance to introducing the Bill. It can be done afterwards.

Mr. SPEAKER.—I am upholding the point. But I want to point out that in today's agenda it is not for leave to introduce ; it is for introduction. As to what should happen after the publication, I shall consider it later on.

Sri M. NAGAPPA.—May I know whether your Secretariat has received any such application for publication ?

Mr. SPEAKER.—It is received. The Secretary has gone through it and has permitted the publication ; it is under print and copies are not still available.

Mysore Khadi and Village Industries (Amendment) Bill, 1969.

Introduction

Sri M. RAJASEKHARA MURTHY (Minister for Industries, Information and Publicity).—I beg to introduce the Mysore Khadi and Village Industries (Amendment) Bill, 1969.

I do not propose to introduce the other Bill, namely, the Mysore State Aid to Industries (Amendment) Bill, 1969.

Indian Registration (Mysore Amendment) Bill, 1969

Introduction

Sri H. V. KOUJALGI (Minister for Revenue).—I beg to introduce:

The Indian Registration (Mysore Amendment) Bill, 1969.

Mr. SPEAKER.—The Bills are introduced. Before proceeding to the next item I have a few announcements to make.

Arrest and release of Members

Announcement

MR. SPEAKER.—I have received the following communications regarding arrest and release of certain members of the House during the inter-Session period.

(i) Communication dated 30th April 1969 from the Circle Inspector of Police, Madhugiri, stating that Sri G. T. Govinda Reddy, Member of the Assembly, was arrested on 28th April 1969 under Sections 143, 147, 148, 149 and 324 of the Indian Penal Code and was released on bail the same day.

(ii) Communications dated 24th May 1969 and 27th May 1969 from the Assistant Commissioner of Police, "A" Division, Bombay, that Sri P. B. Nandihalli, Member of the Assembly was arrested on 24th May 1969 under sub-section (3) of section 37 of the Bombay Police Act for defying the ban order and that the member was convicted and fined Rs. 10.

(iii) Communication dated 17th June 1969 from the Assistant Commissioner of Police, "A" Division, Bombay, that Sri P. B. Nandihalli and Sri B. P. Kadam, Members of the Assembly, were arrested on 16th June 1969 under sub-section (3) of Section 37 of the Bombay Police Act, 1951, for defying the ban order and were released the same day.

(iv) Communication dated 10th July 1969 from the Commissioner of Police, Bangalore, that Sri Vatal Nagaraj, Member of the Assembly was arrested on 10th July 1969 under section 151 of the Criminal Procedure Code and was released the same day.

(v) Communication dated 10th August 1969 from the District Superintendent of Police, Tumkur. that Sri Ganga Bovi, Member of the Assembly, was arrested on 18th June 1969 at Gangasandra village in Crime No. 53/69 under sections 143—188 read with section 34 of I.P.C and was released on 19th June 1969.

(vi) I have also received communication dated 11th August, 1969 from the City Magistrate, Bangalore. It reads as follows :

"I have the honour to inform you that Sri Vatal Nagaraj, M.L.A. (from one of the Bangalore constituencies) the 1st accused in the Criminal Case Number 3421/69 on the file of my court, appeared in court on 18th July 1969. A nonbailable warrant that had been issued to secure his presence on that day was returned with the report that the said Sri Vatal Nagaraj has been produced under the NBW and Sri Vatal Nagaraj was released on the same day."

Panel of Chairmen

Mr. SPEAKER.—Under Rule 9 of the Rules of Procedure and Conduct of Business in the Mysore Legislative Assembly, I nominate the following members to the Panel of Chairmen for the current session.

Sriyuths :

1 D. M. Siddaiah
2 B. N. Rame Gowda
3 B. P. Kadam
4 K. H. Ranganath

Official Resolution *re*: Ratification to the Constitution (22nd Amendment) Bill, 1969

Sri K. PUTTASWAMY.—Sir I beg to move :

"That this House ratifies the amendments to the Constitution of India falling within the purview of the proviso to article 368 thereof, proposed to be made by the Constitution (Twenty-Second Amendment) Bill, 1969 as passed by the two Houses of Parliament."

Mr. SPEAKER.—Resolution moved:

"That this House ratifies the amendments to the Constitution of India falling within the purview of the proviso to article 368 thereof, proposed to be made by the Constitution (Twenty-Second Amendment) Bill, 1969 as passed by the two Houses of Parliament."

† Sri K. PUTTASWAMY.—Sir, I wish to bring to the notice of this august House the relevant provision of the Indian Constitution under which this ratification is sought. Article 368 deals with the procedure for amendment of the Constitution and it reads thus :

"An amendment of this Constitution may be intitated only by the introduction of a Bill for the purpose in either House of Parliament, and when the Bill is passed in each House by a majority of not less than two-thirds of the members of that House present and voting, it shall be presented to the President for his assent and upon such assent being given to the Bill, the Constitution shall stand amended in accordance with the terms of the Bill."

(SRI K. PUTTASWAMY)

This is one procedure. The other is covered by the proviso under the same Article which says thus :

"Provided that if such amendment seeks to make any change in–

(*a*) article 54, article 55, article 73, article 162 or article 241, or

(*b*) Chapter IV of Part V, Chapter V of Part VI, or Chapter I of Part XI,"

It is under this proviso to article 368 that I am moving this resolution requesting the House to ratify the twenty-second amendment to the Indian Constitution. The matters which fall under the proviso are, article 54 which deals with the election of the President, article 55 which deals with the manner of election of the President, article 73 which deals with the extent of executive power of the Union, article 162 which deals with the extent of executive power of the State, Chapter IV of Part V which deals whith the Union Judiciary, Chapter V of Part VI which deals with High Courts in the States and Chapter I of Part II which deals with the relations between the Union and States. The Seventh Schedule gives the subjects which fall within the purview of the Union Government, the subjects which fall within the purview of the State Governments and the subjects which fall within the purview of the concurrent list. The proviso also deals with the representation of States in Parliament and also the provisions of article 368. If there is any constitutional amendment which falls within the purview of the proviso to article 368, then ratification by one-half of the State Legislatures by resolution to that effect is very necessary before a Bill can be presented to the President for assent. The Parliament has passed the twenty-second amendment to the Constitution as required by article 368.

This amendment seeks to introduce a new article to the Constitution, namely, article 244 A. This article 244 A seeks to confer power on the Parliament to set up an autonomons State within the State of Assam by law. As the twenty-second amendment to the Constitution attracts article 368 of the Constitution, ratification of this Hon. House has become necessary. Therefore, I move that this House do ratify the Constitution (Twenty-Second Amendment) Bill, 1969, as passed by the two Houses of Parliament.

ಶ್ರೀ ಎಂ. ನಾಗಪ್ಪ.—ಮಾನ್ಯ ಅಧ್ಯಕ್ಷರೇ, ಈಗ ನಭೆಯ ಮುಂದೆ ಏನು ರಾಜ್ಯಾಂಗದ 22 ನೆಯ ತಿದ್ದುಪಡಿ ಘಟನೆಯೊಂದು ಬಂದಿದೆ, ಇದು ನಮ್ಮ ರಾಜಕೀಯದಮೇಲೆ ಒಂದು ಹೊಸ ಪರಿಣಾಮವನ್ನು ಬೀರುತ್ತದೆಂಬುದನ್ನು ನಾನು ಒತ್ತಿಹೇಳುತ್ತೇನೆ. ಈ ದಿವಸ ಅ ಅಸ್ಸಾಂ ಎಂಬ ಒಂದು ಸ್ಟೇಟ್ ಏನಿದೆ ಅದು ಸಾಮಾನ್ಯವಾಗಿ ಒಂದು ಗುಡ್ಡಗಾಡುಗಳಿಂದ ಕೂಡಿದ ರಾಜ್ಯವಾಗಿದೆ. ಆ ಅಸ್ಸಾಂ ರಾಜ್ಯವನ್ನು ಗ್ಯಾರೊ ಹಿಲ್ಸ್ ಯುನೈಟೆಡ್ ಖಾಸಿ ಅಂಡ್ ಜೈಂತ್ಯ ಹಿಲ್ಸ್, ದಿ ಯುನೈಟೆಡ್ ಮಿಕೀರ್ ಅಂಡ್ ನಾರ್ತ್ ಕಾಚಾರ್ ಹಿಲ್ಸ್ ಅಂಡ್ ಮಿಜೋ ಹಿಲ್ಸ್

ಇತ್ಯಾದಿ ಪ್ರದೇಶಗಳನ್ನು ಒಳಗೊಂಡಿದೆ. ಇವುಗಳನ್ನು ಒಂದೊಂದು ಜಿಲ್ಲೆಯೆಂದು ನಾವು ಇಟ್ಟು ಕೊಳ್ಳಬಹುದು. ಈ ತಿದ್ದುಪಡಿಯ ಮೂಲಉದ್ದೇಶ ಏನೆಂದರೆ ಆ ಅನ್ಯಾಂ ರಾಜ್ಯದೊಳಗೆ ಒಂದು ಮರಿ ರಾಜ್ಯವನ್ನು ಮಾಡಿ ಅಲ್ಲಿ ಒಂದು ಮರಿ ಅಸಂಬ್ಲಿಯನ್ನು ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂಬುದು. ಈ ತಿದ್ದುಪಡಿಯ ಪ್ರಕಾರ ಗರಾವ್ ಹಿಲ್ಸ್ ಯುನೈಟೆಡ್ ಖಾಸಿ ಅಂಡ್ ಜಂಟೋಹಿಲ್ಸ್ ಜಿಲ್ಲೆಗಳಿಗೆ ಒಂದು ಪ್ರತ್ಯೇಕ ಅಸೆಂಬ್ಲಿಯನ್ನೂ ಮತ್ತು ಒಂದು ಸಣ್ಣ ಕ್ಯಾಬಿನೆಟ್ಟನ್ನೂ ಮಾಡಬಹುದು. ನಮ್ಮ ಮೈಸೂರು ರಾಜ್ಯದಲ್ಲಿಯೂ ಈ ದಿವಸ ಹಳೇ ಮೈಸೂರನ್ನೂ ಹೊಸ ಮೈಸೂರನ್ನೂ ಬೇರೆ ಬೇರೆ ಮಾಡಬೇಕೆಂಬ ಕೂಗು ಕೇಳಿಬರುತ್ತಿದೆ. ಅತ್ತ ಮಹಾರಾಷ್ಟ್ರದಲ್ಲಿ ಕೂಡ ವಿದರ್ಭ ಮತ್ತು ಮರಾಟವಾಡಗಳೆಂದು ರಾಜ್ಯವನ್ನು ವಿಭಜನೆ ಮಾಡಬೇಕೆಂಬ ಕೂಗೆದ್ದಿದೆ. ಆ ಕೇರಳದಲ್ಲಿ ಆ ಮಳಪುರಂ ಜಿಲ್ಲೆಯನ್ನು ಒಂದು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಬೇಕೆಂಬ ಕೂಗೆದ್ದು ಅಲ್ಲಿ ಗಲಾಟೆಗಳು ನಡೆಯುತ್ತಿವೆ. ಉತ್ತರಪ್ರದೇಶ ಅಲ್ಲಲ್ಲಿ ಆ ಡಾರ್ಜಲಿಂಗನ್ನು ಬೇರೆ ಒಂದು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಬೇಕೆಂಬ ಕೂಗಿದೆ. ಆಂಧ್ರದಲ್ಲಿ ಆ ತೆಲಂಗಣ್ಣ ಬಗ್ಗೆ ಎದ್ದಿದ್ದರ ಕೂಗನ್ನು ಎಲ್ಲರೂ ಕೇಳಿದ್ದೇವೆ. ಅಲ್ಲಿ ಘೋರ ಹೋರಾಟವೇ ನಡೆಯುತ್ತಿದೆ. ಅಲ್ಲಿ ದಿನಬೆಳಗಾದರೆ ಫೈರಿಂಗ್ ಆಗುತ್ತಿದೆ. ಭಾರತದಲ್ಲಿ ಇಂಥ ಒಂದು ನಂದಿಗ್ಗ ಪರಿಸ್ಥಿತಿ ಇರುವಾಗ ಇದನ್ನು ಒಂದು ರಾಜಕೀಯ ದೃಷ್ಟಿಯಿಂದಲೋ ಅಥವಾ ಇನ್ನಾವ ದೃಷ್ಟಿಯಿಂದಲೋ ಇದನ್ನು ತಂದಿದ್ದಾರೆ. ಇದರ ಪರಿಣಾಮವಾಗಿ ನಾಳೆ ನಮ್ಮ ರಾಜ್ಯದಲ್ಲಿ ಒಂದೊಂದು ಜಿಲ್ಲೆಗೂ ಒಂದೊಂದು ಅಸೆಂಬ್ಲಿ ಬೇಕೆಂದು ಕೇಳತಕ್ಕ ಪರಿಸ್ಥಿತಿಯುಂಟಾಗಬಹುದು. ಆದರೆ ನಾವೀದಿವಸ ಇಲ್ಲಿಗೆ ಪೀಪಲ್ಸ್ ರೆಪ್ರೆಸೆಂಟೇಷನ್ ಆಕ್ಟಿನ ಪ್ರಕಾರ ಆರಿಸಿ ಬಂದಿದ್ದೇವೆ. ಈ ತಿದ್ದುಪಡಿಯಿಂದ ನಾಳೆ ಡುಯಲ್ ಕ್ಯಾಪಾಸಿಟಿಯಲ್ಲಿ ಎರಡೂ ಕಡೆಗಳಲ್ಲಿ ಮೆಂಬರುಗಳಾಗಿರುವುದಕ್ಕೆ ಅವಕಾಶ ವಾಗುತ್ತದೆ. ಆಗ ಇದರಿಂದ ಬಹಳ ಮೋಸವಾಗುತ್ತದೆ. ಬೇರೆ ಯಾವ ದೇಶದಲ್ಲೂ ಕೇಗಿಲ್ಲ. ಇಂಥ ಒಂದು ತಿದ್ದುಪಡಿಯಿಂದ ದೇಶದಲ್ಲಿ ಅನೈಕಮತ್ಯ ತಲೆಯೆತ್ತುವುದಕ್ಕೆ ತುಂಬಾ ಅನುಕೂಲ ವಾಗುವುದು. ನಮ್ಮ ರಾಷ್ಟ್ರದ ಯೂನಿಟಿ ಹಾಳಾಗಿ ಇದರಿಂದ ಮುಂದೆ ದೊಡ್ಡ ಹಾನಿ ರಾಷ್ಟ್ರಕ್ಕೆ ಸಂಭವಿಸಬಹುದು. ಈ ಹಿಂದೆ ಭಾರತ ಸರ್ಕಾರದವರು ಎರಡು ರೀಜನಲ್ ಕಮಿಟಿಗಳನ್ನು ಮಾಡಿದ್ದರೂ ಅವಕ್ಕೆ ಸಾಕಷ್ಟು ಅಧಿಕಾರವಿಲ್ಲದೆ ಅಲ್ಲಿ ಪಂಜಾಬು ಹರಿಯಾಣ ಎಂದು ಒಂದನ್ನು ಎರಡು ಪ್ರಾಂತ್ಯಗಳನ್ನಾಗಿ ಮಾಡಿದರು. ಅದಾದಮೇಲೆ ಈಗ ತೆಲಂಗಣ ಸಮಸ್ಯೆ ಎದ್ದಿದೆ. ಸರ್ಕಾರದವರು ಈಗಲಾದರೂ ಪಾಸ್ಟ್ ಪಾಂಶಗಳನ್ನು ಅರಿತುಕೊಂಡು ಅವರು ಏನು ಆ ಒಂದು ರೀಜನರ್ ಕಮಿಟಿಗಳನ್ನು ಮಾಡಿದ್ದಾರೆ, ಅವುಗಳಿಗೆ ಸರಿಯಾಗಿ ಅಧಿಕಾರವನ್ನು ನೀಡಿ ಕೆಲಸ ಮಾಡಿದರೆ ಉತ್ತಮವೆಂಬುದಾಗಿ ನನಗನಿಸುತ್ತಿದೆ. ಈ ದಿವಸ ರಾಜ್ಯಾಂಗದ 368ನೆ ಆರ್ಟಿಕಲ್ಲನ್ನು ತಿದ್ದುಪಡಿ ಮಾಡಬೇಕಾದರೆ ಅದಕ್ಕೆ ಮೂರನೆ ಎರಡರಷ್ಟು ಮೈಜಾರಿಟಿ ಬರಬೇಕು. ಅದಕ್ಕಾಗಿ ಈಗ ಅವರು ಅದಕ್ಕೆ ರ್ಯಾಟಿಫಿಕೇಷನ್ ಕೇಳಿದ್ದಾರೆ. ಆಯಾಯ ರಾಜ್ಯಗಳವರು ಅವರ ಅಭಿಪ್ರಾಯವನ್ನು ತಿಳಿಸಬಹುದು. ಇದನ್ನು ಒಪ್ಪಲೇಬೇಕೆಂಬ ಕಡ್ಡಾಯವೇನಿಲ್ಲ. ಇದಕ್ಕೆ ಒಪ್ಪಿಕೊಂಡರೆ ಈ ರಾಜ್ಯ ಕೇಂದ್ರದ ಒತ್ತಾಯಕ್ಕೆ ಬಗ್ಗುತ್ತಿದೆ ಎಂದು ಅರ್ಥವಾಗುತ್ತದೆ. ಅದಕ್ಕೆ ಅವಕಾಶ ಕೊಡಬಾರದು ಅದ್ದರಿಂದ ಇದಕ್ಕೆ ಒಪ್ಪಿಗೆಯನ್ನು ಕೊಡಬಾರದೆಂದು ನಾನು ಎಲ್ಲರನ್ನೂ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇದಕ್ಕೆ ಯಾವುದಾದರೂ ಹತ್ತು ರಾಜ್ಯಗಳ ಅಸೆಂಟ್ ಸಿಕ್ಕದಿದ್ದರೆ ಇದು ಪಾಸಾಗುವುದಿಲ್ಲ. ಆದ್ದರಿಂದ ಇದನ್ನು ರ್ಯಾಟಿಫೈ ಮಾಡಬಾರದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri H. SIDDAVEERAPPA.— Sir, I would like to add only a few words and I would not take much time.

Sir, this Bill has been referred to this House for its ratification and its opinion will be placed before the Parliament under the Constitution. According to the provisions of the Constitution 50 per cent of the States have to ratify if this Bill has to become law under the Constitution. Now I am not concerned as to whether it is legally correct to introduce it here or not. It is all perfectly constitutional because there are certain provisions for that, but as regards the spirit of the provision I do not know whether the Cabinet has considered and bestowed any thought to it or whether it has brought it here *makkika makki* without examining the provisions of it. Let us examine what happens. All

(SRI H. SIDDAVEERAPPA)

those things are already spoken of by Members of Parliament in the Lok Sabha. This is what Sri Nambiar of Tiruchirapalli has said in Lok Sabha :

> "We have already supported the spirit of the Bill but we are unable to agree to the Bill as such because of the grounds mentioned in my dissenting note to the report of the Joint Committee. We do not agree to what is known as a sub-State or the concept of an autonomous State which is new to the Constitution of India. If you go through the whole Constitution you will not find the words 'autonomous State' anywhere. They are introducing it today as a new term. If it is an autonomous State, it is autonomous. But according to the provisions of the Bill it is not autonomous at all; it is something like a sub-State, a State within a State with no powers whatseover. I may be permitted to say that it is an exaggerated panchayat board or district board."

Certain Members of Parliament had envisaged and prophesied some of the difficulties that we are faced with, today: This is what Sri Shri Chand Goyal had said:

> "This Bill if passed, is certainly likely to open up the flood gates of similar demands; may be, from Vidharbha may be from the Kumaon Hills of Uttar Pradesh, may be from Telengana. We are already facing a demand in Kerala for an independent Muslim majority district of Mallapuram. If this Bill is passed, it is only going to strengthen the divisive forces which are raising their ugly heads today."

5-00 P. M.

This is the point I would like to bring home. Why should we ratify, I am asking. This is a matter in which we are vitally interested, unless it be, we are prepared to agree for the spirit or for the ideology of this measure. I personally feel we have had enough of it in our country Unfortunately, the divisive, forces are strong ; they are already becoming more vocal and fissiparous. If you feel that small States will do the work better and more efficiently as in the case of United States of America, where with half the population they have nearly 50 States, it is all right. But, here the concept is different. The fathers of the Indian Constitution never wanted such things to come up. If you see the entire tenor of the Constitution, then the concentration was to maintain the integrity and the indivisibility of India. Now, if we introduce this Bill, tomorrow it will be quoted as an example by other States, and when it is quoted you cannot have any choice. Sri Y. B Chavan, the Union Home Minister has stated that they do not want to introduce these things ; it means the dissolution of various

States. It was stated that in view of the special circumstances in Assam and in view of the historical reasons in the Garo Hills and Naga Hills that they have introduced it. But, we are not going to be lead by this. This need not be quoted as a precedent. That is what he said. In Mysore, many areas may be having their own problems and arguments may be stretched and advanced. Especially in the South, Telangana is already in the melting pot. When such is the position, I would appeal and request the hon. Mover of the Resolution to give the lead, as leader of the Ruling Party, especially the Congress Party, as it is today, I do not know what it will be after 20 years and consider and ponder over it. Let them take it back to their Party and examine, and if they feel that it is in the interest of the country in general and the State of Mysore in particular then let us take a decision, for which we should not have to regret subsequently.

With these few words, I oppose this being ratified.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಭಾಪತಿಯವರೇ, ಈ ಒಂದು ಶಾಸನಾಂಗಕೆ ತೆಗೆದುಕೊಂಡು ಬಂದಂತಹ ತಿದ್ದುಪಡಿಯ ಬಗ್ಗೆ ಈಗಾಗಲೇ ನಮ್ಮ ಮಾನ್ಯ ಹಿರಿಯ ಮಿತ್ರ ರಾದಂತಹ ಶ್ರೀ ಎಚ್. ಸಿದ್ದವೀರಪ್ಪನವರು ಮಾತನಾಡಿ ಅದರ ಬಗ್ಗೆ ಸ್ವಲ್ಪ ಬೆಳಕನ್ನು ಚೆಲ್ಲಿದ್ದಾರೆ. ನಾನೂ ಅದರ ಬಗ್ಗೆ ಎರಡು ವಿಷಯ ಮಾತನಾಡುತ್ತೇನೆ. ಇದರಲ್ಲಿ ಒಂದು ಮುಖ್ಯವಾದ ಅಂಶ ಏನೆಂದರೆ ಈ ಪ್ರಶ್ನೆ ಏಕೆ ಬಂದಿದೆ, ಎಂದು. ಇವತ್ತಿನ ದಿವಸ ನಮ್ಮ ದೇಶದಲ್ಲಿ ಮುಖ್ಯವಾಗಿ ಈ ಅಮೆಂಡ್‌ಮೆಂಟ್ ಬಿಲ್ಲನ್ನು ಪಾಸು ಮಾಡುವಾಗ ನಾವು ಅಸ್ಸಾಮಿನ ಬಗ್ಗೆ ಮಾತ್ರ ಮಾತ ನಾಡುತ್ತಿದ್ದೇವೆ. ಅಸ್ಸಾಮಿನಲ್ಲಿ ಗ್ಯಾರೊ ಹಿರ್ಸ್, ಮಿಜೋ ಹಿರ್ಸ್ ಹಾಗೂ ಮತ್ತಿತರ ಗುಡ್ಡ ಗಾಡು ಜನರಿಗೆ ನ್ಯಾಯಂ ಆಡಳಿತ ಕೊಡಬೇಕೆನ್ನುವ ದೃಷ್ಟಿಯಿಂದ, ಅಲ್ಲಿಯ ಜನರು ಕೇಳುತ್ತಿದ್ದಾರೆ, ಅವರಿಗೆ ಪೂರ್ಣ ಅಧಿಕಾರ ಕೊಡಬೇಕು. ಮತ್ತು ಆರ್ಥಿಕವಾಗಿ, ಸಮಾಜಿಕವಾಗಿ, ಮತ್ತು ಸಾಂಸ್ಕೃತಿಕವಾಗಿ ಅವರ ಏಷ್ಟು ಬೆಳೆವಣಿಗೆ ಆಗಬೇಕಾಗಿತ್ತೋ ಅದು ಆಗಲಿಲ್ಲ, ಆದ್ದರಿಂದ ಸರ್ಕಾರದ ನೀತಿ ಬದಲಾವಣೆ ಮಾಡಬೇಕೆಂದು ಅವರು ಒತ್ತಾಯ ತಂದರು, ಮತ್ತು ಅವರು ಶಸ್ತ್ರಾಸ್ತ್ರಗಳಿಂದ ಹೋರಾಟ ಕೂಡ ಮಾಡಿದರು. ಈ ರೀತಿ ಹೋರಾಟ ಮಾಡಿ, ಶಸ್ತ್ರಾಸ್ತ್ರ ಗಳಿಂದ ಕಾದಾಡಿ, ಈ ಒಂದು ಬಿಲ್ಲನ್ನು ತರುವಂತೆ ಮಾಡಿದ್ದಾರೆ. ಇವತ್ತಿನ ದಿವಸ ನ್ಯಾಯಂ ನಿರ್ಣಯಾಧಿಕಾರವನ್ನು ಕೊಡುವುದು ಅತಿ ಮುಖ್ಯ. ಹಾಗೆ ಕೊಡುವ ಹಾಗಿದ್ದರೆ ಪೂರ್ತಿಯಾಗಿ ಕೊಡಬೇಕು. ನನ್ನ ಅಭಿಪ್ರಾಯದಲ್ಲಿ, ಆ ರೀತಿ ಕೊಟ್ಟಿದ್ದಾರೆಯೋ ಎಂದು ನೋಡಿದರೆ, ಹಾಗೆ ಕೊಟ್ಟಿಲ್ಲ. ಒಂದು ರಾಜ್ಯದೊಳಗೆ ಇನ್ನೊಂದು ರಾಜ್ಯವನ್ನು ಈ ಮಸೂದೆಯಲ್ಲಿ ರಚನೆ ಮಾಡಿ ದ್ದಾರೆ. ಈ ರೀತಿ ಮಾಡಿದರೆ ಇನ್ನೂ ಕಿತ್ತಾಟ ಹೆಚ್ಚಾಗುತ್ತದೆ. ಇದರಿಂದ ಅನುಕೂಲವಾಗಿದೆ. ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಹಕ್ಕುಗಳನ್ನು ಪಡೆಯಬೇಕಾದರೆ ನಿಜವಾಗಿಯೂ ಅಧಿಕಾರ ಕೊಡಬೇಕಾಗುತ್ತದೆ, ಅದನ್ನು ಕೊಟ್ಟಿಲ್ಲ. ಆ-ದೃಷ್ಟಿಯಿಂದ ಇದನ್ನು ನಾನು ವಿರೋಧಿಸಬೇಕಾಗುತ್ತದೆ.

ಎರಡನೆಯದು ಏನೆಂದರೆ, ಒಂದು ರಾಜ್ಯದೊಳಗೆ ಇನ್ನೊಂದು ರಾಜ್ಯವು ಹುಟ್ಟಿಕೊಳ್ಳು ವುದಕ್ಕೆ ಅವಕಾಶವಾಗುತ್ತದೆ. ಇದೇ ರೀತಿ ಬೇರೆ ಕಡೆಗಳಲ್ಲೂ ಕೂಡ ನಾನಾ ರೀತಿಯ ರೀಜನಲ್ ಇಂಬ್ಯಾಲನ್ಸ್‌ಸ್ ಇವೆ. ಒಂದು ಕಡೆ ಕೈಗಾರಿಕೆ ಇದೆ, ಇನ್ನೊಂದು ಕಡೆ ಇಲ್ಲ. ಇತರ ವಿಷಯ ಗಳಲ್ಲೂ ಕಾಂಗ್ರೆಸ್ ಸರಕಾರದ ನೀತಿಯಿಂದ ಅನೇಕ ಭಿನ್ನಾಭಿಪ್ರಾಯಗಳು ತಲೆ ಎತ್ತುತ್ತಿವೆ. ಆದ್ದರಿಂದಲೇ ಎರಡು ರಾಜ್ಯಗಳು ಆಗಬೇಕೆಂದು ಕೇಳಿಕೆಗಳು ಬರುತ್ತಿವೆ. ಉದಾಹರಣೆಗೆ ತೆಲಂಗಾಣದ ಸಮಸ್ಯೆ. ಮೈಸೂರನ್ನು ಎರಡು ರಾಜ್ಯ ಆಗಬೇಕೆಂಬುದು ಅವರು ಕೂಡ ಬೇರೆ ರಾಜ್ಯವಾಗಬೇಕೆಂದು ಕೇಳುತ್ತಿದ್ದಾರೆ. ಆದ್ದರಿಂದ ಈ ರೀತಿ ವಿಭಜನೆಯಾಗುವುದಕ್ಕೆ ಹೆಚ್ಚು ಅವಕಾಶಗಳು ದೊರೆಯುತ್ತದೆ. ಮಿಜೋ, ಗ್ಯಾರೊ, ಗುಡ್ಡಗಾಡಿನ ಜನರು ಕೇಳುತ್ತಿರುವ ಹಕ್ಕುಗಳನ್ನೂ ಇವರು ಸರಿಯಾಗಿ ಕೊಡದಿರುವುದರಿಂದ ಇದು ಪರಿಪೂರ್ಣವಾದ ಬಿಲ್ಲಲ್ಲ. ಇದು ಯೋಚನೆ ಮಾಡಬೇಕಾದಂತಹ ಅಂಶ. ಇದರಿಂದಾಗಿ ನಮಗೂ ಧಕ್ಕೆ ಬರುತ್ತದೆ. ಆದ್ದರಿಂದ ಇದನ್ನು ಗಾಢವಾಗಿ ಯೋಚನೆ ಮಾಡಬೇಕೆಂದು ಮಾನ್ಯ ಮುಂತ್ರಿಯವರಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬೋಳ ರಘುರಾಮ ಶೆಟ್ಟಿ (ಕಾರ್ಕಳ).—ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಮಂತ್ರಿಯವರು ನಮ್ಮ ರಾಜ್ಯಾಂಗ ಘಟನೆಗೆ 22ನೆಯ ತಿದ್ದುಪಡಿಯನ್ನು ಈ ಸಭೆ ಒಪ್ಪಬೇಕೆಂದು ಇಲ್ಲಿ ಮಂಡಿಸಿದ್ದಾರೆ. ಮಂಡಿಸಿದಾಗಲೂ, ಈ ತಿದ್ದುಪಡಿ ಏಕೆ ಅಗತ್ಯ ಮತ್ತು ಒಪ್ಪುವಂತಹ ಅವಶ್ಯಕತೆ ಏನು, ಎಂದು ಹೇಳಲಿಲ್ಲ. ನಾನಾದರೂ ತಿಳಿದುಕೊಳ್ಳುತ್ತೇನೆ, ಅವರಿಗಾದರೂ ಕೂಡ ಇದಕ್ಕೆ ಒಪ್ಪಿಗೆ ಕೊಡುವ ಸಮಾಧಾನವಿಲ್ಲವೆಂದು. ಅವರು ಕಾನೂನು ಪ್ರಕಾರ ಪಾರ್ಲಮೆಂಟಿನಲ್ಲಿ ಏನು ಮಾಡಬೇಕಾಯಿತು, ಏನು ಮಾಡಿದೆ, ಬೇರೆ ಬೇರೆ ರಾಜ್ಯದ ಸಭೆಗಳು ಏನು ಮಾಡಬೇಕು, ಅದರ ಪ್ರಕಾರ ಈ ಬಿಲ್ಲನ್ನು ಈ ಸಭೆಯು ಮುಂದಿಟ್ಟಿದ್ದೇನೆಂದು ಹೇಳಿದ್ದಾರೆ. ಆದರೆ ಸಮರ್ಥನೆ ಮಾಡಿಲ್ಲ. ಮುಖ್ಯವಾಗಿ ಘಟನೆಯನ್ನು ತಯಾರು ಮಾಡುವಾಗ ನಾವು ಎಲ್ಲಾ ಜನರಿಗೆ ಸಮಾನತೆಯ ಹಕ್ಕನ್ನು ಕೊಟ್ಟಿದ್ದೇವೆ. ಆದ್ದರಿಂದ ಇವತ್ತಿನ ದಿವಸ ನಮ್ಮ ದೇಶದ ಯಾವ ಜನರಿಗೂ ಕೂಡ ಈ ಒಂದು ಸಮಾನತೆಯ ಹಕ್ಕು ಇರುವಾಗ, ಅವರ ಕೆಲವು ಅವಶ್ಯಕತೆಗೋಸ್ಕರ ಅವರಿಗೆ ಒಂದು ವಿಶಿಷ್ಟ ಹಕ್ಕು ಕೊಡುವುದು ನಮ್ಮ ಘಟನೆಯ ಮೂಲಭೂತ ತತ್ವಗಳಿಗೆ ವಿರುದ್ಧವಾಗುತ್ತದೆ. ನಮ್ಮ ದೇಶದ ಘಟನೆ ಆಗುವಾಗ ಕೆಲವು ರಾಜ್ಯಗಳು ಇದ್ದವು. ಆದರೆ, ಕೆಲವು ಜನರನ್ನು ಸಂತೈಸುವುದಕ್ಕೋಸ್ಕರ ಈ ಒಂದು ಭಾಷಾವಾರು ಪ್ರಾಂತ್ಯಗಳನ್ನು ರಚನೆ ಮಾಡಿದರು. ಅದರಿಂದ ನಮ್ಮ ದೇಶದ ಒಗ್ಗಟ್ಟಿಗೆ, ಬಳವಣಿಗೆಗೆ ಆರ್ಥಿಕ ಅಭಿವೃದ್ಧಿಗೆ ಬಹಳ ಗಂಡಾಂತರವಾಗಿದೆ ಎಂದು ಹಲವು ನುರಿತ ಅನುಭವಿಗಳು ಹೇಳುತ್ತಿದ್ದಾರೆ. ಮಾತ್ರವಲ್ಲದೆ. ಅನೇಕ ಮುತ್ಸದ್ದಿಗಳು ಅದನ್ನು ಬದಲಾವಣೆ ಮಾಡಬೇಕು, ಮತ್ತು ನಮ್ಮ ರಾಜ್ಯಗಳು ಕೇವಲ ಆಡಳಿತ ದೃಷ್ಟಿಯಿಂದ ಇರಬೇಕೆಂಬ ಹೊಸ ಅಭಿಪ್ರಾಯಗಳನ್ನು ಕೊಡುತ್ತಿದ್ದಾರೆ. ಈ ರೀತಿ ಇವತ್ತು ಮಾಡುತ್ತಿರುವುದು ನಮ್ಮ ದೇಶದ ಹಿತದೃಷ್ಟಿಯಿಂದ, ಸರಿಯಲ್ಲ. ಕೆಲವು ಗುಡ್ಡಗಾಡು ಜನರಿಗೆ ಪ್ರತ್ಯೇಕವಾಗಿ ಆಟಾನಮಸ್ ಸ್ಟೇಟ್ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಹೋಗಿದ್ದಾರೆ. ಇದು ನಿಜವಾಗಿಯೂ ನಮ್ಮ ದೇಶದ ಸಂರಕ್ಷಣೆಯನ್ನು ಮಾಡುವಂತದಲ್ಲ; ಇದು ನಮ್ಮ ಜನತೆಯ ಒಗ್ಗಟ್ಟನ್ನು ಮಾಡುವುದಿಲ್ಲ. ಯಾರೋ ಕೆಲವರು ಗಲಾಟೆ ಮಾಡಿದ್ದಾರೆ, ಕೆಲವರು ರಾಜಕೀಯ ದೃಷ್ಟಿಯಿಂದ ಚಳವಳಿ ಮಾಡಿದ್ದಾರೆ, ಅಂತವರನ್ನು ಸಂತೈಸುವುದಕ್ಕೋಸ್ಕರ ಇದನ್ನು ತಂದಿದ್ದಾರೆ. ಈ ರೀತಿ ಮಾಡುವಂತದ್ದು ನಮ್ಮ ದೇಶದ ಉನ್ನತಿಗೆ ಬಹಳ ಕೆಡುಕನ್ನ ತರುವಂತದ್ದಾಗಿದೆ. ಆದ್ದರಿಂದ ಈ ಸಭೆ ಅದಕ್ಕೆ ಮನ್ನಣೆ ಕೊಡುವಂತದು ಸರಿಯಲ್ಲ. ನಮ್ಮ ರಾಜ್ಯದಲ್ಲೂ ಹಳೆಯ ಮೈಸೂರು ಬೇರೆ ಆಗಬೇಕೆಂದು ಕೂಗು ಎದ್ದಿದೆ. ಇದಕ್ಕೆ ಒಪ್ಪಿಗೆ ಕೊಟ್ಟರೆ ನಾಳೆ ಆಳುವ ಪಕ್ಷದವರು, ಆ ಸವಾಲು ಬಂದಾಗ ಏನು ಹೇಳುತ್ತಾರೆ?

ಈ ದೃಷ್ಟಿಯಿಂದ ನಮ್ಮಲ್ಲಿಯೂ ಕೂಡ ಬೇರೆ ಬೇರೆ ಗುಂಪುಗಾರಿಕೆ ಇರುವುದರಿಂದ ನಮ್ಮ ರಾಜ್ಯವನ್ನು ಒಡೆಯುವಂತಹ ಕಾನೂನಿಗೆ, ನೀತಿಗೆ ಈ ಸಭೆ ಬೆಂಬಲವನ್ನು ಕೊಟ್ಟಹಾಗೆ ಆಗುತ್ತದೆ. ಆದ್ದರಿಂದ ನಾನು ಮಾನ್ಯ ಕಾನೂನು ಶಾಖೆಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ, ಈಗ ಅವರು ಏನು ತಿದ್ದುಪಡಿಯನ್ನು ಮಂಡಿಸಿದ್ದಾರೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು, ಈ ಮಾನ್ಯ ಸಭೆಯವರು ಈ ತಿದ್ದುಪಡಿಗೆ ಮನ್ನಣೆ ಕೊಡಬಾರದು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ, ಈಗ ಈ ಸಭೆಯಮುಂದೆ ತಂದಿರತಕ್ಕ ರಾಜ್ಯಾಂಗದ ಇಪ್ಪತ್ತೆರಡನೆಯ ತಿದ್ದುಪಡಿ ವಿಧೇಯಕ ಏನಿದೆ ಇದನ್ನು ನಾನು ಸ್ವಾಗತಿಸುತ್ತೇನೆ. ಸಾಮಾನ್ಯವಾಗಿ ರಾಜ್ಯಾಂಗಕ್ಕೆ ಪದೇ ಪದೇ ತಿದ್ದುಪಡಿ ತರತಕ್ಕಂಥಾದ್ದು ಒಳ್ಳೆಯದಲ್ಲ ಎಂದು ನಾನು ತಿಳಿದುಕೊಂಡಿದ್ದರೂ ಕೂಡ ಈಗ ಈ ಸಭೆಯಮುಂದೆ ತಂದಿರತಕ್ಕ ತಿದ್ದುಪಡಿಗೆ ಈ ಸಭೆ ಒಪ್ಪಿಗೆ ನೀಡಿ ತನ್ನ ಅನುಮತಿಯನ್ನು ಕೊಡುತ್ತದೆ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. 1969ನೇ ಏಪ್ರಿಲ್ ತಿಂಗಳಿನಲ್ಲಿ ಲೋಕಸಭೆಯಲ್ಲಿ ಈ ತಿದ್ದುಪಡಿ ವಿಧೇಯಕದ ಮೇಲೆ ಆದಂತಹ ಚರ್ಚೆಯ ಪರಿಪಾಠವನ್ನು ನಾನು ಅವಲೋಕಿಸಿ ನೋಡಿದ್ದೇನೆ. ರಾಜ್ಯಾಂಗ ಜಾರಿಗೆ ಬಂದನಂತರ ಎಲ್ಲರಿಗೂ ಮೆಚ್ಚಿಗೆಯಾದ ತಿದ್ದುಪಡಿ ಇದೊಂದೇ. ಒಳ್ಳೆಯ ಉದ್ದೇಶಕ್ಕೋಸ್ಕರ ಈ ತಿದ್ದುಪಡಿಯನ್ನು ತಂದಿದ್ದಾರೆ ಎನ್ನತಕ್ಕದ್ದು ನನ್ನ ಅಭಿಪ್ರಾಯ. ನಮ್ಮ ರಾಷ್ಟ್ರದಲ್ಲಿ ಈಗ ಇರತಕ್ಕಂಥಾ ರಾಜ್ಯಗಳ ಸಂಖ್ಯೆಯನ್ನು ಹೆಚ್ಚು ಮಾಡಕೂಡದು ಎಂದು ಪ್ರತಿಯೊಬ್ಬರೂ ಹೇಳಿದ್ದಾರೆ. ಇಲ್ಲಿ ಮಾತನಾಡುವಾಗ ಕೆಲವು ಮಾನ್ಯ ಸ್ನೇಹಿತರು ನಮ್ಮ ರಾಜ್ಯದಲ್ಲಿರತಕ್ಕ ಪರಿಸ್ಥಿತಿಯ ಬಗ್ಗೆ ಮತ್ತು ತೆಲಂಗಾಣ ಚಳುವಳಿಯ ಬಗ್ಗೆ ಒಂದು ಪಾಸಿಂಗ್ ರಿಮಾರ್ಕ್ಸ್ ಮಾಡಿದ್ದಾರೆ. ಈ ತಿದ್ದುಪಡಿ ವಿಧೇಯಕಕ್ಕೆ ಸಂಬಂಧಪಟ್ಟ ಹಾಗೆ ಕೇಂದ್ರ ಸರ್ಕಾರದ ಗೃಹ ಮಂತ್ರಿಗಳು ಏನು ಹೇಳಿದ್ದಾರೆಂಬುದನ್ನೆಲ್ಲಾ ನಾನು ಓದಿದ್ದೇನೆ. ಅಸ್ಸಾಮಿನ ಗುಡ್ಡಗಾಡಿನ ಪ್ರದೇಶದ ಜಿಲ್ಲೆಗಳನ್ನು ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಉತ್ತಮಪಡಿಸುವುದಕ್ಕೆ ಪ್ರತ್ಯೇಕ ರಾಜ್ಯವನ್ನು

ಮಾಡದೇ ಬೇರೆ ಮಾರ್ಗವಿಲ್ಲ ಎಂಬುದನ್ನು ಮನಗಂಡು ಈ ಒಂದು ತೀರ್ಮಾನವನ್ನು ತೆಗೆದು ಕೊಳ್ಳುವುದಾದರೆ ಅದು ಚೆನ್ನಾಗಿ ನಡೆಯುತ್ತದೆ ಎಂದು ಎಲ್ಲರೂ ಇದನ್ನು ಒಪ್ಪಿ ಮಾಡಿದ್ದಾರೆ. ಹಿಲ್ಸ್ ಏರಿಯಾದಲ್ಲಿರತಕ್ಕ ಜನತೆ ತಮ್ಮ ಉದ್ಧಾರವನ್ನು ಮಾಡಿಕೊಳ್ಳುತ್ತಾರೆ, ಆ ಬಗ್ಗೆ ಅವರು ಹೆಚ್ಚಿನ ಶ್ರಮವನ್ನು ವಹಿಸುತ್ತಾರೆ ಎಂದು ಅವರು ಹೇಳುವಂಥಾದ್ದು ತಪ್ಪಲ್ಲ ಎಂಬುದನ್ನು ಮನಗಂಡು ಆ ಒಂದು ಆಧಾರದ ಮೇಲೆ ಅಸ್ಸಾಂ ರಾಜ್ಯದಲ್ಲಿ ಗಿರಿ ಪ್ರದೇಶ ಜಿಲ್ಲೆಗಳ ರಾಜ್ಯ ರಚನೆಗೆ ಅವಕಾಶ ಮಾಡುವುದಕ್ಕಾಗಿ ಕೇಂದ್ರ ಸರ್ಕಾರದವರು ಈ ಒಂದು ತಿದ್ದುಪಡಿಯನ್ನು ಮಾಡಿದ್ದಾರೆ. ಎಲ್ಲರೂ ಮೆಚ್ಚತಕ್ಕಂಥ ಒಂದು ಕಾರ್ಯವನ್ನು ಅವರು ಮಾಡಿದ್ದಾರೆ. ಈ ದೃಷ್ಟಿಯಿಂದ ಇದನ್ನು ಈ ಸಭೆಯ ಮಾನ್ಯ ಸದಸ್ಯರು ಒಪ್ಪಬೇಕು ಎಂದು ನಾನು ಹೇಳುತ್ತೇನೆ. ಈಗಾಗಲೇ ನಮ್ಮ ರಾಜ್ಯದಲ್ಲಿಯೂ ಕೂಡ ಅದೇ ರೀತಿಯ ಕೆಲವಾರು ಭಾವನೆಗಳು ರೂಪಿತ ವಾಗಿವೆ. ಈ ಬಗ್ಗೆ ಈಗಾಗಲೇ ನಮ್ಮ ಸ್ನೇಹಿತರು ಕೆಲವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅದು ಸರಿಯೋ ತಪ್ಪೋ ಆ ಬಗ್ಗೆ ಈಗ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮೈಸೂರು ರಾಜ್ಯ ಎರಡಾಗಬೇಕು ಎಂದು ನಾನು ರೂಢಿಸಿಕೊಂಡಿಲ್ಲ. ಅಥವಾ ಮೈಸೂರು ರಾಜ್ಯ ಎರಡಾಗಬಾರದು ಎಂಬ ಬಗ್ಗೆಯೂ ನಾನು ರೂಢಿಸಿಕೊಂಡಿಲ್ಲ. ಇಪ್ಪತ್ತು ಏನಾಗಿದೆ ಎಂದರೆ ಕೆಲವಾರು ತಿಂಗಳಿಂದ ನಮ್ಮ ರಾಜ್ಯದಲ್ಲಿಯೂ ಕೂಡ ಪ್ರಾದೇಶಿಕ ಅಸಮತೆಗಳು ಹೆಚ್ಚಿವೆ. ಕೆಲವರು ಹಳೆಯ ಮೈಸೂರಿಗೆ ಅನ್ಯಾಯವಾಗಿದೆ ಎಂದು ಹೇಳುತ್ತಾರೆ. ಇಂಟಿಗ್ರೇಟೆಡ್ ಏರಿಯಾದಲ್ಲಿ ಕೆಲವು ಜಿಲ್ಲೆಗಳಲ್ಲಿ ಅನ್ಯಾಯವಾಗಿದೆ, ತೊಂದರೆಯಾಗಿದೆ ಎಂದು ಕೆಲವರು ಹೇಳುತ್ತಾರೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಆಗಿರುವಷ್ಟು ಅಭಿವೃದ್ಧಿ ಕಾರ್ಯಗಳು ರಾಯಚೂರು ಜಿಲ್ಲೆಯಲ್ಲಿ ಆಗಿಲ್ಲ ಎನ್ನುವಷ್ಟಕ್ಕಂಥ ದೂರು ಇದೆ. ಈ ರೀತಿಯಾಗಿ ಅನೇಕವಿಧವಾಗಿ ಈ ಒಂದು ಚರ್ಚಾಸ್ಪದವಾದ ವಿಷಯ ಪತ್ರಿಕೆಗಳಲ್ಲಿ ಬಂದಿದೆ. ಮತ್ತು ಆಳುವ ಪಕ್ಷದಲ್ಲಿ ಒಳಗೂ ಮತ್ತು ಹೊರಗೂ ಕೂಡ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಪತ್ರಿಕೆಯಲ್ಲಿ ಕೊಟ್ಟಂಥ ಹೇಳಿಕೆಯ ಬಗ್ಗೆ ನಾನು ಪ್ರಾಸಂಗಿಕವಾಗಿ ಒಂದು ಮಾತನ್ನು ಹೇಳುತ್ತೇನೆ. ಮುಖ್ಯ ಮಂತ್ರಿಗಳು ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಮೇಲೆ ಕೆಲವು ಗಂಡಾಂತರಕಾರಿಯಾದ ವ್ಯವಹಾರಗಳು ನಡೆಯುತ್ತಿವೆ.

ಅಧ್ಯಕ್ಷರು.—ಈಗ ಇಲ್ಲಿ ನಡೆಯುತ್ತಿರುವ ಚರ್ಚೆಗೂ, ಮಾನ್ಯ ಸದಸ್ಯರು ಹೇಳುತ್ತಿರುವ ವಿಷಯಕ್ಕೂ ಏನು ಸಂಬಂಧ ಇದೆ ?

ಶ್ರೀ ಎಚ್. ಎನ್. ನಂಜೇಗೌಡ.—ನಾನು ಇದನ್ನು ಏತಕ್ಕೆ ಹೇಳಿದೆ ಎಂದರೆ ಮಾನ್ಯ ಮುಖ್ಯ ಮಂತ್ರಿಗಳು ಈಗ ಎಲ್ಲರೂ ಮೆಚ್ಚತಕ್ಕ ಒಂದು ಕಾರ್ಯವನ್ನು ಮಾಡಬೇಕು. ಪ್ರಾದೇಶಿಕ ಅಸಮತೆಯ ಬಗ್ಗೆ ಪರಿಶೀಲನೆ ಮಾಡಿ ನಿಜಸ್ಥಿತಿಯನ್ನು ತಿಳಿಯಲು ಸರಿಯಾದ ಅಂಕಿ ಅಂಶಗಳನ್ನು ಕೊಡುವುದಿಲ್ಲ ಎನ್ನುವ ಅನುಮಾನ ಬಂದಿದೆ. ಅವರು ಕೊಡುವ ಅಂಕಿ ಅಂಶಗಳು ಸರಿಯಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಈ ದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಸರಿಯಾದ ಅಂಕಿ ಅಂಶಗಳನ್ನು ಕೊಟ್ಟು ಎಲ್ಲರೂ ಮೆಚ್ಚತಕ್ಕಂಥ ಒಂದು ಕಾರ್ಯವನ್ನು ಮಾಡಲಿ ಎಂದು ನಾನು ಸೂಚನೆ ಮಾಡುತ್ತೇನೆ. ಅದಕ್ಕಾಗಿ ಪ್ರಾದೇಶಿಕ ಅಸಮತೆಯ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸಲು ಒಂದು ಜುಡೀಷಿಯಲ್ ಫ್ಯಾಕ್ಟ್ಸ್ ಫೈಂಡಿಂಗ್ ಕಮಿಟಿಯನ್ನು ನೇಮಕ ಮಾಡಿ ಆ ಕಾರ್ಯವನ್ನು ತಾತ್ಕಾಲಿಕವಾಗಿ ಮಾಡಲು ಕ್ರಮ ಕೈಗೊಳ್ಳಬೇಕೆಂದು ನಾನು ಸೂಚನೆ ಮಾಡುತ್ತೇನೆ. ಈಗ ಈ ಸಭೆಯಲ್ಲಿ ತಂದಿರತಕ್ಕಂಥ ರಾಜ್ಯಾಂಗದ 22 ನೇ ತಿದ್ದುಪಡಿ ವಿಧೇಯಕ ಏನಿದೆ ಇದರಿಂದ ಮುಂದೆ ಎಲ್ಲಾ ರಾಜ್ಯಗಳನ್ನೂ ಒಡೆಯುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿದರೆ ನಾನು ಅದನ್ನು ಒಪ್ಪುವುದಿಲ್ಲ. ಈಗ ತೆಲಂಗಾಣಕ್ಕೆ ಅನ್ಯಾಯವಾಗಿದೆ ಎನ್ನುವುದಾದರೆ ಆಂಧ್ರವನ್ನು ಎರಡು ರಾಜ್ಯವನ್ನಾಗಿ ಮಾಡುವ ಬದಲು ತೆಲಂಗಾಣವನ್ನು ಆಟಾನಮಸ್ ಸ್ಟೇಟ್ ಮಾಡಿದರೆ ಅದರಿಂದ ತಪ್ಪು ಇಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇಂಥಾದ್ದಕ್ಕೆ ಈ ತಿದ್ದುಪಡಿ ಮಾರ್ಗದರ್ಶನವಾಗಿದೆ. ಇದರಿಂದ ಯಾವ ಅನಾಹುತವೂ ಆಗುವುದಿಲ್ಲ. ಇದು ಶ್ಲಾಘನೀಯವಾಗಿದೆ ಮತ್ತು ಸ್ವಾಗತಾರ್ಹವಾಗಿದೆ, ಇದನ್ನು ಈ ಮಾನ್ಯ ಸಭೆಯವರು ಒಪ್ಪಬೇಕು ಎಂದು ನಾನು ಹೇಳುತ್ತೇನೆ.

Sri B. B. SAYANAK (Belgaum).—**Mr.** Speaker Sir, I am in favour of this Bill because it helps the people of the hill areas to Develop their political personality. But Sir, the conditions in which the Government of India has brought this Bill are not satisfactory and I oppose the tendency and the policy of the Government. The people of these hill

(SRI B. B. SAVANAK)

areas were agitating for a long time and Mr. Pataskar was then appointed as a Commission to go into it and he submitted his report to the Central Government more than four years back. But the Government did not take a decision over that report. There was again a great agitation and then the Government took up consideration of the report of the Pataskar Commission. That is the tendency and the policy of the Central Government which I want to condemn. Whenever there is a firing great agitation and great destruction to the national property, the Government of India has yielded to the agitation and that is worst thing according to me Sir.

Therefore, I want to submit if the Government of India wants to do some justice to any people. They must do it early and once for all. They should not yield to whatever kind of agitation. This should not be the tendency or the policy of the Central Government. I oppose the tendency or the policy which has been adopted by the Central Government. I support wholeheartedly the Bill which has been brought by the Hon. Minister for ratification and I thank the Chair.

ಶ್ರೀ ಎನ್. ಎ. ಜನ್ನೇಗೌಡ (ಪಾಂಡವಪುರ) : ಮಾನ್ಯ ಸಭಾಪತಿಗಳೇ, ಕಳೆದ 1956 ರಿಂದೀಚೆಗೆ ಭಾರತದ ರಾಜ್ಯಾಂಗದ ಇಪ್ಪತ್ತೆರಡನೆಯ ತಿದ್ದುಪಡಿಯ ವಿಧೇಯಕ ಬಂದಿರುವುದನ್ನು ನೋಡಿದರೆ ಈಗತಾನೇ ಹಿರಿಯ ರಾಜಕಾರಿಣಿಗಳಿಗೆ ಜ್ಞಾನೋದಯವಾಗುತ್ತಿದೆ ಎಂದು ಕಾಣುತ್ತದೆ. 1956ರಲ್ಲಿ ಭಾಷಾವಾರು ಪ್ರಾಂತ್ಯಗಳನ್ನು ಮಾಡುವ ಕಾಲದಲ್ಲಿ ಅನೇಕರ ವಿರೋಧ ಇತ್ತು. ಆದರೂ ಕೂಡ ಈ ವಿರೋಧಕ್ಕೆ ಕೆಲವರು ತಿರಾಂಜಲಿ ಕೊಟ್ಟು ಭಾಷಾವಾರು ರಾಜ್ಯಗಳು ರಚನೆಯಾಗುವುದಕ್ಕೆ ಅವಕಾಶ ಮಾಡಿಕೊಟ್ಟರು. ಆ ಕಾಲಕ್ಕೆ ಸರ್ದಾರ್ ವಲ್ಲಭಾಯ್ ಪಟೇಲ್ ಅವರು ಸಹ "Champions of linguistic states are assassins of nationalism" ಎಂದು ಎಚ್ಚರಿಕೆ ಕೊಟ್ಟಿದ್ದರು. ಅದನ್ನು ಲೆಕ್ಕಿಸದೆ ಭಾಷಾವಾರು ಪ್ರಾಂತ್ಯಗಳನ್ನು ರಚನೆ ಮಾಡುತ್ತಾ ಬಂದರು. ಆಯಾ ರಾಜ್ಯಗಳ ಆರ್ಥಿಕ ಸ್ಥಿತಿಗತಿಗಳು, ಆಡಳಿತದ ಸ್ಥಿತಿಗತಿಗಳ ಬಗ್ಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎನ್ನುವ ವಿಚಾರದಲ್ಲಿ ಕೇಂದ್ರ ಸರ್ಕಾರದವರಿಗೆ ಈಗ ಜ್ಞಾನೋದಯ ಉಂಟಾಗಿ ಈ ಒಂದು ರಾಜ್ಯಾಂಗ ತಿದ್ದುಪಡಿಯನ್ನು ಈ ಸಭೆಯ ಮುಂದೆ ಅನುಮೋದನೆಗೆ ತಂದಿದ್ದಾರೆ. ಇದರಲ್ಲಿ ಯಾವ ಒಂದು ಅಭಾಸವೂ ಕಂಡುಬರುವುದಿಲ್ಲ. ಅಲ್ಲದೆ ಇದರಿಂದ ರಾಜಕೀಯ ಅನ್ಯಾಯ ಅನುಭವಿಸುತ್ತಿರುವ ಜನರಿಗೆ ಬಹಳ ಅನುಕೂಲವಾಗುತ್ತದೆ. ಭಾಷಾವಾರು ಪ್ರಾಂತ್ಯಗಳಲ್ಲಿರುವ ಬಹುಮತದವರ ದಬ್ಬಾಳಿಕೆಯನ್ನು ಅಂದರೆ ಅದು ಭಾಷಾ ಅಥವಾ ಜಾತೀಯ ಅಥವಾ ಯಾವದೇ ದಬ್ಬಾಳಿಕೆಯನ್ನು ತಪ್ಪಿಸಲು ಈ ತಿದ್ದುಪಡಿ ಮಸೂದೆ ಒಂದು ಚೆಕ್ ಇದ್ದ ಹಾಗೆ ಆಗುತ್ತದೆ. It is a deterrant on the tyranny of the majority over minority, be it Linguistic, Communal or any tyranny as a matter of fact. ನಾನಾದರೂ ಹೇಳುವುದು ಇಷ್ಟೆ, ಯಾವ ಯಾವ ರಾಜ್ಯಗಳಲ್ಲಿ ಬಹುಮತ ಪುಳ್ಳ ಜನರು ತಮ್ಮ ಅಭೀಪ್ಸೆಗಳನ್ನು ನೆರವೇರಿಸಿಕೊಂಡು ಕೆಲವೊಂದು ಪ್ರದೇಶಗಳ ಜನರಿಗೆ ಅನ್ಯಾಯ ಮಾಡುತ್ತಿದ್ದಾರೋ, ಅಂತಹ ಅನ್ಯಾಯ ಅನುಭವಿಸುತ್ತಿರುವ ಪ್ರದೇಶದ ಜನರಿಗೆ ಈ ತಿದ್ದುಪಡಿ ವಿಧೇಯಕದಿಂದ ಅನ್ಯಾಯವನ್ನು ತಪ್ಪಿಸಿಕ್ಕೊಲು ಒಂದು ಸುವರ್ಣ ಅವಕಾಶ ಸಿಗುತ್ತದೆ ಎಂದು ಹೇಳಿ ಈ ತಿದ್ದುಪಡಿಯನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸ್ವಾಮಿ, ನಮ್ಮ ಮುಂದೆ ಇರುವ ಈ ತಿದ್ದುಪಡಿ ಈ ದೇಶದ ಚರಿತ್ರೆಗೆ ಅವಶ್ಯಕವಾದಂತಹ ತಿದ್ದುಪಡಿಯಾಗಿದೆ ಎಂದು ಭಾವಿಸುತ್ತೇನೆ. ಭಾಷಾವಾರು ಪ್ರಾಂತ್ಯಗಳಾದಾಗ ಅವುಗಳಿಂದ ಪರಸ್ಪರ ವಿರೋಧ ಹುಟ್ಟಿ ರಾಷ್ಟ್ರದ ಐಕ್ಯತೆಗೆ ಭಂಗವಾಗುತ್ತದೆಂದು ಕೆಲವರು ವಾದ ಮಾಡಿದ್ದರು. ಅಖಿಲ ಭಾರತದ ಹಿತದೃಷ್ಟಿಯಿಂದ ಆಯಾ ಪ್ರದೇಶಗಳ ಜನರು ತಮ್ಮ ವ್ಯಕ್ತಿತ್ವವನ್ನು ಪೂರ್ಣವಾಗಿ ಬೆಳೆಸಿಕೊಳ್ಳುವುದಕ್ಕೆ ಭಾಷಾವಾರು ಪ್ರಾಂತ್ಯಗಳು ಅವಶ್ಯಕವೆಂದು ಅನೇಕ ಹಿರಿಯರು ಒಪ್ಪಿಕೊಂಡ ಮೇಲೆ ಈ ಭಾಷಾವಾರು ಪ್ರಾಂತ್ಯಗಳು ಜಾರಿಗೆ ಬಂದವು. ಭಾಷಾವಾರು ಪ್ರಾಂತ್ಯಗಳು

ಆಗಬೇಕು ಎಂದು ಯಾರು ಇಷ್ಟಪಟ್ಟರೋ ಮತ್ತು ಯಾರು ಕಾರಣಕರ್ತರಾದರೋ ಅಂತಹವರೇ ಈಗ ಈ ರೀತಿ ಮಾಡಿದ್ದು ಸರಿಯಲ್ಲವೇನೋ ಎನ್ನುವ ವಿಚಾರದಲ್ಲಿ ಈ ವಿರೋಧ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಈಗ ಎರಡು-ಮೂರು ಭಾಷಾ ರಾಜ್ಯಗಳನ್ನು ಸೇರಿಸಿ ಒಂದು ಸಂಯುಕ್ತ ರಾಜ್ಯವನ್ನಾಗಿ ಮಾಡುವುದು ಒಳ್ಳೆಯದು ಎಂದು ಕೆಲವರು ಸಲಹೆ ಕೊಡುತ್ತಿದ್ದಾರೆ. ಈಗ ಅಮೆರಿಕಾ ದೇಶದಲ್ಲಿ ರಾಜ್ಯಗಳನ್ನು ಜನಸಂಖ್ಯೆಯ ಆಧಾರದ ಮೇಲೆ ಒಂದೊಂದು ಗೆರೆ ಎಳೆದು ರಚನೆ ಮಾಡಿದ್ದಾರೆ. ಅದೇ ರೀತಿ ನಮ್ಮ ದೇಶದಲ್ಲಿಯೂ ಕೂಡ ಮಾಡಿದರೆ ಅನಮತೆ ಬೆಳೆಯಲಾರದು ಎಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಇದು ಅಷ್ಟಾಗಿ ಯಾರ ಗಮನಕ್ಕೂ ಕೂಡ ಬಂದಿಲ್ಲ. ಇವತ್ತಿನ ಪರಿಸ್ಥಿತಿ ಏನಿದೆ ಎಂದರೆ, ಅಸ್ಸಾಂ ರಾಜ್ಯ ಗುಡ್ಡಗಾಡಿನ ರಾಜ್ಯವಾಗಿದೆ. ಈ ರಾಜ್ಯವನ್ನು ಬೇರೆ ರಾಜ್ಯದೊಡನೆ ಸೇರಿಸಿದರೆ ಆ ರಾಜ್ಯದ ಹಿತ ಸಾಧನೆ ಮಾಡುವುದು ಕಷ್ಟವಾಗುತ್ತದೆ, ಏಕೆಂದರೆ ಆ ರಾಜ್ಯಕ್ಕೆ ಸಂಬಂಧಪಟ್ಟಂತೆ ಕೆಲವು ಪ್ರತ್ಯೇಕವಾದಂತಹ ಪ್ರಶ್ನೆಗಳು ಇವೆ. ಅಸ್ಸಾಂ ರಾಜ್ಯದ ಗಿರಿ ಜನರು ತಮಗೆ ಪ್ರತ್ಯೇಕ ರಾಜ್ಯ ಬೇಕು ಎಂದು ದೇಶದ ಮುಂದೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರು. ಅಸ್ಸಾಂ ರಾಜ್ಯದ ಗಿರಿ ಪ್ರದೇಶಗಳಲ್ಲಿ ಆಡಳಿತವೇ ಇಲ್ಲ ಎಂದು ನಾವು ಕೇಳಿದ್ದೇವೆ. ಆ ಪ್ರದೇಶಗಳಲ್ಲಿ ಸರ್ಕಾರವನ್ನು ನಡೆಸುವುದೇ ಸಾಧ್ಯವಿಲ್ಲ ಎನ್ನುವ ಪರಿಸ್ಥಿತಿ ಇದೆ. ಅದಕ್ಕಾಗಿ ಆ ಜನಗಳ ಹಿತವನ್ನು ಸಾಧಿಸಬೇಕಾದರೆ ಅವರಿಗೇ ಅಧಿಕಾರವನ್ನು ಕೊಟ್ಟು ಅವರ ಮನಸ್ಸನ್ನು ಒಲಿಸಿಕೊಂಡು, ಈ ರಾಷ್ಟ್ರದ ಐಕ್ಯತೆಗೆ ತೊಂದರೆಯಾಗದಂತೆ ಅವರಿಗೆ ಒಂದು ಪ್ರತ್ಯೇಕ ರಾಜ್ಯವನ್ನು ರಚನೆ ಮಾಡಿಕೊಡುವುದು ಒಳ್ಳೆಯದೆಂದು ಕೆಲವರ ಅಭಿಪ್ರಾಯ ಬಂತು. ಆದರೆ ಈ ವಿಚಾರದಲ್ಲಿ ಆ ಜನರೊಡನೆ ರಾಜೀ ಮಾಡಿಕೊಂಡ ಮೂಲಕ ಆ ಜನರಿಗೆ ಪೂರ್ಣ ಸ್ವಯಂ ಆಡಳಿತ ಅಧಿಕಾರವನ್ನು ಕೊಡುವ ಬದಲಾಗಿ ಅಸ್ಸಾಂ ರಾಜ್ಯದೊಳಗೆ ಸ್ವಲ್ಪಮಟ್ಟಿನ ಆಡಳಿತಾಧಿಕಾರವನ್ನು ಕೊಟ್ಟು ಪ್ರತ್ಯೇಕ ರಾಜ್ಯವನ್ನಾಗಿ ಮಾಡಬಾರದೆಂದು ತೀರ್ಮಾನವಾಯಿತು. ಈ ವಿಚಾರದಲ್ಲಿ ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಿ ಅಲ್ಲಿ ಪಾಸ್ ಕೂಡ ಆಗಿದೆ. ಈ ವಿಷಯದಲ್ಲಿ ರಾಜ್ಯಗಳ ಅಭಿಪ್ರಾಯವನ್ನೂ ಕೂಡ ಕೇಳಬೇಕು ಎನ್ನುವ ಕಾನೂನು, ನಿಯಮ ಇರುವುದರಿಂದ ಈಗ ನಮ್ಮ ಮುಂದೆ ತಂದಿದ್ದಾರೆ. ಇವತ್ತಿನ ದಿವಸ ಮೈಸೂರು ರಾಜ್ಯದಲ್ಲಿಯಾಗಲೀ, ಮಹಾರಾಷ್ಟ್ರ ರಾಜ್ಯದಲ್ಲಿಯಾಗಲೀ, ಆಂಧ್ರ ರಾಜ್ಯದಲ್ಲಿಯಾಗಲೀ ಅಥವಾ ಬೇರೆ ಅನೇಕ ರಾಜ್ಯಗಳಲ್ಲಿರುವ ಜನಗಳಲ್ಲಿ ತಮಗೆ ಪ್ರತ್ಯೇಕವಾದಂಥ ರಾಜ್ಯ ಅವಶ್ಯಕ, ಇಲ್ಲದಿದ್ದರೆ ತಮ್ಮ ತಮ್ಮ ಹಿತಗಳನ್ನು ಸಾಧಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುವ ಅಭಿಪ್ರಾಯ ಕಂಡುಬರುತ್ತಿದೆ. ಮೈಸೂರು ರಾಜ್ಯದಲ್ಲಿ ಹಳೆಯ ಮೈಸೂರಿನವರು ತಾವು ಪ್ರತ್ಯೇಕವಾಗಿದ್ದರೆ ತಮ್ಮ ಹಿತವನ್ನು ಸಾಧಿಸಿಕೊಳ್ಳುವುದಕ್ಕೆ ಸಾಧ್ಯ ಎನ್ನುವ ಅಭಿಪ್ರಾಯ ಬಂದಿದೆ. ಆಂಧ್ರ ರಾಜ್ಯದಲ್ಲಿ ತೆಲಂಗಾಣದ ಜನರು ತಾವು ಪ್ರತ್ಯೇಕವಾಗಿದ್ದರೆ ತಮ್ಮ ಹಿತ ಸಾಧಿಸಿಕೊಳ್ಳುವುದಕ್ಕೆ ಸಾಧ್ಯ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮಹಾರಾಷ್ಟ್ರ ರಾಜ್ಯದಲ್ಲಿ ವಿದರ್ಭದ ಜನರು ತಾವು ಪ್ರತ್ಯೇಕವಾಗಬೇಕೆಂದು ಕೇಳುತ್ತಿದ್ದಾರೆ. ಮತ್ತು ಗುಜರಾತ್ ರಾಜ್ಯದ ಸೌರಾಷ್ಟ್ರದ ಜನರು ತಾವು ಪ್ರತ್ಯೇಕವಾಗಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಜಿ. ಚಂದ್ರಕಾಂತ್. — ಉತ್ತರ ಪ್ರದೇಶದ ಜನರು ತಮ್ಮ ರಾಜ್ಯವನ್ನು ರಾಜ್ಯಗಳಾಗ ಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಈಗ ಪ್ರತಿಯೊಂದು ರಾಜ್ಯದ ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಅನೇಕ ಕಡೆಗಳಲ್ಲಿ ಜನರು ತಾವು ಪ್ರತ್ಯೇಕವಿದ್ದರೆ ತಮ್ಮ ಹಿತವನ್ನು ಸಾಧಿಸಿಕೊಳ್ಳುವುದಕ್ಕೆ ಸಾಧ್ಯ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಸಾಯಿನತ್ ಅವರು ಈಗ ಹೇಳಿದ ಹಾಗೆ ಈ ವಿಚಾರ ಕೇಂದ್ರ ಸರ್ಕಾರದ ಗಮನಕ್ಕೆ ಬರುವಂತೆ ಮಾಡುವುದಕ್ಕೆ ಕಾನೂನು ಪ್ರಕಾರ ಎಷ್ಟರಮಟ್ಟಿಗೆ ಸಾಧ್ಯ ಎಂಬ ಬಗ್ಗೆ ಅನುಮಾನ ಉಂಟಾಗಿದೆ. ರಾಜ್ಯ ಎರಡು ಭಾಗವಾಗಬೇಕು ಎನ್ನುವ ವಿಚಾರದಲ್ಲಿ ಯಾವುದಾದರೂ ಒಂದು ರಾಜ್ಯದಲ್ಲಿ ಚಳುವಳಿಯ ಮೂಲಕ ಎಷ್ಟು ಆಸ್ತಿ ನಷ್ಟವಾಗುತ್ತದೆ ಎನ್ನುವ ಅಂದಾಜಿನ ಮೇಲೆ ಕೇಂದ್ರ ಸರ್ಕಾರದ ಕಿವಿಗೆ ಮುಟ್ಟುತ್ತಿದೆ ಎಂಬುದು ಅನುಭವದ ಪ್ರಶ್ನೆಯಾಗಿದೆ. ಆಂಧ್ರದಲ್ಲಿ ಅಲ್ಲಿಯ ಸರ್ಕಾರದವರೇ ಕಿವಿಗೆ ಮುಟ್ಟುತ್ತಿರುವ ಲೆಕ್ಕದ ಪ್ರಕಾರ ಇತ್ತೀಚೆಗೆ ನಡೆದ ಚಳುವಳಿಯಲ್ಲಿ 60-70 ಕೋಟಿ ರೂಪಾಯಿಗಳಷ್ಟು ಸಾರ್ವಜನಿಕ ಆಸ್ತಿಗೆ ನಷ್ಟವಾಗಿದೆ ಮತ್ತು ಅನೇಕ ಜನಗಳು ಪ್ರಾಣ ಬಿಟ್ಟಿದ್ದಾರೆಂದು ತಿಳಿದು ಬಂದಿದೆ. ಇಷ್ಟೊಂದು ಆಸ್ತಿ ನಷ್ಟವಾದ ಮೇಲೆ ಈ ಪ್ರಶ್ನೆಯನ್ನು ಬಗೆಹರಿಸುವುದು ಸೂಕ್ತ ಎಂದು ಕೆಲವರು ಅಭಿಪ್ರಾಯಪಟ್ಟಮೇಲೆ ಕೇಂದ್ರ ಸರ್ಕಾರದವರ ಮನಸ್ಸಿಗೆ ಬಂತು. ಆದರೂ ಕಾಂಗ್ರೆಸ್ಸಿನ ಹಿರಿಯರನೇಕರು ಈ ವಿಚಾರಲ್ಲಿ ಅಡ್ಡಿ ಬಂದಿದ್ದಾರೆಂದು ಕೇಳಿದ್ದೇನೆ. ಅಲ್ಲಿ ಇನ್ನೂ ಚಳುವಳಿ ನಿಂತಿಲ್ಲ.

Mr. SPEAKER.—Such references should be avoided. Members should be within the limit and the scope of the business.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈಗ ಆಂಧ್ರದಲ್ಲಿ ನಡೆದ ಚಳುವಳಿಯಿಂದ ಸ್ಪಷ್ಟವಾದ ಜನಾಭಿಪ್ರಾಯವನ್ನು ಅಲ್ಲಿನ ಜನ ವ್ಯಕ್ತಪಡಿಸಿದ್ದಾರೆ. ಪಾರ್ಲಮೆಂಟನಲ್ಲಿ ಕೂಡ ಇದರ ಬಗ್ಗೆ ಚರ್ಚೆಯಾಗುವಾಗ ಅಲ್ಲಿರುವ ಮಾನ್ಯ ನದನ್ಯರಾದ ಶ್ರೀಮಾನ್ ರಂಗಾರವರು ಹಾಗೂ ಇನ್ನೂ ಅನೇಕ ನದಸ್ಯರು ಇದರ ವಿಷಯಗಳನ್ನು ಸ್ಪಷ್ಟವಾಗಿ ಚರ್ಚೆ ಮಾಡಿದ್ದಾರೆ. ಇಡೀ ಹಿಂದೂ ಸ್ತಾನದಲ್ಲೇ ಇಂತಹ ಸಣ್ಣ ಸಣ್ಣ ರಾಜ್ಯಗಳನ್ನು ಮಾಡುವುದು ಅಗತ್ಯ ಎಂದು ಅಲ್ಲಿ ಹೇಳಿದ್ದಾರೆ. ಇಂತಹ ವಿಚಾರಗಳನ್ನು ಇಲ್ಲಿ ಹೇಳುವ ಅವಕಾಶ ನಮಗೆ ಸಿಗುವುದಿಲ್ಲ. ನಮ್ಮ ಮೈಸೂರು ರಾಜ್ಯದಲ್ಲಿ ಸುಮಾರು 13ವರ್ಷಗಳಿಂದಲೂ ನಡೆದಿರತಕ್ಕ ವಿಚಾರಗಳನ್ನು ಪೂರ್ಣವಾಗಿ ಅವಲೋಕಿಸಿ ನೋಡಿದರೆ ಇಲ್ಲಿ ಒಂದು ರೀತಿಯ ಜಾತಿಯವಾದ ಬಂದಿರುವುದು ನಮಗೆ ಗೊತ್ತಾಗುತ್ತದೆ. ಇಂತಹ ನನ್ನಿವೇಶದಲ್ಲಿ ಇಂತಹ ಒಂದು ತಿದ್ದುಪಡಿ ತರುವುದು ಅತ್ಯಾವಶ್ಯಕ. ಇಂತಹ ಅವಕಾಶವನ್ನು ನಾವು ಇಲ್ಲಿ ಉಪಯೋಗಿಸಿಕೊಳ್ಳುವುದು ಮತ್ತು ಪಾರ್ಲಮೆಂಟಿನ ಮೂಲಕ ಕೇಂದ್ರದವರ ಗಮನಕ್ಕೆ ತರುವುದು ಅವಶ್ಯಕ. ಇದರ ಬಗ್ಗೆ ಪ್ರೊ. ರಂಗಾ ಏನು ಹೇಳುತ್ತಾರೆಂದರೆ:

5-30 P. M.

"These things have got to be decided in accordance with changing conditions of our country. We need not send out a kind of invitation for demands for more and more States. At the same time, we should not make it too difficult. We should not continue to make it too difficult for ourselves in parliament, for the Government, for the people also, if and when they find it necessary to increase the number of States in certain areas."

	53	P. S. Dandothi ...	5
	54	C. P. S. Chittapur ...	3
	55	P. S. Asar Mohalla ...	1
	56	G. P. S. Chittapur ...	4
	57	P. S. Shahabad ...	3
10. Sedam	58	P. S. Malkhed ...	2
	59	P. S. Sedam ...	4
	60	G. P. S. Malkhed ...	1
	61	G. P. S. Mudhol ...	2
	Grand Total of the District ...		277

(Sri N. M. Kotrabasaiah Sogi)

STATEMENT

Bidar District

Sl. No.	Name of School		No. of Urdu Teachers
1	2		3
	Taluk : Bidar		
1.	P. S. Hamilpur	...	1
2.	C. P. S. Chillargi	...	2
3.	P. S. Mustaidpur	...	13
4.	C. P. S. Shahagunj	...	1
5.	P. S. Rao Taleem	...	12
6.	P. S. Amlapur	...	1
7.	G. P. S. Kamthana	...	3
8.	G. P. S. Janwada	...	1
9.	N. T. M. S. Rangrexgalli	...	10
10.	G. P. S. Ratkalpura	...	7
11.	P. S. Manyiar Taleem	...	4
12.	P. S. Noor Khan Taleem	...	13
13.	P. S. Golekhanda	...	11
14.	G. P. S. Chidri	...	1
15.	P. S. Mailoor	...	1
16.	N. T. M. S. Manhalli	...	4
17.	P. S. Aurad	...	1
18.	N. T. M. S. Bagdal	...	5
19.	G. P. S. Badgal	...	1
20.	C. P. S. Kamthana	...	2
21.	N. T. M. S. Janwada	...	1
22.	C. P. S. Markunda	...	1
23.	P. S. Sindole	...	1
24.	G. P. S. Maniyar Taleem	...	7
25.	P. S. Astoor	...	1
	Taluk : B. Kalyan		
1.	C. P. S. B. Kalyan	...	4
2.	G. P. S. B. Kalyan	...	2
3.	C. P. S. Hulsoor	...	2
4.	Govt. P. S. Phahad Zinda Shan Nawas	...	2
	Total	...	115

1	2		3
		B.F. ...	115
	Taluk : Aurad		
1.	Kushnoor	...	1
2.	K. Nagar	...	2
3.	Belkuni Chowdri	...	1
4.	G. P. S. Belkuni Chowdri	...	1
5.	G. P. S. Aurad	...	2
6.	C. P. S. Baswangalli Aurad	...	1
7.	P. S. Ripalli	...	1
8.	C. P. S. Chintaki	...	1
9.	P. S. Chiklig Udgir	...	1
	Taluk : Humnabad		
1.	C. P. S. Humnabad	...	8
2.	G. P. S. Humnabad	...	5
3.	C. P. S. Chitaguppa	...	5
4.	G. P. S. Chitguppa	...	2
5.	N. T. M. S. Hudgi	...	2
6.	N. T. M. S. Dubalgundi	...	4
7.	N. T. M. S. Halikhed	...	5
8.	C. P. S. Nandgaon	...	4
9.	C. P. S. K. Chincholi	...	1
10.	P. S. Ghodwadi	...	1
11.	C. P. S. Manna Ekheli	...	1
12.	P. S. Boral	...	1
13.	P. S. Changler	...	1
14.	Urdu D. S. Bemal Khed	...	1
	Taluk : Bhalki		
1.	Urdu Primary School, Bhalki	...	6
2.	N. T. M. S. Bhatambara	...	2
		Grand Total ...	175

(SRI N. M. KOTRABASAIAH SOGI)

Raichur District

Sl No.	Name of the School	Taluk	No. of teachers handling urdu classes.
1.	Govt. C.P.S. Raichur	Raichur	... 5
2.	Govt. N.T.M.S. Hashmiya	Raichur	... 9
3.	Govt. Police Head Quarters	Raichur	... 6
4.	Govt. P.S. Underonikitta	Raichur	... 4
5.	Govt. Girls, Underonikilla	Raichur	... 6
6.	Govt. N.T.M.S. Mangalawarpet	Raichur	... 9
7.	Govt. Girls P.S. Staion Bazaar	Raichur	... 2
8.	Govt. C.P.S. Manvi	Manvi	... 8
9.	Govt. Girls H.P.S. Manvi	Manvi Taluk	... 5
10.	Govt. C.P.S., Deodurga	Deodurg	... 6
11.	Govt. C.P.S., Sindhanur	Sindhnur	... 4
12.	Govt. Girls HPS	Deodurg	... 8
13.	Govt. Girls HPS., Sindhnur	Sindhnur	... 6
14.	Govt. Girls P.S., Lingasagur	Lingasagur	... 4
15.	Govt. HPS Chawni	Lingasagur	... 5
16.	Govt. Hr. P.S. Mudhol	Lingasagur	... 3
17.	Govt. Urdu Girls' Kusthagi	Kushtagi	... 5
18.	Govt. H.S. Taveregere	Kushtagi	 2
19.	Govt. Urdu School, Kustagai	Kushtagi	... 3
20.	Govt. C.P.S. Gangavati	Gangavathi	... 6
21.	Govt. H.P.S. Gangavathi	Gangavathi	... ...
22.	Govt. H.S. Islampur	Gangavathi	... 4
23.	Govt. Girls Middle School	Koppal	... 6
24.	Govt. Pry. School Station Road	Koppal	... 3
25.	Govt. T.P.P. Munirabad	Munirabad	... 3
26.	Govt. Hulgi Munirabad	Munirabad	... 4
			126

Sri V. N. PATIL.—In the statement given by the Hon. Minister for Education, there are about 126 Urdu-knowing teachers handling Urdu classes in the Gulbarga District. The Urdu-knowing teachers according to the answer given comes to 277. How is it that Urdu-knowing teachers are not posted to Urdu classes and Urdu-knowing students are not getting opportunities to learn Urdu ? Is it not a discouragement to Urdu ?

†Sri N. M. KOTRABASAIAH SOGI.—Urdus knowing teachers are being posted to Urdu-medium schools.

Sri V. N. PATIL.—What was the necessity for the Government to have 277 Urdu-knowing teachers and why only 126 Urdu-knowing teachers are posted to Urdu classes? Does that not show that Urdu is being discouraged in the Hyderabad Karnatak Area?

Sri N. M. KOTRABASAIAH SOGI.—No; all the Urdu-medium schools have got Urdu-knowing teachers. There may be general teachers knowing Urdu but we have posted sufficient Urdu-knowing teachers to the Urdu medium schools. So, Hyderabad Karnatak Area is not made to suffer.

Measures to keep-up 18 per cent in Appointment of S.C./S.T. to all Class Posts of Government Services

374. Sri S. S. ARAKERI (Balloli).—

Will the Chief Minister be pleased to state :—

(*a*) the additional steps or measures taken by Government to maintain 18 per cent reservation for Scheduled Castes and Scheduled Tribes members in Class I, Class II, Class III and Class IV in Government Services;

(*b*) whether Government propose to give promotion to Scheduled Castes and Scheduled Tribes employees on the basis of 18 per cent reservation even in promotional vacancies as has been done by the Andhra Pradesh Government;

(*c*) if not, the reasons for the same?

Sri VEERENDRA PATIL (Chief Minister).—

(*a*) Instructions have been issued to the Appointing Authorities to the effect that the percentage of vacancies reserved for the Scheduled Castes and Scheduled Tribes should be strictly adhered to. An Employment Cell has also been created in the Office of the Director of Social Welfare to inspect Unit Offices to ensure compliance with Government orders regarding reservation of posts of Scheduled Castes/Scheduled Tribes.

(*b*) The matter is under examination.

(*c*) Does not arise.

ಶ್ರೀ ಎಸ್. ಎಸ್. ಅರಕೇರಿ.—ಅನುಸೂಚಿತ ಜಾತಿಗಳವರಿಗೆ ಸೇಕಡಾವಾರು ಪ್ರಮಾಣದಂತೆ ನೇಮಕ ಮಾಡುವಾಗ ಕಟ್ಟುನಿಟ್ಟಾದ ಸೂಚನೆಗಳನ್ನು ಕೊಡಲಾಗಿದೆ ಎಂದು ಸರ್ಕಾರದವರು ಹೇಳಿದರು. ಆದರೆ ಇವರಿಗೆ ಸರಿಯಾದ ಕೋಟಾ ಸಿಗುತ್ತಿಲ್ಲ. ಇದರಿಂದಾಗಿ ಐ.ಎ.ಎಸ್. ಇತ್ಯಾದಿ ವಿಭಾಗಗಳಲ್ಲಿ ನ್ಯಾಯವಾಗಿ ದೊರಕಬೇಕಾದ ಪ್ರಾತಿನಿಧ್ಯ ದೊರೆಯುತ್ತಿಲ್ಲ. ಇದರ ಕಡೆಗೆ ಸರಕಾರ ಸೂಕ್ತವಾದ ಗಮನ ಕೊಟ್ಟು ಸರಿಪಡಿಸುತ್ತಿರಾ?

2-00 P.M.

† ಶ್ರೀ ವೀರೇಂದ್ರ ಪಾಟೀಲ್.—ರಿಸರ್ವೇಷನ್ ಕೋಟಾವನ್ನು ಯಾವ ರೀತಿ ಇಂಪ್ಲಿಮೆಂಟು ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ಈಗಾಗಲೇ ಹೇಳಿದ್ದೇನೆ. ಆದರೆ ಈ ಹಿಂದುಳಿದ ಜನಾಂಗದವರಿಗೆ ಸರಿಯಾದ ಪರ್ಸೆಂಟೇಜು ಸಿಗುತ್ತಿಲ್ಲ ಎನ್ನುವುದನ್ನು ನೋಡುವುದಕ್ಕಾಗಿ ಈಚೆಗೆ ಸರಕಾರ ಪ್ರತ್ಯೇಕವಾದ ಒಂದು ಸೆಲ್ ಮಾಡಿದೆ. ಅಲ್ಲದೆ ಸರಕಾರ ಇತ್ತೀಚೆಗೆ ಒಂದು ನಿರ್ಧಾರ ಕೂಡ ತೆಗೆದುಕೊಂಡಿದ್ದಾರೆ. ಅದೇನೆಂದರೆ ಹಿಂದುಳಿದ ಪಂಗಡದವರ ಇನ್‌ಕಂ 1200 ಎಂದು ಹಿಂದೆ ಇದ್ದುದನ್ನು ಈಗ ಎರಡು ಸಾವಿರದವರೆಗೆ ಇರಬೇಕೆಂದು ಮಾಡಲಾಗಿದೆ. ಎಲ್ಲ ನಾಲ್ಕನೆಯ ದರ್ಜೆನೌಕರರುಗಳ ಮಕ್ಕಳಿಗೂ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಈ ರೀತಿ ಮಾಡಲಾಗಿದೆ. ಹಿಂದೆ ಇದ್ದ ಇನ್‌ಕಂ ಗ್ರೂಪ್‌ನಲ್ಲಿ ಎಲ್ಲಿ ಇಂತಹ ನಾಲ್ಕನೆ ದರ್ಜೆ ನೌಕರರು ಬಿಟ್ಟು ಹೋಗುತ್ತಾರೋ ಎಂದು ಸರಕಾರ ಇವರ ಇನ್‌ಕಂ ಹೆಚ್ಚು ಮಾಡಲು ನಿರ್ಣಯ ಮಾಡಲಾಗಿದೆ. ಅಲ್ಲದೆ ಎಲ್ಲ ಡಿಪಾರ್ಟುಮೆಂಟುಗಳವರೂ ಒಂದೊಂದು ರಿಜಿಸ್ಟರನ್ನು ಮೆಂಟೇನ್ ಮಾಡಬೇಕು ಎಂದು ಮತ್ತು ಶೇಕಡಾ 33 ರಷ್ಟು ಮೀನಲಾಗಿರಬೇಕು ಎನ್ನುವುದಕ್ಕಾಗಿ ಒಂದು ಸೈಕಲ್‌ನಂತೆ ರನ್ನಿಂಗು ಅಕೌಂಟು ಇಟ್ಟು ಇವರ ಪ್ರಕಾರ ಬ್ಯಾಕುವರ್ಡ್ ಕ್ಲಾಸ್, ಷೆಡ್ಯೂಲು ಕ್ಯಾಸ್ಟ್ ಹಾಗೂ ಟ್ರೈಬ್ಸ್ ಇವರೆಲ್ಲರಿಗೂ ಸರಿಯಾದ ಪ್ರಾತಿನಿಧ್ಯ ಕೊಡಬೇಕೆಂದು ನಿರ್ಧಾರ ಮಾಡಲಾಗಿದೆ ಮತ್ತು ಇನ್ನೊಂದು ವಾರದೊಳಗೆ ಇದರ ಬಗ್ಗೆ ಸರಕಾರದ ಆರ್ಡರೂ ಹೊರಡುವುದರಲ್ಲಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಮುಖ್ಯ ಮುಂತ್ರಿಗಳು ವಿಶೇಷವಾಗಿ ಯೋಜನೆಗಳನ್ನು ಮಾಡಿದ್ದೇವೆಂದು ಇಲ್ಲಿ ಹೇಳಿದರು. ಸುಮಾರು 20 ವರ್ಷಗಳಿಂದಲೂ ಜಾರಿಗೆ ಬಂದಿರುವ ಒಂದು, ಎರಡು ಹಾಗೂ ಮೂರನೇ ವರ್ಗಗಳ ನೇಮಕಗಳನ್ನು ಮಾಡುವುದರಲ್ಲಿ ಶೇಕಡಾವಾರು ಒಂದು, ಎರಡು ಹಾಗೂ ಎಂಟರವರೆಗೆ ಮಾತ್ರ ಇದೆ. ಯೂನಿಟ್ ಆಫೀಸರುಗಳು ಸರಕಾರದವರು ಕೊಟ್ಟ ನೂಚನೆಗಳನ್ನು ತಿರಸ್ಕರಿಸುತ್ತಾ ಬರುತ್ತಿರುವುದರಿಂದ ಇಂತಹ ಅಕ್ರಮಗಳಾಗುತ್ತಿವೆ ಮತ್ತು ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರುಗಳನ್ನು ನೇಮಕ ಮಾಡಬೇಕೆಂದು ಇದ್ದುದನ್ನು ಈಚೆಗೆ ರದ್ದುಮಾಡಬೇಕಾಗಿ ಬಂತು. ಇದರಿಂದಾಗಿ ಹಿಂದುಳಿದ ಜನಾಂಗಕ್ಕೆ ಸರಿಯಾದ ನೇಮಕಗಳು ಆಗುತ್ತಿಲ್ಲ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಯಾವ ರೀತಿಯಾಗಿ ನೇಮಕಗಳನ್ನು ಮಾಡಬೇಕೆಂದು ಸರಕಾರಕ್ಕೆ ಶಿಫಾರಸು ಮಾಡಿರುತ್ತಾರೋ ಅದರಂತೆ ಇಲ್ಲೂ ಸರಕಾರ ಮಾಡಿದರೆ ಸರಿಯಾದ ಪ್ರಾತಿನಿಧ್ಯ ಸಿಗಬಹುದು ಮತ್ತು ಯೂನಿಟ್ ಆಫೀಸರುಗಳು ಸರಕಾರದ ಆರ್ಡರುಗಳನ್ನು ಉಲ್ಲಂಘನೆ ಮಾಡಿದ್ದರೆ ಅಂತಹವರಿಗೆ ಶಿಕ್ಷೆ ಮಾಡಬೇಕು. ಇದಕ್ಕೆ ತಕ್ಕಂತೆ ಸರಿಯಾದ ಶಾಸನಗಳನ್ನು ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಏನು ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ ಎನ್ನುವ ವಿವರಗಳನ್ನೆಲ್ಲಾ ಹೇಳಿದೆ. ಸರಕಾರ ಸರಿಯಾದ ಪ್ರಾತಿನಿಧ್ಯ ಸರ್ವಿಸ್ಸುಗಳಲ್ಲಿ ಹಿಂದುಳಿದ ವರ್ಗದವರಿಗೆ ಸಿಗಬೇಕು ಎಂದು ಇದಕ್ಕಾಗಿ ಒಂದು ರೀತಿಯಾವ ಸೈಕಲ್ ಮಾಡಿ ಅದರಂತೆ ಎಲ್ಲ ಇಲಾಖೆಗಳಲ್ಲು ರಿಜಿಸ್ಟರು ಇಟ್ಟು ಅದನ್ನು ಹೇಗೆ ಮಾಡಬೇಕೆಂದು ಆಗಲೇ ಪ್ರಕಟಮಾಡಿದ್ದೇನೆ. ಇದರಂತೆ ಸರಿಯಾದ ಡೆವಲಪ್‌ಮೆಂಟ್ ಪ್ರೋಗ್ರಾಂ ನಡೆಯುತ್ತದೋ ಇಲ್ಲವೋ ಎನ್ನುವುದನ್ನು ನೋಡಿಕೊಳ್ಳಲು ಮಾನ್ಯ ಸಭೆಯ ಸದಸ್ಯರುಗಳ ಒಂದು ಕಮಿಟಿ ಕೂಡ ಮಾಡಬೇಕು ಎಂದು ಒಂದು ನಿರ್ಣಯ ಕೂಡ ಮಾಡಲಾಗಿದೆ. ಮುಂದೆ ಈ ಕಮಿಟಿಯವರು ಇವರ ಬಗ್ಗೆ ವಿಚಾರ ಮಾಡುತ್ತಾರೆ.

Sri G. DUGGAPPA.—May I know whether in any Department of Government this percentage has been achieved? if not, are the Government taking keen interest in achieving this percentage? what is the percentage reached in any Department so far?

Sri VEERENDRA PATIL.—It is a matter of detail and I cannot say off hand anything. If the hon. Member puts a separate specific question, to that extent it will be possible for me to furnish the information.

Mr. SPEAKER.—Question Hour is over.

Sale of Toddy in South Kanara District—Auction of Toddy Shops

7. **Smt. WINNIFRED F. FERNANDES** (Coondapur).—

Will the Minister for Finance, Planning and Youth Welfare be pleased to state :—

(*a*) the total successful bid amount per month accepted by the Deputy Commissioner at the reauction conducted from 31st July 1969 onwards for the right to sell toddy for all the shops in South Kanara ;

(*b*) whether this amount falls short by about Rs. 32,000.00 as compared to the previous successful bid amount, resulting in a loss of nearly Rs. 3,50,000.00 to the Government for a period of 11 months by way of excise revenue ;

(*c*) the person who is held responsible for this loss, and the steps, if any, proposed to be taken to recover the above loss ?

Sri RAMAKRISHNA HEGDE (Minister for Finance, Planning and Youth Welfare).—

(*a*) Rs. 2,61,444.

(*b*) The shortfall is Rs. 34,556 per month. The loss could be assessed after all the bids are confirmed and licences issued.

(*c*) No one is held responsible. The licences had to be cancelled at the request to the farmer bidder as he could not run the shops, pending determination of the question of liability of former bidder.

Smt. WINNIFRED F. FERNANDES.—What was the reason for re-auction of these toddy shops in South Kanara District ? When the bid amount was Rs. 2,96,000, by your re-auction it has come down to Rs. 2,61,000 thus making you incur a loss of more than Rs. 32,000. What was the reason for this re-auction ? Was it in the interests of the general public or in the interest of the contractor ?

Sri RAMAKRISHNA HEGDE.—It was not with a view to give any help to the contractor, but the contractor expressed his inability to carry out this contract in view of certain unexpected development.

Smt. WINNIFRED F. FERNANDES.—What was the unexpected development ?

Sri RAMAKRISHNA HEGDE.—It is reported that all toddy tappers refused to work for this contractor.

ಶ್ರೀ ಬೋಳಿಯಪ್ಪ ಶೆಟ್ಟಿ.—ಸ್ವಾಮಿ, ಟಾಡಿ ತಯಾರು ಮಾಡುವಂಥ ಕೆಲಸಗಾರರು ಸಂಘಟಿತರಾಗಿ ಅವರಮೇಲೆ ಅನಹಕಾರ ತೋರಿಸಿದ್ದೂ, ಬಾಯ್‌ಕಾಟ್ ಮಾಡಿದ್ದೂ ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕೆಲಸಗಾರರು ಅನಹಕಾರ ಮಾಡಿದ್ದೂ, ಬಾಯ್‌ಕಾಟ್ ಮಾಡಿದ್ದೂ ನಮ್ಮ ಗಮನಕ್ಕೆ ಬಂದಿದೆ. ಅಲ್ಲಿ ಒಬ್ಬರೇ ಕಾಂಟ್ರಾಕ್ಟ್ ತೆಗೆದುಕೊಂಡಿದ್ದಾರೆ ಎನ್ನುವ ಕಾರಣವೋ ಏನೋ ನನಗೆ ಗೊತ್ತಿಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಹಿಂದಿನ ಹರಾಜುದಾರರು ಅಂಗಡಿಗಳನ್ನು ನಡೆಸಲು ಆಗದೆ ಇರುವಂಥ ಅನಿರೀಕ್ಷಿತವಾದ ವಿಶೇಷಘಟನೆಗಳು ಬರೀ ದಕ್ಷಿಣಕನ್ನಡ ಜಿಲ್ಲೆಯಲ್ಲಿ ನಡೆದಿವೆಯೇ ಅಥವಾ ಬೇರೆ ಕಡೆಯೂ ನಡೆದಿವೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಇಂಥ ಘಟನೆಗಳು ಬೇರೆ ಕಡೆ ಎಲ್ಲಿಯೂ ನಡೆದದ್ದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಭಾನ್ಕರಶೆಟ್ಟಿ.—ಕೆಲವು ಕಾಂಗ್ರೆಸ್ ಪುಢಾರಿಗಳು ಟ್ಯಾಪರ್ಸ್‌ನ್ನೆಲ್ಲಾ ಸಂಘಟನೆ ಮಾಡಿಟ್ಯಾಪ್ ಮಾಡಬೇಡಿ ಎಂದು ಜಾತೀಯ ಕಲಹಗಳನ್ನು ಹುಟ್ಟಿಸಿದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದಾವುದೂ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎನ್. ಲೋಕಯ್ಯ ನಾಯಕ್.—ಮೊದಲಸಲ ಹರಾಜಾದಮೇಲೆ ಮೂರು ತಿಂಗಳ ಡಿಪಾಜಿಟ್ ಹಣವನ್ನು ಬಿಡ್‌ದಾರರು ಕಟ್ಟಿದ್ದಾರೆ. ಆದರೆ ಎರಡನೇ ಸಲ ಹರಾಜು ಆದಮೇಲೆ ಮುಂಗಡವಾಗಿ ಕೊಟ್ಟಿದ್ದ ಹಣವನ್ನು ಏನು ಮಾಡಲಾಗಿದೆ ? ಅದನ್ನು ವಾಪಸು ಕೊಡಲಾಗಿದೆಯೇ ಅಥವಾ ಸರ್ಕಾರದ ವಶದಲ್ಲಿಯೇ ಇದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದರ ಬಗ್ಗೆ ಸರ್ಕಾರ ಇನ್ನೂ ಯಾವ ತೀರ್ಮಾನವನ್ನೂ ತೆಗೆದು ಕೊಂಡಿಲ್ಲ. ಸರ್ಕಾರ ಆದಷ್ಟು ಬೇಗ ತೀರ್ಮಾನವನ್ನು ತೆಗೆದುಕೊಳ್ಳುತ್ತದೆ.

Sri D. V. AITHAL.—I want to know the meaning of answer given to (*c*). At one stage it is said that the former bidder is not responsible, and at the other stage it is said that the matter is under consideration. I want to know whether the former bidder will be responsible for the loss ?

Sri RAMAKRISHNA HEGDE.—Sir, these are two different questions. (1) in regard to the actual loss caused to the Government—in this matter it is not possible to hold any particular individual responsible for this, and (2) in regard to the liability of the contractor towards compensating the loss, the gap between the first and the later bid, we have to take a decision.

Smt. WINNIFRED F. FERNANDES.—In the previous auction which took place in June or so, has the Government followed the excise rules and implemented them ?

Sri RAMAKRISHNA HEGDE.—Yes. If it is at the time of auction, certainly all rules have been followed.

ಶ್ರೀ ಎಂ. ನಾಗಪ್ಪ.—ಎಕ್ಸೈಸ್ ಕಂಟ್ರಾಕ್ಟ್‌ನಲ್ಲಿ ಪ್ರತಿ ವರ್ಷ ಹರಾಜಾಗುತ್ತಲೇ ಹಿಂದೆ ತೆಗೆದು ಕೊಂಡಂಥ ಕಂಟ್ರಾಕ್ಟರಿಗೆ ನ್ಯಾಳ ಸಿಕ್ಕದೆ ಹೋದರೆ ಟ್ಯಾಪರ್ಸ್ ಅಸೋಸಿಯೇಷನ್ ಎಂದು ಮಾಡಿಕೊಂಡು ಮುಂದೆ ತೆಗೆದುಕೊಂಡ ಕಂಟ್ರಾಕ್ಟರಿಗೆ ಸಹಕಾರ ಮಾಡುವೆ ಟ್ಯಾಪರ್ಸನ್ನು ತಮ್ಮ ವಶದಲ್ಲಿ ಇಟ್ಟುಕೊಳುತ್ತಾರೆ. ಇದರಿಂದ ಕಂಟ್ರಾಕ್ಟ್‌ಗೆ ತೆಗೆದುಕೊಂಡವರು ಕೆಲಸ ಮಾಡಲು ಸಾಧ್ಯವಾಗದೆ ಸರ್ಕಾರಕ್ಕೆ ಬರತಕ್ಕ ಹಣ ಕೂಡ ಕಡಿಮೆಯಾಗುತ್ತದೆ. ಸರ್ಕಾರ ಇದರ ಬಗ್ಗೆ ಯೋಚನೆ ಮಾಡಿ ಮುಂದೆ ಟ್ಯಾಪರ್ಸ್ ಸಹಿತ ಸರ್ಕಾರದವರೇ ಮೇನ್‌ಜೇನ್ ಮಾಡಿ ಸೇಂದಿ ಮಾತ್ರ ಕಂಟ್ರಾಕ್ಟರಿಗೆ ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಪ್ರಾಕ್ಟಿಕಲ್ ಆಗಿ ನಡೆಯತಕ್ಕ ಮಾತಲ್ಲ.

Sri B. B. SAYANAK.—May I know whether there were sales of toddy for one month by this contractor ?

Sri RAMAKRISHNA HEGDE.—The excise shops are auctioned for a period of one year. There is no question of auctioning any excise shop for less than that period.

ಶ್ರೀ ಬಿ. ಭಾನ್ಯರಶೆಟ್ಟಿ.—ನಮಾಜವಾದಿ ಧೋರಣೆಗನುಗುಣವಾಗಿ ಉಳುವವನೇ ಹೊಲದ ಒಡೆಯ ಎಂದು ಮಾಡಿದ್ದೀರಿ. ಆ ರೀತಿಯಲ್ಲಿ ತೆಂಗಿನ ಮರ ಅಥವ ತಾಳೆಯ ಮರ ಯಾವುದನ್ನು ಟ್ಯಾಪ್ ಮಾಡುತ್ತಾರೋ ಅದನ್ನು ವಿಭಾಗ ಮಾಡಿ ಗುತ್ತಿಗೆದಾರರಿಗೆ ಕೊಡುವಂತೆ ಅನುಕೂಲ ವಾಗಲು ಮುಂದಾದರೂ ಕಾನೂನು ತರುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅದು ಮಾನ್ಯ ಸದಸ್ಯರ ಅಭಿಪ್ರಾಯ.

Sri K. H. PATIL.—What is the motive behind not taking action to forfeit the deposit that has been there, as envisaged in the rules ?

Sri RAMAKRISHNA HEGDE.—There is no motive. He has expressed his inability to continue the contract on account of certain unexpected factors over which he had no control. He has also submitted to Government the doctrine of frustration of contract sale. Therefore, we had to take a decision on this to what extent the previous contractor is liable to compensate the loss that the Government has suffered.

Mr. SPEAKER.—Question Hour is over.

QUESTIONS FOR ANSWERS ON THE DAY

(but not taken up)

Amount sanctioned to Taluk Development Boards in North Kanara from the Income of Forest Department.

183. Sri I. SOMASHEKHARAPPA (Hosanagar).—

Will the Minister for Development be pleased to state :—

(*a*) whether Government has sanctioned certain portion of the income from the Forest Department to the Taluk Development Boards in North Kanara ;

(*b*) if so, the quantum of amount sanctioned to each of the Taluk Development Boards of North Kanara ;

(*c*) the considerations that have been taken into account while sanctioning such amounts ;

(*d*) if the same conditions prevail, whether the Government proposes to sanction such grants to other T.D.B.s in the State ?

Sri P. M. NADGOUDA (Minister for Development).—

(*a*) Yes.

	Name of T.D.B.		*Amount*
1	Karwar	...	43,284-00
2	Ankola	...	48,220-00
3	Kumta	...	39,094-00
4	Honnavar	...	44,661-00
5	Bhatkal	...	44,030-00
6	Sirsi	...	41,332-00
7	Siddapur	...	45,522-00
8	Yellapur	...	51,894-00
9	Mundgod	...	45,178-00
10	Haliyal	...	44,087-00
11	Supa	...	52,698-00
	Total	...	5,00,000-00

(*c*) The Forest area in N. Kanara District., exceeds 75 per cent of the total area and the amounts which the local bodies can get by way of assignment land Revenue will be so small that they cannot effectively discharge their duties. It was therefore, necessary to supplement these assignments. It may be added that the former Government of Bombay was sanctioning a grant of 2 per cent of the Forest Revenue to the District Local Board of the District.

(*d*) Will be considered.

Motion against Sri S. K. Patil

ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಹಿಂದಿನ ಸಲ ನಾವು ಇಲ್ಲಿ ಸೇರಿದಾಗ ಎಸ್. ಕೆ. ಪಾಟೀಲ್ ಮತ್ತು ಇತರರು ಕೆಲವರಮೇಲೆ ಒಂದು ಮೋಷನ್ ಕೊಟ್ಟಿದ್ದೆವು.

MR. SPEAKER.—One day during the course of this Session will be allotted for the discussion. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತಿರ್ಮಾನಮಾಡಿ ಹೇಳುತ್ತೇನೆ.

Notice of adjournment motion: *re*: Land Reforms and the treatment of Political prisoners in the Jail

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಸ್ವಾಮಿ ಅಧ್ಯಕ್ಷರೇ, ನಾನು ತಮ್ಮ ಒಪ್ಪಿಗೆಗಾಗಿ ರೂಲ್ 50ರ ಪ್ರಕಾರ ಒಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೆ. ಅದು ಈ ವಿಷಯಕ್ಕೆ ಸಂಬಂಧಪಟ್ಟಿದೆ: ಹಿಂದೆ ಕಾಂಗ್ರೆಸ್ ಸರಕಾರದವರು ಸ್ವಾತಂತ್ರ್ಯ ಬಂದಮೇಲೆ ಸುಮಾರು 22 ವರ್ಷಗಳಲ್ಲಿ ಮೈಸೂರು ರಾಜ್ಯದಲ್ಲಿ ಬಡ ಜನರಿಗೆ ಜಮೀನು ಹಂಚಿಕೆ ಮಾಡುತ್ತೇವೆ, ಸರಕಾರದ

ವಶದಲ್ಲಿರುವ ರೆವೆನ್ಯೂ ಹಾಗೂ ಫಾರೆಸ್ಟ್ ಪ್ರದೇಶದಲ್ಲಿ ಸಾಗುವಳಿಗೆ ಯೋಗ್ಯವಾಗಿರುವ ನರಕಾರಿ ಪ್ರದೇಶವನ್ನು ಮಂಜೂರು ಮಾಡುತ್ತೇವೆ ಎಂದು ಹೇಳಿದ್ದರು. ಆ ಮಾತು ಸ್ವಾತಂತ್ರ್ಯ ಬಂದಮೇಲೆ ಮಾತ್ರ ಹೇಳಿಲ್ಲ, ಸ್ವಾತಂತ್ರ್ಯ ಬರುವುದಕ್ಕೆ ಪೂರ್ವದಲ್ಲಿ ಸಹ ಕಾಂಗ್ರೆಸ್ಸಿನವರು ಕರಾಚಿ ಅಧಿವೇಶನದಲ್ಲಿ ಸಹ ಉಳುವವನೇ ಹೊಲದ ಒಡೆಯ ಆಗಬೇಕು, ಬಡವರಿಗೆ ಭೂಮಿಯು ಹಂಚಿಕೆ ಯಾಗಬೇಕು ಎಂದು ಹೇಳಿದ್ದಾರೆ. ಅದರಂತೆ ಹಲವರು ಜಮೀನಿಗೆ ದರಖಾಸ್ತು ಕೊಟ್ಟಿದ್ದಾರೆ. ಅಂಥ ದರಖಾಸ್ತುಗಳು ಸುಮಾರು ಲಕ್ಷಗಟ್ಟಲೆ ಇರಬೇಕು.

ಸ್ವಾತಂತ್ರ್ಯ ಬಂದ ಅವರು ಕೊಟ್ಟಿರತಕ್ಕ ಅರ್ಜಿಗಳು ಇನ್ನೂ ಕೂಡ ತಾಲ್ಲೂಕು ಆಫೀಸುಗಳು, ಅಸಿಸ್ಟೆಂಟ್ ಕಮೀಷನರುಗಳ ಆಫೀಸುಗಳು ಮತ್ತು ಜಿಲ್ಲಾಧಿಕಾರಿಗಳ ಆಫೀಸುಗಳಲ್ಲಿ ವಿಲೇವಾರಿ ಹೊಂದದೆ ಹಾಗೆಯೇ ಧೂಳು ತಿನ್ನುತ್ತಾ ಬಿದ್ದಿರುತ್ತದೆ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ರಾಜ್ಯಾಂಗದಲ್ಲಿ ಹಕ್ಕು ಇದೆ. ಇವತ್ತು ಸರ್ಕಾರ ನಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳದೇ ಇರತಕ್ಕೆ ಪರಿಸ್ಥಿತಿಯನ್ನು ತಂದುಕೊಂಡಾಗ, ನಮ್ಮನ್ನು ನೋಡಿಕೊಳ್ಳದಿದ್ದಾಗ ನಾನು ನಮ್ಮ ಪರಿಹಾರವನ್ನು ಹೊಂದುವುದಕ್ಕೆ ರಾಜ್ಯಾಂಗಬದ್ಧವಾದ ಹಕ್ಕು ನಮಗೆ ಇದೆ. ಸರ್ಕಾರಕ್ಕೆ ಸೇರಿರತಕ್ಕ ಜಮೀನನ್ನು ಬಿಡುಗಡೆ ಮಾಡಿ ಅದನ್ನು ಮಂಜೂರು ಮಾಡತಕ್ಕ ಅಧಿಕಾರವನ್ನು ಸರ್ಕಾರಕ್ಕೆ ಕೊಟ್ಟು, ಆ ಜಮೀನನ್ನು ಮಂಜೂರು ಮಾಡಿಸಿಕೊಳ್ಳುವುದಕ್ಕೆ ಅರ್ಜಿ ಕೊಟ್ಟಿದ್ದರೂ ಕೂಡ ಪರಿಹಾರ ಸಿಕ್ಕಲಿಲ್ಲ. ಆದ್ದರಿಂದ ಆ ಜಮೀನು ನಮ್ಮದು ಅನ್ನತಕ್ಕ ಆಧಾರದಮೇಲೆ ಸರ್ಕಾರಕ್ಕೆ ಅರ್ಜಿಕೊಟ್ಟು ಬೇಡತಕ್ಕ ಕಾಲ ಇದು ಅಲ್ಲ. 22 ವರ್ಷ ನಾವು ಕಾದೂ ಕಾದೂ ಅವರನ್ನು ಕಾಡಿ ಬೇಡಿ, ಪಡಬಾರದ ಕಷ್ಟ ನಷ್ಟ ಎಲ್ಲವನ್ನೂ ಅನುಭವಿಸಿ ಅನುಕಂಪ ವ್ಯಕ್ತ ಮಾಡಿದರೂ ಕೂಡ ಈ ಕಾಂಗ್ರೆಸ್ ಸರ್ಕಾರ ಕಣ್ಣು ತೆರೆಯಲಿಲ್ಲ. ಈ ಸರ್ಕಾರಕ್ಕೆ ಕಣ್ಣು ಇಲ್ಲ, ಕಿವಿ ಕೇಳಿಸುವುದಿಲ್ಲ. ಈ ಪರಿಸ್ಥಿತಿಯಲ್ಲಿ ಬಡವರೇ ಹೋಗಿ ಅಲ್ಲಿ ಸಾಗುವಳಿ ಮಾಡಿದ್ದಕ್ಕೆ ಅವರಮೇಲೆ ತಕರಾರು ತಪ್ಪೆ : ಅಂತ ಹಾಕಿ ಟಿ. ಟಿ. ಫೈನ್ ಅಂತ ದಂಡ ಹಾಕಿದ್ದಾರೆ. ಯಾರು ತಪ್ಪು ಮಾಡುತ್ತಾರೆ ಅವರಿಗೆ ದಂಡ ಹಾಕಬೇಕು ನಿಜ. ಊರಿನ ಜನ ತಪ್ಪು ಮಾಡಿದರೆ 'ಸತ್ಯ ಪರಿಪಾಲನೆ ಮಾಡವಿವ್ರರೆ' ವಚನ ಕೊಟ್ಟು ವಚನದಂತೆ ನಡೆದುಕೊಳ್ಳದಿದ್ದರೆ ದಂಡ ಹಾಕುವುದು ವಾಸ್ತವಿಕ. ಇಲ್ಲಿ ವಚನ ಕೊಟ್ಟ ಸರ್ಕಾರ ಅದರಂತೆ ನಡೆದುಕೊಳ್ಳದೇ ಬಡವರಮೇಲೆ ದಂಡ ಹಾಕಿದ್ದಾರೆ. ದಂಡ ಹಾಕಬೇಕಾಗಿದ್ದರೆ ಅದು ಈ ಕಾಂಗ್ರೆಸ್ ಸರ್ಕಾರದಮೇಲೆ ಹಾಕಬೇಕಾಗಿತ್ತು ಎಂದು ನಾನು ಹೇಳುತ್ತೇನೆ. ಯಾರೇ ಆಗಲಿ ಜಮೀನು ಇಲ್ಲದವರಿಗೆ ಜಮೀನು ಹಂಚಿಕೆ ಮಾಡುತ್ತೇವೆ ಅಂತ ಹೇಳಿ ವಚನ ಕೊಟ್ಟ ಈ ಕಾಂಗ್ರೆಸ್ ಸರ್ಕಾರ, ಈ ಕಾಂಗ್ರೆಸ್ ಜನ 22 ವರ್ಷಗಳಿಂದ ಆಡಿಳಿತ ನಡೆಸಿದ್ದಾರೆ, ತಾವು ಕೊಟ್ಟ ವಚನವನ್ನು ಪರಿಪಾಲನೆ ಮಾಡಲಿಲ್ಲ. ಇಂತಹವರನ್ನು ಸಾರ್ವಜನಿಕ ಸ್ಥಳದಲ್ಲಿ ನಿಲ್ಲಿಸಿ ವಿಚಾರಣೆ ಮಾಡಬೇಕು. ಇಲ್ಲಿ ಈಗೇನು ನಮ್ಮ ಮುಂದೆ ಕುಳಿತಿದ್ದಾರೆ ಇವರುಗಳು ಮತ್ತು ಎಲ್ಲಾ ಮಿನಿಸ್ಟರುಗಳು, ಈ ಮಂತ್ರಿಮಂಡಲ ಮತ್ತು ಕಾಂಗ್ರೆಸ್ ಜನ ಯಾರಿದ್ದಾರೆ ಅವರನ್ನು ಸಾರ್ವಜನಿಕ ಸ್ಥಳದಲ್ಲಿ ವಿಚಾರಣೆ ಮಾಡಿ 22 ವರ್ಷಗಳ ಕಾಲ ಆಡಳಿತ ನಡೆಸಿ ಇದೇನೆ ನೀವು ಮಾಡಿರುವುದು ಎಂದು ಹೇಳಿ ಕೊಟ್ಟ ವಚನದಂತೆ ನಡೆಯದೇ ಇರತಕ್ಕ ನೀವು ತಪ್ಪಿತಸ್ಥರು ಎಂದು ದಂಡ ಹಾಕತಕ್ಕ ಕಾಲ ಬಂದರೆ ನಾನು ಬಹಳ ಸಂತೋಷಪಡುತ್ತೇನೆ. ರಾಜ್ಯಾಂಗಬದ್ಧವಾಗಿ ಸತ್ಯಾಗ್ರಹ ಮಾಡತಕ್ಕ ಹಕ್ಕು ನಮಗೆ ಇದೆ, ಸಂಯುಕ್ತ ಸೋಷಿಯಲಿಸ್ಟ್ ಪಕ್ಷದ ಜನ ಸರ್ಕಾರಕ್ಕೆ ಸೇರಿರತಕ್ಕ ರೆವಿನ್ಯೂ ಜಮೀನುಗಳಲ್ಲೂ ಹಾಗೂ ಫಾರೆಸ್ಟ್ ಇರಾಖೆಗೆ ಸೇರಿರತಕ್ಕ ಸಾಗುವಳಿಗೆ ಯೋಗ್ಯವಾಗಿರತಕ್ಕ ಜಮೀನುಗಳಲ್ಲೂ ನುಗ್ಗಿ ಆ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಸಾಗುವಳಿ ಮಾಡಿರುವುದು ಅಕ್ರಮ ಸಾಗುವಳಿ ಅಲ್ಲ ಕ್ರಮವಾದ ಸಾಗುವಳಿ ಆಗಿದೆ. ಆ ಜಮೀನು ನಮ್ಮದು, ಅದರ ಹಕ್ಕು ನಮ್ಮದು, ಅದರ ಒಡೆತನ ನಮ್ಮದು, ಭೂ ಸ್ವಾಮಿತ್ವ ನಮ್ಮದು, ನಮಗೆ ಸಲ್ಲಬೇಕಾದಂತಹ ಭೂಸ್ವಾಮಿತ್ವವನ್ನು ನಾವು ಪಡೆದುಕೊಂಡಿದ್ದೇವೆ. ಈಗಾಗಲೇ ಶಿವಮೊಗ್ಗ ಜಿಲ್ಲೆಯಲ್ಲಿ ಸೊರಬ, ಸಾಗರ, ತೀರ್ಥಹಳ್ಳಿ ಮುಂತಾದ ಹಲವಾರು ಕಡೆಗಳಲ್ಲಿ ಈ ರೀತಿ ಆಗುತ್ತಾ ಇರುವುದು ಪತ್ರಿಕೆಗಳಲ್ಲಿ ಬಂದಿದೆ. ಇದು ರಾಜ್ಯಂಗ ಬದ್ಧವಾದ ಹಕ್ಕು, ಇದನ್ನು ಚಲಾವಣೆ ಮಾಡಲಿಕ್ಕೆ ನಾವು ಬಾಧ್ಯಸ್ತರು. ಈ ಒಂದು ಅಂಧೋಳನ ಪ್ರಾರಂಭವಾದಮೇಲೆ ಸಿರಸಿ ತಾಲ್ಲೂಕಿನಲ್ಲಿ ನೂರಾರು ಜನರು ಅರೆಸ್ಟ್ ಆಗಿ ಜೈಲಿಗೆ ಹೋಗಿದ್ದಾರೆ.

ಶಿವಮೊಗ್ಗ ಜಿಲ್ಲೆಯಲ್ಲಿ, ಸೊರಬ ತಾಲ್ಲೂಕಿನಲ್ಲಿ, ಚಂದ್ರಗುತ್ತಿ ಹೋಬಳಿ, ಷಿಕಾರಿಪುರ ತಾಲ್ಲೂಕ್, ಹೀಗೆ ಆ ಜಿಲ್ಲೆಯಲ್ಲಿ ಇನ್ನೂ 7-8 ಕಡೆಗಳಲ್ಲಿ ಸತ್ಯಾಗ್ರಹ ನಡೆಯುತ್ತಿದೆ. ಈಗಾಗಲೇ ಸಾವಿರಾರು ಎಕರೆ ಜಮೀನನ್ನು ಸ್ವಾಧೀನಮಾಡಿಕೊಳ್ಳಲಾಗಿದೆ. ಹಾಲಿ ನಾವು ಎಂಟು ಸಾವಿರ ಚಿಲ್ಲರೆ ಎಕರೆಗಳನ್ನು ಪಡೆದಿದ್ದೇವೆ. ಕಾಂಗ್ರೆಸ್ ಸರ್ಕಾರದವರು ಇಲ್ಲಿಯವರೆಗೂ ಮಾಡಿರತಕ್ಕ ತಪ್ಪಿಗೆ ಅವರಿಗೆ ಒಂದು ಪಾಠವನ್ನು ಕಲಿನುವುದಕ್ಕಾಗಿ ನಾವು ಈ ಕಾರ್ಯಕ್ರಮವನ್ನು ಕೈಗೊಂಡಿ

(ಶ್ರೀ ಎಸ್. ಬಂಗಾರಪ್ಪ)

ದ್ವೇಷ. ಇದು ನಮ್ಮ ಹಕ್ಕನ್ನು ಸಾಧಿಸತಕ್ಕ ಒಂದು ಮಾರ್ಗ. ಅದನ್ನು ನಾವೀಗ ಅನುಸರಿಸುತ್ತಿದ್ದೇವೆ. ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಈಗ ಅಧಿಕ ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ಕೂಡ ದೇಶದಲ್ಲಿ ಇಂಥ ಅನೇಕ ಸತ್ಯಾಗ್ರಹಗಳನ್ನು ಮಾಡಿದೆ. ಹಿಂದೆ ಇವರು ಜೈಲಿನಲ್ಲಿದ್ದಾಗಲೂ ಅಲ್ಲಿ ಕೂಡ ಉಪವಾಸ ಸತ್ಯಾಗ್ರಹವನ್ನು ನಡೆಸಿದ್ದಾರೆ. ಆ ಸತ್ಯಾಗ್ರಹಕ್ಕೆ ಕಾರಣವೇನೆಂಬುದು ಎಲ್ಲರಿಗೂ ತಿಳಿದೇ ಇದೆ. ಇವರು ಆ ದಿವಸ ರಾಜಕೀಯ ಖೈದಿಗಳಿಗೆ ಏನು ಸೌಲತ್ತುಗಳನ್ನು ಕಾನೂನು ಪ್ರಕಾರ ಕೊಡಬಹುದಾಗಿತ್ತೋ ಅಷ್ಟನ್ನು ಕೇಳುವುದಕ್ಕಾಗಿ ಇವರು ಜೈಲಿನಲಿದ್ದಾಗ ಉಪವಾಸ ಸತ್ಯಾಗ್ರಹವನ್ನು ಮಾಡಿದ್ದಾರೆ. ಆದರೆ ಹಾಲಿ ಇರತಕ್ಕ ಸರ್ಕಾರಕ್ಕೂ ಮತ್ತು ಇವರಿಗೆ ಹಿಂದೆ ಇಲ್ಲದ್ದ ಆ ಇಂಗ್ಲೀಷ್ ಸರ್ಕಾರಕ್ಕೂ ಏನೂ ವ್ಯತ್ಯಾಸವೇ ಇಲ್ಲ. ಅಧಿಕಾರ ಕುರ್ಚಿಯಮೇಲೆ ಆ ಕೆಂಪು ಜನರಿರುವುದಕ್ಕೆ ಬದಲಾಗಿ ಇವರಿದ್ದಾರೆ. ಈ ದಿವಸ ಜೈಲಿನಲ್ಲಿ ಸಾವಿರಾರು ಜನರು ಕೊಳೆಯುತ್ತಿದ್ದಾರೆ. ಇವರು ಕೇವಲ ರಾಜಕೀಯ ಖೈದಿಗಳೇ ವಿನಾ ಇವನೇನೂ ಖೂನಿ ಅಥವಾ ಮರ್ಡರುಗಳನ್ನು ಮಾಡಿರತಕ್ಕ ಅಪರಾಧಿಗಳಲ್ಲ. ಇವರಿಗೆ ನಾನು ಕೇಳುತ್ತಿರುವುದು ಸುಪತ್ತಿಗೆಯುನಲ್ಲ ಲೇಪುಗಳನ್ನಲ್ಲ. ಕಾನೂನು ಪ್ರಕಾರ ಅವರಿಗೆ ಕೊಡಬೇಕೆಂದಿರುವ ಒಂದು ಹಾಸಿಗೆ ಒಂದು ಹೊದಿಕೆಯನ್ನಾದರೂ ಕೊಡಿ ಎಂದು. ಅಲ್ಲಿ ಸಾವಿರಾರು ಜನ ಸತ್ಯಾಗ್ರಹಿಗಳು ಜೈಲನಲ್ಲಿದ್ದರೆ ಅವರಿಗೆ ಕೇವಲ 15-20 ಕಂಬಳಿಗಳನ್ನು ಕೊಟ್ಟರೆತ್ತ? ಅವು ಹೇಗೆ ಸಾಕಾಗುತ್ತವೆ! ನಾನು ಇನ್ನು ನೆನ್ನೆತಾನೆ ನನಗೆ ಸೊರಬ ತಾಲ್ಲೂಕಿನಿಂದ ಬಂದಿರತಕ ಫೋನ್ ಮೆಸೇಜ್ ವರದಿಯ ಪ್ರಕಾರ ಆ ಸತ್ಯಾಗ್ರಹಿಗಳನ್ನು ಲಾರಿಗಳಲ್ಲಿ ತುಂಬಿಕೊಂಡು ಹೋಗಿ ಧಾರ್ವಾಡ ಮತ್ತು ಕಾರ್ವಾರಗಳ ಅರಣ್ಯಗಳಲ್ಲ ನುರಿದು ಬರುತ್ತಿದ್ದಾರಂತೆ. ಆ ಜನರನ್ನೇನು ಸರ್ಕಾರವವರು ಮಂಗಗಳೆಂದು ಭಾವಿಸಿದ್ದಾರೋ ಹಾಗೆ ಕಾಡುಗಳಲ್ಲ ಅವರನ್ನು ಸರಿದುಬರುವುದಕ್ಕೆ! ಅವರು ತಮ್ಮ ಹಕ್ಕನ್ನು ಕಾಪಾಡಿಕೊಳ್ಳುವುದಕ್ಕೆ ಸತ್ಯಾಗ್ರವನ್ನು ಮಾಡಬಾರದೇನು! ಅದೂ ಶಾಂತರೀತಿಯಿಂದ. ಅದು ಪ್ರಜೆಗಳಿಗೆ ರಾಜ್ಯಾಂಗವಿದ್ದ ವಾಗಿ ಬಂದಿರುವ ಒಂದು ಹಕ್ಕು. ಹಾಗಿದ್ದರೂ ಆ ಸತ್ಯಾಗ್ರಹಗಳನ್ನು ಅಷ್ಟು ಅಮಾನುಷ ರೀತಿಯಲ್ಲ ಕಾಣುವುದಕ್ಕೇನು ಕಾರಣ? ಹುಳಗಳು ಬಿದ್ದಿರತಕ್ಕ ಅನ್ನವನ್ನು ಊಟಕ್ಕೆ ಕೊಡುತ್ತಿದ್ದಾರಂತೆ! ಇಂಥ ದಬ್ಬಾಳಿಕೆಯನ್ನು ನಡೆಸಬಾರದು. ಇದು ಬಹಳ ಜರೂರಾದ ಹಾಗೂ ಬಹಳ ಪ್ರಾಮ್ಯುವಾದ ಮತ್ತು ಸಾರ್ವಜನಿಕ ಪ್ರಾಮುಖ್ಯತೆಯನ್ನುಳ್ಳ ವಿಚಾರವಾಗಿದೆ. ಆದ್ದರಿಂದ ಇದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅನುಮತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎನ್. ಜಯಪ್ರಕಾಶ್‌ನಾರಾಯಣ (ಸಿರ್ಸಿ).—ಸ್ವಾಮಿ ನಾನು ಒಂದು ಪ್ರಾಮುಖ್ಯ ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ.

ಅಧ್ಯಕ್ಷರು.—ನಾನು ತಮಗೆ ವೇಳೆಯನ್ನು ಬೇರೆ ಸಮಯದಲ್ಲಿ ಕೊಡುತ್ತೇನೆ.

ಶ್ರೀ ಎಂ. ಎಸ್. ಜಯಪ್ರಕಾಶ್‌ನಾರಾಯಣ್.—ನಾನು ನಮ್ಮ ಸಿರ್ಸಿ ತಾಲ್ಲೂಕಿನಲ್ಲ ನಡೆಯುವ ಒಂದು ಪ್ರಾಮುಖ್ಯ ವಿಚಾರವನ್ನು.....

ಅಧ್ಯಕ್ಷರು.—ಈಗ ಸಭೆಯ ಮುಂದೆ ಬಂದಿರತಕ್ಕ ನಿಲುವಳಿ ಸೂಚನೆಗೂ ಅದಕ್ಕೂ ಸಂಬಂಧ ಇಲ್ಲ.

Sri B. B. SAYANAK (Belgaum).—I rise to a point of order. When the hon. Speaker is on his legs can any hon. Member be moving in the House?

2-30 P.M.

Mr. SPEAKER.—I need not give any ruling on that point. When the Presiding Officer is on his legs everbody has to be seated.

Now I have heard Sri Bangarappa. There are two points involved the question of land reforms and the alleged treatment of political prisoners in the Jail. As regards the land reforms, it is a long standing question and this has to be decided by Government and it cannot form

part of the adjournment motion. As regards the ill-treatment given to the political prisoners in the Jails, it is a matter of administrative nature and it cannot form part of the adjournment motion under Rule 50. I am sure the Hon'ble Member requires some information about that. His intention is to attract the attention of the Government to these facts. I will allow him to give a short notice question, or a call attention notice with regard to the alleged treatment of political prisoners in jails. But I am sorry I cannot give my consent for his adjournment motion.

Absence of a member to move his Resolutions, Amendments, etc., under Rules

ಶ್ರೀ ಎಂ. ನಾಗಪ್ಪ (ರಾಯಚೂರು).—ಮಾನ್ಯ ಅಧ್ಯಕ್ಷರಲ್ಲಿ ನಾನು ಕೇಳುವುದಿಷ್ಟೆ: ನಿನ್ನೆಯ ದಿವಸ ಅಜೆಂಡಾದಲ್ಲಿ ನನ್ನ ಎರಡು ಸ್ವಾಚ್ಯುಟರಿ ರೆಜಲ್ಯೂಷನ್ಸ್ ಇದ್ದುವು. ಒಂದನೆಯದು ಡಿಸ್ ಅಪ್ರೂವಲ್ ಆಫ್ ಆರ್ಡಿನೆನ್ಸ್ ನಂ. 4, ಎರಡನೆಯದು, ಡಿಸ್‌ಅಪ್ರೂವಲ್ ಆಫ್ ಆರ್ಡಿನೆನ್ಸ್ ನಂ. 3. ಆದರೆ ಅಧ್ಯಕ್ಷರ ಅಪ್ಪಣೆಯ ಮೇರೆಗೆ ನಾನು ನಿನ್ನೆ ಹೊರಗೆ ಹೋಗಬೇಕಾಯಿತು. ಈ ಸಭೆ ಮುಗಿಯುವವರೆಗೂ ಈ ಸಭೆಯ ಘನತೆ, ಗೌರವಗಳನ್ನು ಕಾಯಬೇಕೆನ್ನುವ ದೃಷ್ಟಿಯಿಂದ ನಾನೂ ಎನ್ನು ನನ್ನ ಜೊತೆ ಸ್ನೇಹಿತರು ಹೊರಗೇ ಉಳಿದೆವು. ಅಧ್ಯಕ್ಷರು ನನ್ನ ಸ್ವಾಚ್ಯುಟರಿ ರೆಜಲ್ಯೂಷನ್ಸಿಗೆ ನಾನು ಗೈರುಹಾಜರಿದ್ದೆನೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ತಾವು ಅದನ್ನು ಪೋಸ್ಟ್‌ಪೋನ್ ಮಾಡಬೇಕಾಗಿತ್ತು. ಸ್ವಾಚ್ಯುಟರಿ ರೆಜಲ್ಯೂಷನ್‌ಗೆ ಮೂರು ದಿವಸಗಳ ನೋಟೀಸ್ ರೂಲ್ಸ್ ಪ್ರಕಾರ ಕೊಡಬೇಕು. ನಾನು 6 ವಾರಗಳ ಮುಂಚೆಯೇ ಈ ನಿರ್ಣಯವನ್ನು ಕೊಟ್ಟಿದ್ದೇನೆ. ಅದು ರೂಲ್ಸ್ ಪ್ರಕಾರ ಅಡ್ಮಿಟ್ ಆಗಿದೆ. ಅಜೆಂಡಾದಲ್ಲಿ ಬಂದಿದೆ. ಬಂದನಂತರ ಇದರ ಬಗ್ಗೆ ಚಾಪ್ಟರ್ 13ರಲ್ಲಿ ಯಾವ ನಿರ್ದೇಶನವೂ ಇಲ್ಲ. ಯಾವಾಗ ತೆಗೆದುಕೊಳ್ಳಬೇಕು, ಯಾವ ದೃಷ್ಟಿಯಿಂದ ಡಿಸ್‌ಪೋಜ್ ಮಾಡಬೇಕೆಂಬುದನ್ನು ಅಲ್ಲಿ ಹೇಳಲಲ್ಲ. ಇನ್ನು ಚಾಪ್ಟರ್ 15ರಲ್ಲಿ ಕೊಟ್ಟಿರುವುದನ್ನು ನೋಡಿದರೆ, ಅದರಲ್ಲಿ ಎಲ್ಲಿಯೂ ಸದಸ್ಯರು ಗೈರುಹಾಜರಾಗಿದ್ದರೆ ಅವರ ನಿರ್ಣಯ ಲ್ಯಾಪ್ಸ್ ಆಗುತ್ತದೆಂದು ಹೇಳಲಿಲ್ಲ. ಆದ್ದರಿಂದ ತಾವು ಅವರೆಡು ವಿಷಯಗಳನ್ನು ನಾಳೆ ಅಥವಾ ನಾಡಿದ್ದು ತಮಗೆ ಅನುಕೂಲ ಸಿಕ್ಕಿದಾಗ ಇಲ್ಲಿ ಚರ್ಚೆಗೆ ಅವಕಾಶಮಾಡಿಕೊಡಬೇಕು. ಆದುದರಿಂದ ನಾನು ಅಧ್ಯಕ್ಷರನ್ನು ಕೇಳಿಕೊಳ್ಳುವುದು ಏನೆಂದರೆ, ತಾವು ನಿನ್ನೆ ಮಾಡಿದಂತಹ ನಿರ್ಣಯ ಏನಿದೆ, ಅದನ್ನು ಪುನರಾಲೋಚಿಸಬೇಕು. ಲ್ಯಾಪ್ಸು ಮಾಡುವುದಕ್ಕೆ ಯಾವ ರೂಲ್ಸೂ ಇಲ್ಲ. ಆದ್ದರಿಂದ ದಯವಿಟ್ಟು ಅದನ್ನು ಅಜೆಂಡಾದಲ್ಲಿ ಪುನಃ ತೆಗೆದುಕೊಂಡು ಬರಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—I want to clarify one thing. A member should be present as per rules to move his resolution, amendments or whatever it may be. Supposing he is not present for any reason which is beyond his control, I want to know from the hon. Member whether the business of the House should be stopped ? The work of the House cannot be stopped. I want to know from the Hon. member whether he has got any authority or quotation to support his stand ? If there is no authority I will proceed further.

Sri M. NAGAPPA.—Under Rule 142 it is stated like this :

"If a resolution which has been admitted is not discussed during the session it shall be deemed to have been withdrawn."

(SRI M. NAGAPPA)

It should be withdrawn if a member is physically absent from the House. Supposing, a Member is absent from the House for reasons beyond his control, what should be done ? I have been sent out from the House. I don't say the business should be stopped. There was other business in the agenda. That could have been taken up and this resolution could have been postponed. It was within the powers of the Chair. There are residuary powers vested in the Chair. I will try to find out the rulings in this regard.

MR SPEAKER.—I will reserve my ruling till the Hon. Member furnished me with the details about this.

Answers to Questions tabled by Sri V. N. Patil

SRI V. N. PATIL (Humnabad).—I had sent some questions and those questions have not yet come up so far.

MR. SPEAKER.—I shall find out what has happened to those questions.

SRI V. N. PATIL.—Every time it is happening like this. My questions are very important.

MR. SPEAKER.—The hon. member may meet me in my chambers. I will try to help him.

SRI V. N. PATIL.—Every time I cannot come and meet the Hon. Speaker in his Chamber. The Government is unable to provide the answers for my questions.

MR. SPEAKER.—If the hon. member so desires he may give a notice of a motion to discuss this matter.

SRI V. N. PATIL.—Are you protecting my right ? If I send a question and that question is not answered by the Government, what should I do ?

MR. SPEAKER.—Let the hon. member give me the question number in writing and I shall find out the position.

SRI V. N. PATIL—I will give the question number, Sir.

MR. SPEAKER.—Let him give it to me in my chambers.

SRI V. N. PATIL.—I have a right to ask questions as per rules. I am not here to visit your chambers and curry favours from you. I am the last person to do that,

Personal Explanation by Sri S. Gopala Gowda *re*: a question of privilege raised by the Minister for Law, Labour and Parliamentary Affairs

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, 293ನೇ ವಿಧಿಯ ಪ್ರಕಾರ ನನ್ನೆದಿವಸ ನಡೆದ ಘಟನೆ ಮತ್ತು ನನ್ನ ವರ್ತನೆಯ ಬಗ್ಗೆ ನನ್ನ ವೈಯಕ್ತಿಕವಾದ ವಿವರಣೆಯನ್ನು ತಮ್ಮ ಅಪ್ಪಣೆ ಪಡೆದುಕೊಡಲು ಇಚ್ಛೆಪಡುತ್ತೇನೆ. ಈ ಸದನದ ಗೌರವ ಘನತೆ ಮತ್ತು ನಿಯಮಾವಳಿಗಳನ್ನು ಅನುಸರಿಸುವುದು ಮತ್ತು ಕಾಪಾಡುವುದು ತಮ್ಮ ಹಾಗೂ ಮಾನ್ಯ ಸಭೆಯ ಸದಸ್ಯರ ಮತ್ತು ಮುಂದುವರೆದು ಹೇಳಬೇಕೆಂದರೆ, ಗ್ಯಾಲರಿಯಲ್ಲಿರತಕ್ಕಂಥ ಪ್ರೇಕ್ಷಕ ಮಹನೀಯರ ಕರ್ತವ್ಯವಾಗಿರುತ್ತದೆ. ಇಪೆಲ್ಲಾ ವಿಷಯಗಳನ್ನು ತಿಳಿದೂ ಕೂಡ ಒಮ್ಮೊಮ್ಮೆ ನನಗೆ ಸಭೆಯ ಹಕ್ಕುಬಾಧ್ಯತೆಗಳಿಗೆ ಧಕ್ಕೆ ತರುವ ರೀತಿಯಲ್ಲಿ ವರ್ತಿಸುವ ಪರಿಸ್ಥಿತಿ ಮತ್ತು ಉದ್ರೇಕಕರ ವಾತಾವರಣ ಉಂಟಾದುದಕ್ಕಾಗಿ ನಾನು ಬಹಳ ವಿಷಾದಿಸುತ್ತೇನೆ. ಅದರಿಂದಾಗಿ ನಾನು ಈಗ ಒಂದೆರಡು ವಿಷಯಗಳನ್ನು ವೈಯಕ್ತಿಕವಾಗಿ ಹೇಳಬೇಕಾಗಿದೆ. ನನಗೆ ಅಧಿಕ ರಕ್ತದ ಒತ್ತಡ ಇರುವುದರಿಂದ ಆಗಾಗ ಉದ್ರೇಕಗೊಳ್ಳುವುದಕ್ಕೆ ಅದು ಒಂದು ಕಾರಣ ಎಂದು ತಿಳಿದುಕೊಂಡಿದ್ದೇನೆ. ಆದರೆ ನಾನು ಈ ರಕ್ತದ ಒತ್ತಡದ ಮತ್ತು ಅನಾರೋಗ್ಯದ ಪರಿಸ್ಥಿತಿಯ ದುರ್ಲಾಭ ಅಥವಾ ಅನುಚಿತ ಲಾಭ ಪಡೆದು ಈ ಸಭೆಯ ಕಾರ್ಯಕಲಾಪಗಳಿಗೆ ಅಗೌರವ ತರುವಂಥ ಮತ್ತು ಧಕ್ಕೆಪಡಿಸುವಂಥ ಕಾರ್ಯಗಳಲ್ಲಿ ನಿರತನಾಗಬೇಕೆಂಬ ಉದ್ದೇಶ ನನಗೆ ಯಾವತ್ತೂ ಇಲ್ಲ. ನೆನ್ನೆದಿವಸ ನಾನು ಸದನಕ್ಕೆ ಬಂದು ಪ್ರಶ್ನೋತ್ತರಕಾಲದಲ್ಲಿ ಉಪಪ್ರಶ್ನೆಯನ್ನು ಹಾಕಲು ಎದ್ದಾಗ, ನಾನು ನಿಮ್ಮ ದೃಷ್ಟಿಗೆ ಬೀಳದೆ ಇದ್ದುದರಿಂದ ಮತ್ತು ಅಷ್ಟುಹೊತ್ತಿಗೆ ಸಾಕಷ್ಟು ಉಪಪ್ರಶ್ನೆಗಳನ್ನು ಹಾಕಿದ್ದರಿಂದ ತಾವು ಅನುಮತಿ ಕೊಡಲಿಲ್ಲ. ಅದಕ್ಕಾಗಿ ನಾನು ಉದ್ರೇಕಗೊಳ್ಳಬೇಕಾಯಿತು. ನಾನು ಸಿಟ್ಟಿಗೆ ಎದ್ದಾಗ ನನ್ನ ಕೈಕಾಲುಗಳು ಅಥವಾ ಬಾಯಿ ಏನು ಪ್ರತಿಕ್ರಿಯೆಯನ್ನು ಉಂಟುಮಾಡುತ್ತವೆ ಎಂದು ಹೇಳುವುದನ್ನು ನಾನು ಹೇಳಲಾರೆ. ಬಹಳ ಸಲ ನಾನು ನನ್ನ ಹತೋಟಿ ಮೀರಿ ವರ್ತಿಸಬೇಕಾಗುತ್ತದೆ. ಆ ಕಾರಣದಿಂದಲೇ ನನ್ನ ಮುಂದೆ ಇದ್ದಂತಹ ಮೈಕನ್ನು ಮುರಿದು ಬಿಸಾಕುವ ಪರಿಸ್ಥಿತಿ ಉಂಟಾಯಿತು. ಬಹುಶಃ ಆಗ ನನ್ನ ಕೈಲಿ ಯಾರದಾದರೂ ಕುತ್ತಿಗೆ ಅಥವಾ ಕೈ ಇದ್ದರೆ ಅದನ್ನು ಸಹ ಅಷ್ಟೇ ತೀವ್ರವಾಗಿ ತಿರುಗಿಸಿ ಬಿಸಾಕುತ್ತಿದ್ದೆ ಎಂದು ನನಗನ್ನಿಸುತ್ತದೆ. ಆದು ನನ್ನ ದುರದೃಷ್ಟಕರ. ಆ ರೀತಿ ನಾನು ಕೋಪತಾಪವನ್ನು ಪ್ರಕಟಿಸಬಾರದು, ಅದನ್ನು ನುಂಗಿಕೊಳ್ಳಬೇಕು, ಸಂಯಮವನ್ನು ಮೀರ ಬಾರದು ಎಂಬ ಪ್ರಜ್ಞೆ ನನಗೆ ಇದ್ದರೂ ಕೂಡ ಅನೇಕ ವೇಳೆ ನಾನು ಆದನ್ನು ಮೀರಿ ವರ್ತಿಸಿದ್ದು ಉಂಟು. ನೆನ್ನೆ ಕೂಡ ಈ ಘಟನೆ ನಡೆಯಿತು. ಆ ಬಗ್ಗೆ ನಾನು ಬಹಳವಾಗಿ ಪಶ್ಚಾತ್ತಾಪ ಪಡುತ್ತೇನೆ. ಅದಕ್ಕಾಗಿ ನಾನು ಯಾವ ಷರತ್ತೂ ಇಲ್ಲದೆ, ಅಥವಾ ಅದರಿಂದ ಏನು ಶಿಕ್ಷೆ ಯಾಗಬಹುದು ಎನ್ನುವ ಭಯವೂ ಇಲ್ಲದೆ ತಮಗೆ ಹಾಗೂ ತಮ್ಮ ಮೂಲಕ ಈ ಸದನಕ್ಕೆ ನನ್ನ ಹೃದ್ಗತವಾದಂತಹ ವಿಷಾದವನ್ನು ವ್ಯಕ್ತಪಡಿಸುತ್ತೇನೆ.

ಇನ್ನು ಈ ಮನೆಯ ಮಾನ್ಯಸದಸ್ಯರೆಲ್ಲರೂ ನಿಯಮಾವಳಿಗಳನ್ನು ಅರಿತಂತಹವರಾಗಿರುತ್ತಾರೆ. ಅದುದರಿಂದ ನನ್ನ ಪಕ್ಷದ ಸದಸ್ಯರ ಬಗ್ಗೆ ನಾನು ಒಂದೆರಡು ಅಭಯವಚನಗಳನು ತಮಗೆ ನೀಡಬಯಸುತ್ತೇನೆ. ಅವರು ನಿಷ್ಠಾವಂತ ವ್ಯಕ್ತಿಗಳು. ಅವರಿಗೆ ಸಾರ್ವಜನಿಕ ಸೇವೆಯನ್ನು ಮಾಡುವ ಆಕಾಂಕ್ಷೆ ಹಾಗೂ ಕಾತುರ ಇದೆ. ಈ ನಿಟ್ಟಿನ್ನೇಶದಲ್ಲಿ ಅವರೇನಾದರೂ ಕೂಗಾಡಿದರೆ ತಾವಾಗಲೀ ಅಥವಾ ಈ ಸದನವೇ ಆಗಲೀ ತಪ್ಪು ತಿಳಿದುಕೊಂಡು ಅವರನ್ನು ಅಪರಾಧಿಗಳಂತೆ ಶಿಕ್ಷೆಮಾಡುವುದನ್ನು ತಾವು ಪರಿಶೀಲನೆ ಮಾಡಬೇಕು ಮತ್ತು ಅವರಿಗೆ ಶಿಕ್ಷೆ ವಿಧಿಸಕೂಡದು ಎಂದು ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಯಾಚಿಸಿಕೊಳ್ಳುತ್ತೇನೆ. ಇನ್ನು ಇದರ ಬಗ್ಗೆ ನಾನು ಇಲ್ಲಿ ಹೆಚ್ಚು ಹೇಳಬೇಕಾದ ಅಗತ್ಯವಿಲ್ಲ. ಮಾನ್ಯ ಸಂಸದೀಯ ವ್ಯವಹಾರ ಖಾತೆಯ ಮಂತ್ರಿಗಳು ನನ್ನ ಬಗ್ಗೆ ಹಕ್ಕು ಬಾಧ್ಯತಾ ಸೂಚನೆಯನ್ನು ಮಂಡಿಸಿ ತಮ್ಮಲ್ಲಿ ಅದಕ್ಕಾಗಿ ಅವಕಾಶವನ್ನು ಕೇಳಿದ್ದಾರೆ. ತಾವು ಅದಕ್ಕೆ ಅವಕಾಶ ನೀಡಿ ಇದರಿಂದ ಹಕ್ಕುಬಾಧ್ಯತೆಗೆ ಚ್ಯುತಿ ಬಂದಿದೆ ಎಂದು ಹಕ್ಕುಬಾಧ್ಯತೆ ಕಮಿಟಿಗೆ ಹೋದರೆ ಆಗ ನನ್ನನ್ನು ಆ ಕಮಿಟಿಯವರು ಸೆಳೆದರೆ ನನ್ನನ್ನು ವಿಚಾರಣೆ ಮಾಡುವಾಗ ನಾನು ಅವರಿಗೆ ಸಮಂಜಸವಾದ ವಿವರಣೆಗಳನ್ನು ಕೊಟ್ಟು ಅವರು ಕೊಡುವಂತಹ ಶಿಕ್ಷೆಯನ್ನು ಅನುಭವಿಸುತ್ತೇನೆ. ಶಿಕ್ಷೆಯನ್ನು ಕಡಿಮೆಮಾಡಿಸಿಕೊಳ್ಳಬೇಕು ಎನ್ನುವ ಒಂದು ಉದ್ದೇಶದಿಂದ ನಾನು ಇಲ್ಲ ವಿವರಣೆಗಳನ್ನು ಕೊಡುತ್ತಿಲ್ಲ ಎನ್ನುವ ಮಾತುಗಳನ್ನು ಇಲ್ಲಿ ಹೇಳುತ್ತಿದ್ದೇನೆ. ನಾನು ಅಂತಃಕರಣಪೂರ್ವಕವಾಗಿ ತಮಗೆ ಹಾಗೂ ತಮ್ಮ ಮೂಲಕ ಈ ಸದನಕ್ಕೆ ಅರಿಕೆ ಮಾಡಬಯಸುತ್ತೇನೆ. ಈ ಸದನನದ ವ್ಯವಹಾರಗಳಲ್ಲಿ ಅಳುವ ಪಕ್ಷದವರಿಗಿಂತ ನಾವು ಕಡಿಮೆ ಅನಕ್ಕೆ

(ಶ್ರೀ ಎಸ್. ಗೋಪಾಲಗೌಡ)

ಯುಳ್ಳವರಲ್ಲ ಎಂದು ಕಳಕಳಿಯಿಂದ ಹೇಳುತ್ತಿದ್ದೇನೆ. ತಾವು ಇದನ್ನು ತಪ್ಪಾಗಿ ಭಾವಿಸಬಾರದು. ಆಳುವ ಪಕ್ಷದವರಲ್ಲಿ ನಾನು ಇಲ್ಲಿ ಒಂದು ಮಹತ್ವಪೂರ್ಣ ವಿಚಾರ ಪ್ರಸ್ತಾಪ ಮಾಡುತ್ತೇನೆ. ನಾನು ರಾಷ್ಟ್ರಪತಿಯವರನ್ನು ಅಭಿನಂದನೆ ಮಾಡುವ ಒಂದು ನಿರ್ಣಯವನ್ನು ತಮಗೆ ಕಳುಹಿಸಿದ್ದೆ. ಅದಕ್ಕೆ ತಾವು ಹಿಂದೆಂದೂ ಇಂತಹ ಒಂದು ಅಭಿನಂದನಾ ನಿರ್ಣಯ ಬಂದಿಲ್ಲ, ಆದುದರಿಂದ ಅದಕ್ಕೆ ಅನುಮತಿ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದಿರಿ. ತಾವು ಹೇಳಿದ ಮಾತನ್ನು ನಾನೂ ಒಪ್ಪುತ್ತೇನೆ. ಆದರೆ ನಾನು ರಾಷ್ಟ್ರಪತಿಯಾದಂತಹ ವ್ಯಕ್ತಿಗೆ ರಾಜ್ಯಾಂಗಬದ್ಧವಾಗಿ ಗೌರವ ಸಲ್ಲಬೇಕು ಎಂದು ತಿಳಿದು ಇಂತಹ ಒಂದು ಅಭಿನಂದನೆ ಸಲ್ಲಿಸಬೇಕು ಎಂದು ಇಲ್ಲಿ ನಿರ್ಣಯವನ್ನು ಕಳುಹಿಸಿದ್ದೆ. ಇಂತಹ ಒಂದು ಸತ್ಸಂಪ್ರದಾಯವನ್ನು ಇನ್ನು ಮುಂದಾದರೂ ನಾವು ಹಾಗೂ ಲೋಕ ಸಭೆಯವರು ಮತ್ತು ರಾಷ್ಟ್ರದ ಎಲ್ಲ ವಿಧಾನ ಸಭೆಗಳವರೂ ಹಾಗೂ ಪರಿಷತ್ತುಗಳವರೂ ಅನುಸರಿಸಬೇಕು. ರಾಷ್ಟ್ರಪತಿಗಳ ಸ್ಥಾನ ವಿಧಾನ ಸಭಾಪತಿಗಳ ಹಾಗೂ ಪರಿಷತ್ತುಗಳ ಸಭಾಪತಿಗಳ ಸ್ಥಾನದಂತೆ ಆಗಬಾರದು. ಕೊನೆಯ ಪಕ್ಷ ತಮ್ಮ ಅನುಮತಿ ಪಡೆದು ಈ ರಾಜ್ಯದಲ್ಲಿ ಯಾರ್ಯಾರು ಶ್ರೀ ಎ. ಎ. ಗಿರಿಯಪ್ಪರಿಗೆ ಬೆಂಬಲ ನೀಡಿ ಮತದಾನ ನೀಡಿದರೋ ಅವರ ಪರವಾಗಿ, ತಮ್ಮ ಪರವಾಗಿ ಮತ್ತು ಈ ಸದನದ ಪರವಾಗಿ ನಮ್ಮೆಲ್ಲರ ಪೂರ್ಣವಾದ ಅಭಿನಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ (ಕಾನೂನು, ಕಾರ್ಮಿಕ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು).—ಸ್ವಾಮಿ, ಮಾನ್ಯ ಸದಸ್ಯರಾದಂಥ ಶ್ರೀಮಾನ್ ಗೋಪಾಲಗೌಡರು ಈಗ ಆಡಿದಂಥ ಮಾತುಗಳು ಮುತ್ತಿನಂತಹ ಮಾತುಗಳು ಎಂದು ಹೇಳುವುದಕ್ಕೆ ನನಗೆ ಅತ್ಯಂತ ಸಂತೋಷ. ಈ ಸಭೆಯ ಕಾರ್ಯಕರಣಾಪಗಳು ಮತ್ತು ಶಿಸ್ತುನಿಯಮಗಳ ಪಾಲನೆ ಬಗ್ಗೆ ಯಾವುದೇ ಚರ್ಚೆಗೆ ಬಂದರೂ ಕೂಡ ಶ್ರೀಮಾನ್ ಗೋಪಾಲಗೌಡರು ಹೇಳುವಂಥಾ ಮಾತುಗಳು ಉಲ್ಲೇಖನೀಯ ಯೋಗ್ಯವಾದವುಗಳು. ಅವರು ಮಾತನಾಡುವಂಥ ಸಮಯದಲ್ಲಿ ನಮ್ಮೆಲ್ಲರ ಅಂಕಿಕರಣವೂ ಕೂಡ ಕರಗಿ ನೀರಾಗಿದೆ ಎಂದು ಭಾವನೆ ಮಾಡಿಕೊಂಡಿದ್ದೇನೆ. ಅವರ ಆರೋಗ್ಯ ಸ್ಥಿತಿ ಈ ಸಭೆಯಲ್ಲಿ ನೋಡಿದಾಗ, ಕೇಳಿದಾಗ ನಾನು ವೈಯಕ್ತಿಕವಾಗಿ ಅತ್ಯಂತ ಚಿಂತೆಗೊಳಗಾಗಿದ್ದೇನೆ; ವ್ಯಸನಕ್ಕೆ ಈಡಾಗಿದ್ದೇನೆ ಎಂದು ಹೇಳಿದಾಗ ಈ ಸಭೆಯ ಸದಸ್ಯರು ನಂಬುತ್ತಾರೆಂದು ತಿಳಿದುಕೊಂಡಿದ್ದೇನೆ. ಮಹಾತ್ಮಾ ಗಾಂಧಿಯವರು ಹೇಳುತ್ತಾ ಇದ್ದರು; ಕತ್ತಲೆ ಆದಮೇಲೆ ಬೆಳಕು, ಬೆಳಕು ಆದಮೇಲೆ ಕತ್ತಲೆ ಎಂದು. ಆದುದರಿಂದ ಬೆಳಕನ ಬೆನ್ನೆ ಗೊತ್ತಾಗಬೇಕಾದರೆ ಕತ್ತಲೆ ಇರಬೇಕು. ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲಗೌಡರಂಥಹವರು, ಮಾತನಾಡುವಂಥಹವರು ಇಲ್ಲಿ ಇರಬೇಕು. ಈ ಸಭೆಯಲ್ಲಿ 17 ವರ್ಷದಿಂದಲೂ ಸದಸ್ಯರಾಗಿದ್ದಾರೆ. ಅವರ ರಾಜಕೀಯ ಜೀವನ ಆದಕ್ಕಿಂತಲೂ ಹೆಚ್ಚಿನ ಕಾಲವಿದು. ಅವರು ಸ್ವಾತಂತ್ರ್ಯ ಸಮಯದಲ್ಲಿ ಹೋರಾಡಿದರು. ದೇಶಾಭಿಮಾನದಿಂದ ಕೂಡಿರತಕ್ಕಂಥಾವರು. ಆರ್ಥಿಕ ಸ್ಥಿತಿ ಉತ್ತಮವಾಗಬೇಕು ಎಂದು ಬಯಸುವವರು. ಅವರಿಗೆ ದೇಶಾಭಿಮಾನದ ವಿಚಾರದಲ್ಲಿಯಾಗಲೀ, ಅಥವಾ ಈ ಸಭೆಯ ನಿಯಮಾವಳಿಗಳನ್ನು ಪಾಲನೆ ಮಾಡಬೇಕು ಎನ್ನುವ ವಿಚಾರದಲ್ಲಿಯಾಗಲಿ ಅದರ ಬಗ್ಗೆ ಯಾರಿಗೂ ಸಂಶಯವಿಲ್ಲ. ದುರಾದೃಷ್ಟ ಏನೋ ಪ್ರಸಂಗ ಆಗಿಹೋಯಿತು. ನಾನಾದರೂ ಸ್ವಾಮಿ, ನಿನ್ನೆ ತಮ್ಮ ಅವಗಾಹನೆಗೆ ಒಂದು ಸೂಚನೆಯನ್ನು ಮಂಡಿಸಿದ ಕಾಲದಲ್ಲಿ ಅವರಲ್ಲಿರತಕ್ಕಂಥ ಶ್ರದ್ಧೆ, ಆಸಕ್ತಿ ಅದರ ಬಗ್ಗೆ ಹೇಳಿದ್ದೇನೆ. ಈಗ ನಡೆದಂಥಾ ಘಟನೆ ತಮಗೆಲ್ಲಾ ಗೊತ್ತಿದೆ. ಈ ವಿಚಾರವಾಗಿ ಯಾವ ಮಾತು ಕೂಡ ಆಡಲಲ್ಲ. ಸ್ವಾಮಿ, ಈ ಸೂಚನೆಯನ್ನು ಸಭೆಯ ಮುಂದೆ ಮಂಡಿಸುವಾಗ ನನ್ನ ಕರ್ತವ್ಯದೃಷ್ಟಿಯಿಂದ ಮಂಡಿಸಿದನೇ ಹೊರತು ಶ್ರೀಮಾನ್ ಗೋಪಾಲ ಗೌಡರ ಮೇಲೆ ಏನಾದರೂ ಒಂದು ಆಪಾದನೆ ಮಾಡಬೇಕು, ಅಥವಾ ಆ ಮೂಲಕ ಅವರು ಯಾವುದಾದರೂ ಒಂದು ಶಿಕ್ಷೆಗೆ ಒಳಗಾಗಬೇಕು ಎನ್ನುವ ದೃಷ್ಟಿಯಿಂದ ಮಾಡಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಸೂಚನೆಯನ್ನು ಮಾಡುತ್ತಾ ಹೇಳಿದರು, ನಾನು ತಮ್ಮ ಮುಂದೆ ಮಂಡಿಸಿದಂಥ ಸೂಚನೆಯನ್ನು ಕೈಬಿಡಬೇಕು ಎಂದು. ನಾನು ಆಗಲೇ ಆಲೋಚನೆ ಮಾಡಿದೆ. ಈ ಸೂಚನೆಯನ್ನು ಕೈಬಿಡಲು ನಾನು ಸಮರ್ಥನೆ ಎಂಬ ವಿಚಾರವನ್ನು ಆಲೋಚನೆ ಮಾಡಿದೆ. ಈ ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ವಿಚಾರವನ್ನು ಚರ್ಚೆಗೆ ಈ ಸಭೆಯ ಮುಂದೆ ಇಡುವ ವೇಳೆಯಲ್ಲಿ ವಿರೋಧ ಪಕ್ಷದ ನಾಯಕರು ಯಾವುದಾದರೂ ಒಂದು ಸಲಹೆ ಮಾಡಿದ್ದರೆ, ಅದನ್ನು ಕೈಬಿಡಬೇಕೇ, ಅಥವಾ ಮುಂದುವರಿಸಬೇಕೇ ಎಂದು ಪರಿಶೀಲನೆ ಮಾಡುವ ಜವಾಬ್ದಾರಿ ಅಧ್ಯಕ್ಷರಿಗೆ ಸಂಬಂಧಪಟ್ಟಿದ್ದು. ಈ ಸೂಚನೆಯನ್ನು ತಮ್ಮ ಮುಂದೆ ಮಂಡಿಸಿದಮೇಲೆ ನನ್ನ ವೈಯಕ್ತಿಕ ಅಭಿಪ್ರಾಯದ ಮೇಲೆ ಆಗಲಿ, ಯಾವ ಸದಸ್ಯರೇ ಆಗಲಿ ಪಾಪವನ್ನು ತೆಗೆದುಕೊಳ್ಳುವುದಕ್ಕೆ ಹಕ್ಕಿಲ್ಲ.

ಅದು ಎಲ್ಲರ ಹಕ್ಕುಭಾದ್ಯತೆಗಳಿಗೂ ಸಂಬಂಧಪಟ್ಟದ್ದು. ತಮ್ಮ ಮುಂದೆ ಮುಂಡಿಸಿದಂಥ ಸೂಚನೆಯನ್ನು ಹಕ್ಕುಭಾದ್ಯತೆಗಳ ನಿಯಮಾವಳಿಗಳ ಪ್ರಕಾರವೇ ತೀರ್ಮಾನವಾಗಬೇಕೆ ವಿನಃ ವೈಯುಕ್ತಿಕವಾಗಿ ಸೂಚನೆ ಮಾಡಿದಂಥ ಸದಸ್ಯರು ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ನನ್ನ ಅಭಿಪ್ರಾಯ. ಈ ಕಾರಣದಿಂದ ನಿನ್ನೆ ವಿರೋಧ ಪಕ್ಷದ ನಾಯಕರು ಸೂಚನೆ ಮಾಡಿದಾಗ ಅದನ್ನು ಒಪ್ಪಿಕೊಳ್ಳುವುದಕ್ಕೆ ಆಗಲಿಲ್ಲ. ನಾನು ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ ಎಂದು ಹೇಳಲಿಲ್ಲ. ಈ ನಿರ್ಣಯದ ಮುಂದುವರಿಕೆ ವಿಚಾರ ಸಭೆಗೆ ಬಿಟ್ಟಿದ್ದು, ತಮಗೆ ಬಿಟ್ಟದ್ದು, ಅದರ ಪರಿಣಾಮವನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಹೇಳಿಕೆಯನ್ನು ಮಾಡಿಲ್ಲ ಎಂದು ಮಾನ್ಯ ಗೋಪಾಲ ಗೌಡರು ಹೇಳಿದ್ದಾರೆ. ಆದರಲ್ಲೂ ಕೂಡ ನನಗೆ ಸ್ಪಷ್ಟವಾದ ನಂಬಿಕೆ ಇದೆ. ನಾನು ವೈಯುಕ್ತಿಕವಾಗಿ ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಅವಕಾಶವಿದ್ದಿದ್ದರೆ ನಾನು ಯಾವ ಮರು ಮಾತೂ ಆಡದೆ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಿದ್ದೆ. ಆ ನಿರ್ಣಯವನ್ನು ತಾವು ಪರಿಶೀಲನೆ ಮಾಡಿ ತಮ್ಮ ವಿವೇಚನೆಯಿಂದ ತಾವು ಅದಕ್ಕೆ ಅವಕಾಶ ಕೊಡದೆ ಹೋದರೆ ನಾನು ಅದರಿಂದ ದುಃಖಿತನಾಗುವುದಿಲ್ಲ, ಅವಕಾಶ ಕೊಟ್ಟರೆ ಸಂತೋಷವೂ ಪಡುವುದಿಲ್ಲ. ಈ ನಿರ್ಣಯ ಸಭೆಯಲ್ಲಿ ಚರ್ಚೆಯಾಗಬೇಕು, ಅವರು ತೀರ್ಮಾನ ಮಾಡಬೇಕು ಎನ್ನುವಂಥ ಪರಿಸ್ಥಿತಿಯನ್ನು ಕೂಡ ನಾನು ಅಪೇಕ್ಷೆ ಪಡುವುದಿಲ್ಲ. ಕಾನೂನು ಪ್ರಕಾರ ತಮಗೆ ಅವಕಾಶವಿದ್ದರೆ, ಈ ಮಾತುಗಳನ್ನೆಲ್ಲ ಕೇಳಿದ ಮೇಲೆ ತಮ್ಮ ವಿವೇಚನೆಯಿಂದ ಅದನ್ನು ಕೈ ಬಿಡುವುದಾದರೆ ನಾನು ಅತ್ಯಂತ ಸಂತೋಷಪಡುತ್ತೇನೆ.

3-00 P.M.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ನಿನ್ನೆಯ ದಿವಸ ಸಭೆಯಲ್ಲಿ ಅವರು ನಿರ್ಣಯವನ್ನು ಇಟ್ಟಾಗ ನಾನು ಒಂದು ಕ್ರಿಯಾಲೋಪವನ್ನು ಎತ್ತಿದ್ದೇನೆ. ಅದು ತಮ್ಮ ಗಮನದಲ್ಲಿದೆ. ಅವನ್ನು ವಿಚಾರ ಮಾಡುತ್ತೇನೆಂದು ತಾವು ಹೇಳಿದಿರಿ. ಶ್ರೀಮಾನ್ ಪುಟ್ಟಸ್ವಾಮಯ್ಯನವರು ಬಹಳ ಬುದ್ಧಿವಂತಿಕೆಯಿಂದ ಭಾಷಣ ಮಾಡಿದರು; ಮನುಷ್ಯನಿಗೆ ಬುದ್ಧಿವಂತಿಕೆ ಇರಬೇಕು. ಅದರ ಜೊತೆಗೆ, ನಾನು ನಿನ್ನೆಯ ದಿನ ಹೇಳಿದಹಾಗೆ ಮಾನವೀಯತೆಯೂ ಇರಬೇಕು. ಅವರು ಹೇಳಿರತಕ್ಕ ಪ್ರಕಾರ ಆ ನಿರ್ಣಯವನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಹಕ್ಕಿಲ್ಲ ಎಂದು ಹೇಳಿದ್ದಾರೆ. ಇದೇ ಸಂದರ್ಭದಲ್ಲಿ ಅವರು ಹೇಳಿದ ಮಾತಿನಲ್ಲಿ ಒಂದು ಅರ್ಥವಿದೆ. ಅವರು ಒಂದು ಸಲಹೆಯನ್ನು ಕೊಡಬಹುದಾಗಿತ್ತು. ನಾನು ನಿರ್ಣಯವನ್ನು ಇಟ್ಟಿದ್ದೇನೆ, ಈ ಸಭೆಯ ಅನುಮತಿ ಇದ್ದರೆ ನಿರ್ಣಯವನ್ನು ಇಲ್ಲಿಗೇ ಬಿಡಬಹುದು ಎಂದು ಹೇಳಬಹುದಾಗಿತ್ತು. ತಮ್ಮ ವಿವೇಚನೆಗೆ ಬಿಟ್ಟಿದ್ದೇನೆಂದು ಅವರು ಹೇಳಿದ್ದಾರೆ. ಇದರಲ್ಲಿ ರೂಲ್ ಆಫ್ ಒರುವುದಿಲ್ಲ ಎಂದು ನನಗಾದರೂ ಅನ್ನಿಸುತ್ತದೆ. ಯಾವ ನಿಯಮಾವಳಿ ಇಲ್ಲ ತಮ್ಮ ಅನುಮತಿಯನ್ನು ಕೇಳಿದುಕೊಂಡರೆ ಅದರಿಂದ ವಿನಾಯಿತಿ ಪಡೆಯುವುದಕ್ಕೆ ನಮ್ಮ ನಿಯಮಾವಳಿಯಲ್ಲಿ ಬೇಕಾದಷ್ಟು ಅವಕಾಶವಿದೆ, ಇದು ತಮಗೂ ಗೊತ್ತಿದೆ. ನಾನು ಆ ನಿಯಮವನ್ನು ಓದುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ಗೋಪಾಲ ಗೌಡರು ಸ್ಪಷ್ಟಪಡಿಸಿದ್ದಾರೆ, ನಾನೇನಾದರೂ ಹೆದರಿ ಇದನ್ನು ಬಿಡಿ ಎಂದು ಹೇಳುವುದಿಲ್ಲ, ನಾನು ಮಾಡಿದ್ದು ತಪ್ಪು ಎಂದು ನನಗೆ ಮನವರಿಕೆಯಾಗಿದೆ ಎನ್ನುವ ಕಳಕಳಿಯ ಮನವಿಯನ್ನು ಸಭೆಯಮುಂದೆ ಇಟ್ಟಾಗ ಅದನ್ನು ಪುನಃ ಹಕ್ಕು ಭಾಧ್ಯತಾ ಸಮಿತಿಗೆ ಹಾಕತಕ್ಕುದರ ಔಚಿತ್ಯವಿದೆಯೇ ಎನ್ನುವುದನ್ನು ನಾನು ಇಲ್ಲಿ ಪ್ರಶ್ನಿಸ ಬೇಕಾಗಿದೆ.....

Sri K. PUTTASWAMY.—The Speaker has not given consent so far. He can refuse giving consent.

Sir, I want to clarify one point. You have not so far given your consent for my moving the motion. This is a motion which concerns the rights and privileges of the House. In my humble opinion, when I bring forward such motion the entire House is seized of the matter and the Speaker is seized of the matter. Before asking the House, the Speaker has to decide whether he is going to permit the motion to be moved or not. So much has been said about it and it is up to you to take into consideration all these things and refuse to give consent. I have made it clear. If you find you are able to refuse to give your consent, I shall be quite happy. I can say that I will be one of the happiest members.

Mr. SPEAKER.—I am very happy to hear the statements made by the hon. Member Sri S. Gopala Gowda, the Minister for Parliamentary Affairs and also the observation made by the hon. Member Sri H. Siddaveerappa. It was really unfortunate that things should have happened the way they happened. When this incident occurred I just thought within myself whether this is not the breach of privilege for the entire House to take notice of. The thing that happened was in the full view of the House. Anybody could take action but now there if no need to take action. Any action of disciplinary nature is to prevent recurrence of such things in future. That is one of the principal things. In that context, when Sri Gopala Gowda expressed his penitence for what has happened here, I do not think there is any necessity to proceed with it. In our great scriptures it is stated that a person who expresses his heartfelt sincere penitence is to be forgiven even for the greatest of sins. Therefore his penitence has got great value more value than punishments under the rules of procedure or provisions of the constitution or any statute. I therefore think that there is no necessity to go ahead with it and therefore I do not feel it necessary now to give my consent to it.

One thing I wish to say that we are developing a sense of discipline in this House. Yesterday, unfortunately I had to direct the withdrawal of three members from the House. I am happy they complied with it immediately and they did not think of committing breach of my direction. I am happy about it and I express my sense of appreciation and today Sri Gopala Gowda has made a statement which will go a long way to see that no such atmosphere of indiscipline prevails in this House. I sincerely request the Hon. Members to catch up this spirit of discipline and try to serve the people for which all of us are here. Let us try to help the people in the best way possible. I am sure that in democracy there are bound to be differences of opinion. The Government may put up certain propositions before the House which may not be palatable to the opposition and the opposition might say something unpalatable to the Government. But there is a way to resolve these things by argument and debate. The majority is bound to rule but at the same time the minority shall have the right of say. That is the position in democracy. But then there should be no scope for any indiscipline or disorderly behaviour here. I request the members to take a sort of inspiration from what has happened. Therefore, I do not think there is any necessity to proceed further in the matter and I think the chapter so far as what happened yesterday is closed.

Suspension of the S. S. P. Members on 21-9-69

Mr. SPEAKER.—I have received a note from the hon. Member Sri Nagappa to the effect that only members of the S.S.P. have been asked to withdraw from the House yesterday. It is incorrect. I found that

the withdrawal of only three members was necessary in the interest of discipline and I did it most painfully. I may assure hon. Members that it did not please me at all to give such a direction. I did it as a last resort and that too only to maintain the dignity and decorum of the House. There is no ill-will or malice or anything of that sort against the S. S. P. Members. I have absolutely no animus against any of them. All parties and groups are the same to me. If any such thing has appeared in newspapers, it is incorrect.

Sri M. NAGAPPA (Raichur).—It is stated in the newspaper that for the remainder of the session we are all suspended.

Mr. SPEAKER.—It is wrongly published.

Sri M. NAGAPPA.—So, I want to move a motion of breach of privilege.

Mr. SPEAKER.—I shall try to find out how it has appeared in the papers.

Sri M. NAGAPPA.—I shall send the newspaper to you.

Mr. SPEAKER.—I shall take note of it.

Calling Attention Notice to a matter of urgent public importance *re*: Strike by House Surgeons in the State

Sri M. NAGAPPA.—I beg to call the attention of the Health Minister regarding the strike by the House Surgeons.

Sri Y. RAMAKRISHNA (Minister for Health).—Sir, the demands of the House Surgeons are.—

(1) To increase the stipends from Rs. 150 to Rs. 250 monthly;

(2) To convert the post of non-stipendiary posts to the stipendiary ones;

(3) Appointment of post-graduates for the whole course on stipendiary basis at Rs. 250 monthly;

(4) To provide quarters for all; and

(5) To give stipends to Rotating House Surgeons who are from the Private Medical Colleges also.

As regards the first demand of increased stipends from Rs. 150 to Rs. 250, it is difficult to concede for the reasons that the stipends have been increased from Rs. 100 to Rs. 150 only in the last September 1968. This cost an extra expenditure of Rs. 2,01,000.

The stipends have been enhanced from Rs. 100 to Rs. 150 taking into consideration the recommendations of the Indian Medical Council. Even Tukol Commission has recommended the same. The financial

(SRI Y. RAMAKRISHNA)

condition of the State is such that we cannot concede the demand for increased stipend even though the Government feels sympathetic to their demands.

As regards the second demand, *i.e.*, conversion of the posts of non-stipendiary to the stipendiary ones, at persent, the number of the Housemen who are paid stipend is 335 throughout the State. It is now proposed to increase the number by about 100 so as to accommedate all students who pass out from Government Medical Colleges. This may be enough to cover all the students who passed out from the Government Medical Colleges. The increase of about 100 more House Surgeons will involve an extra expenditure of Rs. 2,00,000 per year.

As regards the third demand *i.e.*, appointment of the post-graduates for the whole course on a stipend of Rs. 250 monthly, the post-graduates are the students who are undergoing training in the various Hospitals in the various specialities as per University curriculum. The facilities are extended to the Post-graduates after their selection and they are given the benefits of leave, etc. But, however, the State Government will examine the question of giving facilities for their study during the course of their service while working in the Medical Colleges as Assistant Surgeons in the particular branch of Medical Science. The State Government will examine this question with the Universities and Indian Medical Council. The matter will be viewed sympathetically. The Central Government was giving stipend for the post graduates in the last Plan. Now the Central Government will be requested to extend the same benefits in the present plan also. If funds are available, all encouragement will be extended to the Post-graduates as far as possible.

As regards the fourth demand *i.e.*, providing quarters for all, at present, some arrangements are made in all Medical Colleges to accommodate some of the Rotating House Surgeons. It is a fact that there are no quarters or hostels specially built to accommodate the Rotating House Surgeons. The question of providing quarters for these people will cost roughly Rs. 16.00 lakhs to the State Government; in view of the paucity of the funds, it is not possible to provide quarters for these people. When funds are available, this question will be taken up by the State Government and quarters will be constructed by stages. As suggested by the Indian Medical Council, Compulsory Rotating House Surgeons are given Rs. 15 per month wherever the quarters are not provided for.

As regards the fifth demand, stipends to the Rotating House Surgeons in the private Medical Colleges—the case of the private Medical Colleges is totally different as compared to the students who come out from the Government institutions. Since they are the students of the private Medical Colleges, it is for those Colleges to see that payment is made to them by the concerned institutions.

The work in the Government Hospitals has not suffered in any way on account of the strike of the Compulsory Rotating House Surgeons as the existing Assistant Surgeons, Nurses and Senior staff are looking after the work.

ಶ್ರೀ ಎಂ. ನಾಗಪ್ಪ,—ಮಾನ್ಯ ಸಚಿವರು 150 ರೂಪಾಯಿಗಳಿಗಿಂತ ಹೆಚ್ಚು ಕೊಡುವುದಕ್ಕೆ ಸಾಧ್ಯವಿಲ್ಲ ಎಂಬುದಾಗಿ ಹೇಳಿದ್ದಾರೆ. ಹಾಗೆ ಅಷ್ಟು ಹೆಚ್ಚಿಗೆ ಅವರು ಕೇಳಿರುವಷ್ಟನ್ನು ಕೊಡುವುದ ಕ್ಕಾಗದಿದ್ದರೆ ಅವರನ್ನೂ ಕರೆಸಿಕೊಂಡು ಏನಾದರೊಂದು ಪರಾಮಿಡಿಯ ತೀರ್ಮಾನ ತೆಗೆದು ಕೊಳ್ಳುವುದಕ್ಕೆ ಏನಾದರೂ ಪ್ರಯತ್ನ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ವೈ. ರಾಮಕೃಷ್ಣ.—ಕಳೆದ ಸೆಪ್ಟಂಬರಿನಲ್ಲಿ ಅವರಿಗೆ ಆ 150 ರೂಪಾಯಿಗಳ ಸ್ಟೈಪೆಂ ಡನ್ನು ಕೊಡಲಾಯಿತು. ಅದಕ್ಕೆ ಹಿಂದೆ ಅವರಿಗೆ ಕೇವಲ 75 ರೂಪಾಯಿಗಳನ್ನು ಮಾತ್ರ ಕೊಡಲಾ ಗುತ್ತಿತ್ತು. ಆದರೆ ಇತ್ತೀಚೆಗೆ ಆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರೂ ಮತ್ತು ತುಕೋಳ್ ಕಮಿಷನ್ನಿನವರೂ 150 ರೂ. ಗಳನ್ನು ಕೊಡುವಂತೆ ಶಿಫಾರ್ಸು ಮಾಡಿದ್ದರಿಂದ ನರ್ಕಾರದವರು ಆ ಮೊಬಲಗನ್ನು ಕೊಟ್ಟಿದ್ದಾರೆ, ರಾಜ್ಯದಲ್ಲಿ ಆರ್ಥಿಕಮುಗ್ಗಟ್ಟು ಬಹಳವಾಗಿರುವುದರಿಂದ ಅದಕ್ಕಿಂತ ಜಾಸ್ತಿ ಕೊಡುವುದಕ್ಕಾಗುವುದಿಲ್ಲ. ಇದೇ ವಿಚಾರವನ್ನು ನಾನು ಆ ವಿದ್ಯಾರ್ಥಿಗಳ ಮುಖಂಡರನ್ನು ಒಂದರ್ಧಾ ಎರಡಾವರ್ತಿ ಕರೆಸಿ ಅವರಿಗೂ ಹೇಳಿದ್ದೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧೀನಗರ).—2-3 ತಿಂಗಳುಗಳಿಂದಲೂ ಅವರಿಗೆ ಸಂಬಳವನ್ನು ಕೊಟ್ಟಿಲ್ಲವೆಂದು ದೂರು ಬಂದಿದೆ. ಅದನ್ನಾದರೂ ಕೊಡುವುದಕ್ಕೆ ಕೂಡಲೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಕೊಡದಿದ್ದರೆ ಅದನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಮಹದೇವ ಜಿ ಬಣಕಾರ್ (ಬ್ಯಾಡಗಿ).—ಮೊದಲು ರಾಜ್ಯದಲ್ಲಿ ಕೇವಲ ಒಂದೆರಡು ಮೆಡಿ ಕಲ್ ಕಾಲೇಜುಗಳಿದ್ದವು. ಇತ್ತೀಚೆಗೆ ರಾಜ್ಯದಲ್ಲಿ ಮೆಡಿಕಲ್ ಕಾಲೇಜುಗಳನ್ನು ಹೆಚ್ಚು ಹೆಚ್ಚು ತೆರೆಯಲಾಗಿದೆ. ಈ ಹೊಸ ಮೆಡಿಕಲ್ ಕಾಲೇಜುಗಳು ಸ್ಥಾಪಿತವಾಗುವುದಕ್ಕೆ ಮೊದಲು ಈ ಹೌಸ್ ಸರ್ಜನ್‌ಗಳ ಸಂಖ್ಯೆಯನ್ನು ನಿಗದಿ ಮಾಡಿದ್ದುದು ಈಗ ಬಹಳ ಕಡಿಮೆಯಾಗಿದೆ. ಇತ್ತೀ ಚೆಗೆ ಹುಬ್ಬಳ್ಳಿ, ಗುಲ್ಬರ್ಗ, ಮಣಿಪಾಲ್ ಇನ್ನೂ ಒಂದು ಕಡೆ ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸ ಲಾಗಿದೆ. ಆದ್ದರಿಂದ ಈಗ ಈ ಹೌಸ್ ಸರ್ಜನ್‌ಗಳ ಸಂಖ್ಯೆಯನ್ನು ಜಾಸ್ತಿಮಾಡುವುದಕ್ಕೆ ಏರ್ಪಾ ಡನ್ನು ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಮೊದಲು ಇವರ ಸಂಖ್ಯೆ 335 ಇತ್ತು. ಅದನ್ನು ಇತ್ತೀಚೆಗೆ 435ಕ್ಕೆ ಏರಿಸಲಾಗಿದೆ. ಅದಕ್ಕಿಂತ ಇನ್ನೇನಾಗಬೇಕು ?

ಶ್ರೀಮತಿ ಲೀಲಾವತಿ ರೈ (ಬಂಟ್ವಾಳ್).—ಮಾನ್ಯ ಸಚಿವರು ಕಳೆದ ಒಂದೆರಡು ತಿಂಗಳ ಕೆಳಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿದ್ದಾಗ ಅಲ್ಲಿಯ ಮೆಡಿಕಲ್ ಕಾಲೇಜಿನವರು ಅಂದರೆ ಅಲ್ಲಿರತಕ್ಕ ಹೌಸ್ ಸರ್ಜನ್‌ಗಳು ಒಂದು ಮನವಿಯನ್ನು ತಮಗೆ ಸಲ್ಲಿಸಿದ್ದಾರೆ. ಎಲ್ಲ ಕಡೆಯಲ್ಲೂ ಆ ಹೌಸ್‌ಸರ್ಜ ನ್‌ಗಳಿಗೆ ಕೊಡತಕ್ಕ ಸೌಲಭ್ಯಗಳನ್ನು ಅಲ್ಲಿಯ ಹೌಸ್‌ಸರ್ಜನ್‌ಗಳಿಗೂ ಒದಗಿಸುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ನರ್ಕಾರಿ ಮೆಡಿಕಲ್ ಕಾಲೇಜಿನಲ್ಲಿರತಕ್ಕವರಿಗೆ ಮಾತ್ರ ಇದನ್ನು ಕೊಡಲಾಗುತ್ತದೆ. ಖಾನಗೀ ಮೆಡಿಕಲ್ ಕಾಲೇಜಿನಲ್ಲಿರತಕ್ಕವರಿಗೆ ಈ ಸೌಲಭ್ಯವನ್ನು ಕೊಡುವುದಕ್ಕಾ ಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ನರ್ಸುಗಳಿಗೆ 150 ರೂಪಾಯಿ ಸಂಬಳ ಕೊಡುತ್ತಾರೆ. ಅಂದಾಗ ಈ ಹೌಸ್ ಸರ್ಜನ್‌ಗಳಿಗೆ ಕೊಡತಕ್ಕ ಸ್ಟೈಪೆಂಡನ್ನು 200 ಅಥವಾ 250 ರೂಪಾಯಿಗಳಿಗೆ ಹೆಚ್ಚಿಸು ವುದಕ್ಕಾಗುವುದಿಲ್ಲವೆ ?

ಶ್ರೀ ವೈ. ರಾಮಕೃಷ್ಣ.—ಇದು ಕೇವಲ ಒಂದು ವರ್ಷದ ಕೋರ್ಸ್. ಆ ಅವಧಿಯಲ್ಲಿ ಬರ ತಕ್ಕ ಖರ್ಚುವೆಚ್ಚಗಳಿಗಾಗಿ ಅದನ್ನು ಕೊಡಲಾಗುತ್ತಿದೆ. ಇದು ಸಂಬಳವೇನೂ ಅಲ್ಲ.

ಶ್ರೀ ಕೆ. ಪ್ರಭಾಕರ್ (ವರ್ತೂರು).—ಹೌಸ್ ಸರ್ಜನ್ಸುಗಳಿಗೆ ಮತ್ತು ಡಾಕ್ಟರುಗಳಿಗೆ ಮನೆಗಳನ್ನು ಒದಗಿಸಿಕೊಡುವ ವಿಚಾರದಲ್ಲಿ ಹಣ ಒದಗಿದಾಗ ಕೊಡುತ್ತೇವೆಂದು ಉತ್ತರ ಕೊಟ್ಟಿದ್ದೀರಿ. ಮನೆಗಳನ್ನು ಒದಗಿಸುವುದನ್ನು ಒಂದು ಸೀರಿಯಸ್ ಪ್ರಾಬ್ಲಂ ಎಂದು ತಿಳಿದು ಯಾವ ರೀತಿ ಒಂದು ಪ್ಲಾನ್ ಬೇಸಿಸ್‌ಮೇಲೆ ಉಪಾಧ್ಯಾಯರಿಗೆ ಕ್ವಾರ್ಟರ್ಸ್‌ನ್ನು ಕೊಟ್ಟಿರುವ ಹಾಗೆ ಡಾಕ್ಟರುಗಳಿಗೂ ಮತ್ತು ಹೌಸ್ ಸರ್ಜನ್‌ಗಳಿಗೂ ಮನೆಗಳನ್ನು ಒದಗಿಸುವಹಾಗೆ ಸರ್ಕಾರದವರು ಏರ್ಪಾಡು ಮಾಡುತ್ತಾರೆಯೇ?

ಶ್ರೀ ವೈ. ರಾಮಕೃಷ್ಣ.—ಈಗಾಗಲೇ ಸರ್ಕಾರದವರು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಇನ್ನು ಳಿದಿರುವ ಕಡೆಗಳಲ್ಲಿ ಮುಂದೆ ಈ ಯೋಜನೆಯನ್ನು ಹಾಕಿಕೊಳ್ಳುತ್ತಿದ್ದಾರೆ.

ಶ್ರೀ ಎಚ್. ಪುಟ್ಟಸ್ವಾಮಿ (ನಾತನೂರು).—ಮೈಸೂರು ಕೆ. ಆರ್. ಆಸ್ಪತ್ರೆಯಲ್ಲಿ ಔಷಧಿಗಳನ್ನು ಕೊಡುವುದರಲ್ಲಿ ಮತ್ತು ಇಂಜಕ್ಷನ್ನುಗಳನ್ನು ಕೊಡುವುದರಲ್ಲಿ ಮೇಲಿನವರು ರಿಲೈಯ ಬಲ್ ಆಗಿ ಇಲ್ಲದೇ ಇರುವುದು ಸರ್ಕಾರಕ್ಕೆ ಗೊತ್ತಿದೆಯೇ? ಇದರಿಂದ ಜನಗಳಿಗೆ ತೊಂದರೆಯಾಗುವುದಿಲ್ಲವೆ?

ಶ್ರೀ ವೈ. ರಾಮಕೃಷ್ಣ.—ಅಂತಹ ವರದಿ ಸರ್ಕಾರಕ್ಕೆ ಬಂದಿಲ್ಲ. ಬಂದರೆ, ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಪಿ. ಗಂಗಾಧರ್.—ಒಂದು ಕಡೆ ಹೌಸ್ ಸರ್ಜನ್ಸ್ ಸ್ಟ್ರೈಕ್ ಮಾಡುತ್ತೇವೆಂದು ಹಟ ಹಿಡಿದಿದ್ದಾರೆ. ಅವರಿಂದ ರೋಗಿಗಳಿಗೆ ಏನು ಸಹಕಾರ್ಯ ದೊರಕುತ್ತಿತ್ತೋ ಅದು ದೊರಕುತ್ತಾ ಇಲ್ಲ. ನೀವು ಹೇಳಿದಾಸಿನ ಪರಿಸ್ಥಿತಿ ಸರಿಯಾಗಿಲ್ಲವೆಂದು ಹೇಳುತ್ತೀರಿ. ಈ ರೀತಿ ಜಗಳ ಮಾಡಿಕೊಂಡು, ನಿಮ್ಮ ಕಡೆಯೂ ಹಟ, ಅವರ ಕಡೆಯೂ ಹಟ ಮಾಡಿ ಹೀಗೆಯೇ ಇದನ್ನು ಮುಂದು ವರಿಸಿಕೊಂಡು ಹೋಗಬೇಕೆಂದು ಸರ್ಕಾರದ ಅಭಿಪ್ರಾಯವೋ ಅಥವಾ ನನ್ನ ಸ್ನೇಹಿತರಾದ ಮಾನ್ಯ ಶ್ರೀ ನಾಗಪ್ಪನವರು ಹೇಳಿದ ಹಾಗೆ ಇತ್ಯರ್ಥ ಮಾಡುತ್ತೀರೋ?

ಶ್ರೀ ವೈ. ರಾಮಕೃಷ್ಣ.—ಈಗಾಗಲೇ ಹೇಳಿದಹಾಗೆ ತುಕೋಳ್ ಕಮಿಷನ್ನಿನವರು ಆ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್ ಅವರು ಅವರಿಗೆ 150 ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಅವರಿಗೆ 100 ರೂಪಾಯಿಗಳಿಂದ 150 ರೂಪಾಯಿಗಳವರೆಗೆ ಮಾಡಿದ್ದು ಕಳೆದ ಸೆಪ್ಟೆಂಬರ್‌ನಲ್ಲಿ. ಪುನಃ ಜಾಸ್ತಿ ಮಾಡಬೇಕೆಂದು ಹೇಳಿದರೆ, I don't think there is any justification.

Tenth Report of the Committee on Private Members' Bills and Resolutions

Presentation.

Sri D. MANJUNATH (Hiriyur).—I present the Tenth Report of the Committee on Private Members' Bills and Resolutions.

Mr. SPEAKER.—The Report is presented.

Sri K. P. NADGOWDA (Mudhol).—I move:

"That this Assembly agrees with the Tenth Report of the Committee on Private Members' Bills and Resolutions".

Mr. SPEAKER.—The question is:

"That this Assembly agrees with the Tenth Report of the Committee on Private Members' Bills and Resolutions".

The motion was adopted.

Motion for Election of members to several Committees

Sri VEERENDRA PATIL (Chief Minister).—I beg to move the following motions :

"That this Assembly do proceed to elect twelve members to the Committee on Public Accounts in accordance with sub-rule (1) of Rule 251 of the Rules of Procedure and Conduct of Business in the Mysore Legislative Assembly."

MR. SPEAKER.—Strictly according to the Rules all the motions have to be moved separately and put to the House separately, in the interest of economy of time of the House I shall request the Chief Minister to move all the motions together and I shall put them together to the House as otherwise more than half an hour would be consumed in these motions. I hope the House agrees to this procedure.

HON. MEMBERS.—Yes.

Sri VEERENDRA PATIL.—I beg to move :

"That this Assembly do proceed to elect fifteen Members to the Committee on Estimates in accordance with sub-rule (1) of Rule 254 of the Rules of the Procedure and Conduct of Business in the Mysore Legislative Assembly ;"

"There is as much reason to expect that a more balanced communal distribution will be conducive to good Government"

ಈ ರೀತಿಯಾಗಿ ಒಂದೇ ಜಾತಿಯ ಜನರಿಂದ ಎಂದರೆ ಲಿಂಗಾಯಿತರಿಂದ ಉಳಿದ ಮೈನಾರಿಟಿ ಜನಾಂಗದವರಮೇಲೆ ಈಗ ಧಾಳಿ ನಡೆಯುತ್ತಿದೆ.

ಶ್ರೀ ಎಂ. ನಾಗಪ್ಪ.—ಒಬ್ಬರಮೇಲೆ ಒಬ್ಬರು ಧಾಳಿ ಮಾಡುತ್ತಾರೆ ಎನ್ನುವ ಇತಿಹಾಸವನ್ನು ಈಗ ಹೆಚ್ಚಿಗೆ ಹೇಳುವುದು ಬೇಡಿ.

ಶ್ರೀ ಎಚ್. ಎನ್. ನಂಜೇಗೌಡ.—ಆ ರೀತಿ ಧಾಳಿ ಮಾಡುವುದಾದರೆ ಸಮತೋಲನ ಇರುವುದಿಲ್ಲ. ಸಮತೋಲನವನ್ನು ಕಾಪಾಡತಕ್ಕ ಎರಡು ಜನಾಂಗದವರು ಏನಿದ್ದಾರೆ ಅವರಿಂದ ಆ ಕಾರ್ಯ ಆಗಲಿಲ್ಲ. ರಾಜಕೀಯ ಕಾರಣದಿಂದ ಪ್ರಜಾಪ್ರಭುತ್ವದ ಯಶಸ್ಸಿಗೆ ಭಾಷಾವಾರು ಪ್ರಾಂತ ಪೂರಕವಾಗದೆ ಮಾರಕವಾಗಿದೆ. ರಾಜ್ಯದ ಬೆಳವಣಿಗೆ ನಾಶವಾಗುತ್ತ ನಡೆಯಲಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಮುಂದೆ ಇನ್ನೊಂದು ಹೆದರಿಕೆ ಇದೆ. ಅದು ಏನೆಂದರೆ ಇವೊತ್ತು ನಮ್ಮ ರಾಜ್ಯಮಟ್ಟದಲ್ಲಾಗಲೀ, ರಾಷ್ಟ್ರ ಮಟ್ಟದಲ್ಲಾಗಲೀ ಇನ್ನೊಂದು ಬಹುಸಂಖ್ಯಾತ ಜಾತಿ ಇದೆ. ಅದು ಯಾವುದೆಂದರೆ ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರ ಜನಾಂಗವಾದ ಹರಿಜನರು. ಆದ್ದರಿಂದ ನಾಳೆ ರಾಜ್ಯಮಟ್ಟದಲ್ಲಾಗಲೀ, ರಾಷ್ಟ್ರಮಟ್ಟದಲ್ಲಾಗಲೀ ಹರಿಜನರಿಂದ ಇತರ ಜನಾಂದವರಮೇಲೆ ಧಾಳಿ ನಡೆಯುವುದಕ್ಕೆ ಸಾಧ್ಯ ಇದೆ.

ಶ್ರೀ ಎಂ. ನಾಗಪ್ಪ.—ನಾನು ಒಂದು ವಿಷಯವನ್ನು ಹೇಳುತ್ತೇನೆ. ಅದೇನೆಂದರೆ ಲಿಂಗಾಯಿತರ ರಾಜ್ಯಭಾರವೇ ಬರಲಿ, ಬ್ರಾಹ್ಮಣರ ರಾಜ್ಯಭಾರವೇ ಬರಲಿ, ಒಕ್ಕಲಿಗರ ರಾಜ್ಯಭಾರವೇ ಬರಲಿ, ಮುಸ್ಲಿಮ್ ರಾಜ್ಯಭಾರವೇ ಬರಲಿ, ಅಥವಾ ಯಾವ ರಾಜ್ಯಭಾರವೇ ಬರಲಿ ಮುಖ್ಯವಾಗಿ ಜನಗಳ ಬಡತನವನ್ನು ನಿವಾರಣೆ ಮಾಡುವುದನ್ನು ಯೋಚನೆ ಮಾಡಬೇಕು.

ಶ್ರೀ ಎಚ್. ಎನ್. ನಂಜೇಗೌಡ.—ಈಗ ಗ್ರಹಚಾರ ಬಂದಿರುವುದನ್ನು ನಾನು ಮೊದಲು ಹೇಳುತ್ತೇನೆ. ರಾಷ್ಟ್ರದ ಐಕ್ಯ ಸಾಧನೆ ದೃಷ್ಟಿಯಿಂದ ರಾಜ್ಯಗಳನ್ನು ಪುನರ್‌ವಿಂಗಡಣೆ ಮಾಡಿದರು. ಆದರೆ ಅವು ಪ್ರಜಾಪ್ರಭುತ್ವದ ಯಶಸ್ಸಿಗೆ ಪೂರಕವಾಗದೆ ಮಾರಕವಾಗಿವೆ.

ಛೇರ್ಮನ್‌ರವರು.—ಇದು ರಾಜ್ಯಕ್ಕೆ ಹೆಸರಿಡುವ ವಿಷಯ. ಆದ್ದರಿಂದ ಮಾನ್ಯ ಸದಸ್ಯರು ನಿರ್ಣಯಕ್ಕೆ ಸಂಬಂಧಪಟ್ಟಹಾಗೆ ಮಾತಾನಾಡಿದರೆ ಒಳ್ಳೆಯದು.

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ ನಾನು ಇನ್ನೂ ಮನೋಭೂಮಿಕೆಯಲ್ಲಿ ಇದ್ದೇನೆ ನಿರ್ಣಯಕ್ಕೆ ಸಂಬಂಧಪಟ್ಟ ವಿಷಯಗಳನ್ನೇ ನಾನು ಹೇಳುತ್ತಿರುವುದು. ಏಕೆಂದರೆ ನಾನಿನ್ನೂ ಚಿಕ್ಕವಯಸ್ಸಿನವನು. ಇಲ್ಲದ ವಿಷಯಗಳನ್ನು ಹೇಳಿ ನಾನೇಕೆ ಪಾಪ ಕಟ್ಟಿಕೊಳ್ಳಲಿ. ಮದುವೆ ಮಾಡಬೇಕಾದರೆ ಗಂಡು ಬೇಕು, ಗಂಡೇ ಇಲ್ಲದೆ ಮದುವೆಯನ್ನು ಯಾವರೀತಿ ಮಾಡುವುದಕ್ಕಾಗುತ್ತದೆ. ಷಂಡನಿಗೆ ಮದುವೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈಗ ಮೊದಲು ರಾಜ್ಯಕ್ಕೆ ಮನೋಭೂಮಿಕೆ ತಯಾರಾಗಬೇಕು. ಅನೇಕ ಸಂದರ್ಭಗಳಲ್ಲಿ ನನ್ನ ಪ್ರಜ್ಞೆಗೆ, ನನ್ನ ಗಮನಕ್ಕೆ ಬಂದಿದೆ ಕೆಲವು ಸದಸ್ಯರು ಪಕ್ಷವನ್ನೇ ಮರೆತು ರಾಜ್ಯದ ಐಕ್ಯತೆಗೆ ಒಂದಾಗಬಹುದು. ರಾಷ್ಟ್ರದ ಐಕ್ಯತೆಗೆ ಒಂದಾಗಬಹುದು ಹಿತಕ್ಕೆ ಜಾತಿಯ ಮಟ್ಟದಲ್ಲಿ ಒಂದಾಗಬಹುದು. ಈಗ ಉದಾರಣೆಗೆ ಹೇಳುವುದಾದರೆ ವಿರೋಧಪಕ್ಷದಲ್ಲಿರತಕ್ಕ ಒಬ್ಬರು ಗೌಡರು ಕಾಂಗ್ರೆಸ್ಸಿನಲ್ಲಿರತಕ್ಕ ಇನ್ನೊಬ್ಬರು ಗೌಡರು ಹೇಳಿದಹಾಗೆ ಕೇಳಬಹುದು, ಸಹಕಾರ ನೀಡಬಹುದು, ಅದೇ ರೀತಿಯಲ್ಲಿ ವಿರೋಧ ಪಕ್ಷದಲ್ಲಿರತಕ್ಕ ಒಬ್ಬರು ಲಿಂಗಾಯಿತರು ಕಾಂಗ್ರೆಸ್ಸಿನಲ್ಲಿರತಕ್ಕ ಇನ್ನೊಬ್ಬರು ಲಿಂಗಾಯಿತರು ಹೇಳಿದ ಹಾಗೆ ಕೇಳಬಹುದು, ಅವರು ಹೇಳುವ ಮಾತು ಅವರಿಗೆ ಹಿಡಿಸಬಹುದು. ಹಾಗೆಯೇ ಮಾನ್ಯ ರಾಚಯ್ಯನವರು ಹೇಳುವ ಮಾತು ನಮ್ಮ ಕಡೆಯ ಜಯಪ್ರಕಾಶ ನಾರಾಯಣ್ ಅವರಿಗೆ ಸರಿಯಾಗಿ ಕಂಡು ಅವರು ಹೇಳಿದಹಾಗೆ ಕೇಳಬಹುದು. ಈ ವಿಚಾರವನ್ನು ಬೇಡ ಎಂದರೂ ಸಹ ಅದನ್ನು ಹಾವಿ ಬೀದಿಯಲ್ಲಿ, ಮನೆ ಮನೆಗಳಲ್ಲಿ ಜನಗಳು ಮಾತನಾಡಿಕೊಳ್ಳುತ್ತಿದ್ದಾರೆ. ಇದು ಇವೊತ್ತು ರಾಜ್ಯಮಟ್ಟದಲ್ಲಿ ನಡೆಯುತ್ತಿದೆ.

ಶ್ರೀ ಪಿ. ಎನ್. ಪಾಟೀರ್.—ಬಂದು ನನ್ನ ನಿವೇಶ ನನ್ನ ಜ್ಞಾಪಕಕ್ಕೆ ಬರುತ್ತಿದೆ. ಆಗ ನಾನು ಬೆಳಗಾಂನಲ್ಲಿ ಲಾ ಕಾರೇಜ್ ಸ್ಟೂಡೆಂಟ್ ಆಗಿದ್ದೆ. ಅಲ್ಲಿ ಹೆಂಡತಿ ಹೇಳಿದ ಮಾತನ್ನು ಗಂಡ ಕೇಳುವುದಿಲ್ಲ, ಗಂಡ ಹೇಳುವ ಮಾತನ್ನು ಹೆಂಡತಿ ಕೇಳುವುದಿಲ್ಲ. ಇಲ್ಲಿ ಬೆಳಗಾಂನ ಮಿತ್ರರೂ ಕೂಡ ಇದ್ದಾರೆ. ಉದಾಹರಣೆಗೆ ಹೇಳುವುದಾದರೆ ಗಂಡ ಮರಾಠಿಯವನಾಗಿದ್ದು ಹೆಂಡತಿ ಕನ್ನಡದವಳಾಗಿದ್ದರೆ, ಆಕೆ ಸೆನ್ಸಸ್‌ನಲ್ಲಿ ತನ್ನ ಮಕ್ಕಳ ಮಾತೃಭಾಷೆ ಕನ್ನಡವೆಂದೇ ಬರೆಸುತ್ತಾಳೆ. ಅದೇ ಗಂಡ ಕನ್ನಡದವನಾಗಿದ್ದು, ಹೆಂಡತಿ ಮರಾಠಿಯವಳಾಗಿದ್ದರೆ ಆಕೆ ಸೆನ್ಸಸ್‌ನಲ್ಲಿ ತನ್ನ ಮಕ್ಕಳ ಮಾತೃಭಾಷೆ ಮರಾಠಿ ಎಂದೇ ಬರೆಸುತ್ತಾಳೆ. ಕೇವಲ ರಾಜಕೀಯವನ್ನೇ ಗುರಿಯಾಗಿಟ್ಟುಕೊಂಡು ಈ ರೀತಿ ಮಾಡುತ್ತಿದ್ದಾರೆ. ಜಾತಿಯ ಹೆಸರಿನಲ್ಲಿ, ಭಾಷೆಯ ಹೆಸರಿನಲ್ಲಿ ಅನೇಕ ಅನ್ಯಾಯಗಳು ನಡೆಯುತ್ತಿವೆ. ಇದು ಸರಿಯಿಲ್ಲ ಎಂಬುದು ನನ್ನ ಭಾವನೆ.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಪಾಟೀರ್ ಅವರಿಗೆ ನಾನು ಯಾವ ಉತ್ತರವನ್ನೂ ಸಹ ಕೊಡದೆ ನನ್ನ ಭಾಷಣವನ್ನು ಮುಂದುವರೆಸುತ್ತೇನೆ. ಒಬ್ಬ ಮನುಷ್ಯ ದುಃಖದಲ್ಲಿ ಇದ್ದಾಗ ಯಾವ ತ್ಯಾಗಬೇಕಾದರೂ ಮಾಡುವುದಕ್ಕೆ ತಯಾರು ಇರುತ್ತಾನೆ.

ಶ್ರೀ ಸಬಾಶಿವಪ್ಪ ಪಾಟೀರ್ (ದೇವದುರ್ಗ).—ಒಂದು ಜಾತಿ ಇನ್ನೊಂದು ಜಾತಿಯನ್ನು ತುಳಿಯುವುದಕ್ಕೆ ಹೊರಟಾಗ ನಡುವಿನ ಜಾತಿಯ ಸಮಸ್ಯೆ ಏನಾಗುತ್ತದೆ ಎಂಬುದನ್ನು ಮಾನ್ಯ ಸದಸ್ಯರು ವಿಶದಪಡಿಸಬೇಕು.

ಶ್ರೀ ಎಚ್. ಎನ್. ನಂಜೇಗೌಡ.—ಅದನ್ನೂ ಹೇಳುತ್ತೇನೆ.

ಛೇರ್‌ಮನ್‌ರವರು.— ಮಾನ್ಯ ಸದಸ್ಯರು ನಿರ್ಣಯದಮೇಲೆ ಮಾತನಾಡಿದರೆ ಒಳ್ಳೆಯದು.

ಶ್ರೀ ಎಚ್. ಎನ್. ನಂಜೇಗೌಡ.—ನಿರ್ಣಯದಮೇಲೆ ಹೇಳುತ್ತಿದ್ದೇನೆ. ಒಕ್ಕಲಿಗರು ಒಕ್ಕಲಿಗರೇತರರಮೇಲೆ ಧಾಳಿ ಮಾಡುತ್ತಿದ್ದಾರೆ ಎಂದು ಹೇಳಿದರೆ ಒಕ್ಕಲಿಗರು ಒಕ್ಕಲಿಗರೇತರರ ಜುಟ್ಟನ್ನು ಕುಯ್ದು ಹೊಳೆಗೆ ಹಾಕಿದರು ಎಂದು ಅರ್ಥವಲ್ಲ. ಇವತ್ತು ಏನು ನಡೆಯುತ್ತಿದೆ ಎಂದರೆ ಅಧಿಕಾರದಲ್ಲಿರುವವರು ತಮಗೆ ಬೇಕಾದವರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳುವುದು, ತಮಗೆ ಬೇಕಾದವರಿಗೆ ಹುದ್ದೆಗಳನ್ನು ಕೊಡುವುದು, ಪ್ರಮೋಷನ್ ಕೊಡುವುದು, ಬೆಂಗಳೂರಿನಲ್ಲಿ ಸೈಟ್‌ಗಳನ್ನು ಅಲಾಟ್ ಮಾಡುವುದು ಮುಂತಾದುವೆಲ್ಲಾ ನಡೆಯುತ್ತಿದೆ. ಈ ವಿಷಯವನ್ನು ಹೊರಗಿನ ಜನರು ಹೇಳುತ್ತಿದ್ದಾರೆ ಮತ್ತು ಅಡಿಕೊಳ್ಳುತ್ತಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಕಾಲಕ್ಕೆ ಸಂಗ್ರಹಿಸಿದ ಅಂಕಿ ಅಂಶಗಳೂ ಇವೆ, ಈ ಕಾಲಕ್ಕೆ ಸಂಗ್ರಹಿಸಿದ ಅಂಕಿ ಅಂಶಗಳೂ ಇವೆ, ಎರಡನ್ನೂ ಕೂಡ ಹೋಲಿಕೆ ಮಾಡಿ ನೋಡಿದರೆ ಏನು ನಡೆಯುತ್ತಿದೆ ಎಂಬುದು ಗೊತ್ತಾಗುತ್ತದೆ.

ಶ್ರೀ ಬಿ. ಪಿ. ಗಂಗಾಧರ್.—ವಿಷಯಕ್ಕೆ ಸಂಬಂಧಪಡದ ವಿಷಯವನ್ನೇ ಮಾತನಾಡುವುದಾದರೆ, ಅದು ಪತ್ರಿಕೆಗಳಲ್ಲೆಲ್ಲಾ ಬರುತ್ತದೆ. ಹೊರಗಿನ ಜನರಲ್ಲಿ ಇಲ್ಲದ ಗೊಂದಲ ಏರ್ಪಡುವುದಕ್ಕೆ ಅವಕಾಶವಾಗುತ್ತದೆ. ಈಗ ನಿರ್ಣಯವಿರುವುದಾದರೂ ಇಷ್ಟೆ. ಈ ರಾಜ್ಯದ ಹೆಸರು ಮೈಸೂರು ಎಂದೇ ಇರಬೇಕೇ, ಕನ್ನಡನಾಡು ಎಂದು ಇರಬೇಕೇ ಅಥವಾ ಕರ್ನಾಟಕ ಎಂದು ಇರಬೇಕೇ ಎಂಬ ಬಗ್ಗೆ. ಇದರ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದರೆ ಒಳ್ಳೆಯದು ಎಂದು ಕಾಣುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.— ಮಾನ್ಯ ಸದಸ್ಯರಾದ ಶ್ರೀ ಗಂಗಾಧರ್ ಅವರ ಭಾಷಣವನ್ನೂ ಕೂಡ ನಾನು ಕೇಳಿದ್ದೇನೆ.

ಛೇರ್‌ಮನ್‌ರವರು.—ಮಾನ್ಯ ಸದಸ್ಯರು ದಯವಿಟ್ಟು ನಿರ್ಣಯದ ಬಗ್ಗೆ ಸಾಧಕಬಾಧಕಗಳನ್ನು ಹೇಳಿದರೆ ಒಳ್ಳೆಯದು.

ಶ್ರೀ ಎಚ್. ಎನ್. ನಂಜೇಗೌಡ.—ನನ್ನ ಮಾನ್ಯ ಮಿತ್ರರನೇಕರು ಕೆಲವು ಪ್ರಶ್ನೆಗಳನ್ನು ಕೇಳಿದ್ದರಿಂದ ನಾನು ಇಷ್ಟೆಲ್ಲಾ ವಿವರಿಸಬೇಕಾಯಿತು. ಅಲ್ಲದೆ ಅವರ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದುದು ನನ್ನ ಕರ್ತವ್ಯ. ನಾನು ಈ ಸಭೆಯ ಸದಸ್ಯನಾದಮೇಲೆ ಅನೇಕ ವಿಷಯಗಳು ಈ ಸಭೆಯ ಮುಂದೆ ಬಂದಿವೆ. ಕೆಲವರು ನನ್ನನ್ನು ಬೆಳ್ಳಿಗಿದ್ದಾನೆ ಎಂದು ಹೇಳಬಹುದು. ಆದರೆ ನನ್ನದು ಕಾಗೆಯ ಬಣ್ಣ ಎಂಬುದು ನನಗೆ ಗೊತ್ತು. ಈ ರಾಜ್ಯಕ್ಕೆ ಕನ್ನಡನಾಡು ಎಂದು ಹೆಸರಿಡುವ ಬಗ್ಗೆ ನನ್ನ ಅಭಿಪ್ರಾಯವನ್ನು ಮಾತ್ರ ಹೇಳುವುದಕ್ಕಾಗುವುದಿಲ್ಲ. ನಾನು ಸಾರ್ವಜನಿಕರ ಪ್ರತಿನಿಧಿಯಾಗಿರುವಾಗ, ಅವರ ಅಭಿಪ್ರಾಯ ಈ ನಿರ್ಣಯದ ಬಗ್ಗೆ ಏನಿದೆ ಎಂಬುದನ್ನು ಸಹ ಹೇಳಬೇಕಾಗಿದೆ. ನಾನು ಮಾತನಾಡುವ ವಿಷಯಗಳಲ್ಲಿ ನನ್ನ ಸ್ವಂತ ಅಭಿಪ್ರಾಯ ಶೇಕಡ 5

ಇದ್ದರೆ, ಸಾರ್ವಜನಿಕರ ಅಭಿಪ್ರಾಯ ಶೇಕಡ 95 ಇರುತ್ತದೆ. ಆದ್ದರಿಂದ ಈ ನಿರ್ಣಯವನ್ನು ಈ ಸಭೆ ಅಷ್ಟೇ ಒಪ್ಪಿದರೆ ಸಾಲದು, ಈ ನಿರ್ಣಯವನ್ನು ಇಡೀ ದೇಶದ ಜನರು ಒಪ್ಪಬೇಕು. ಆ ರೀತಿ ಸಾರ್ವಜನಿಕರ ಅಭಿಪ್ರಾಯವನ್ನು ಈ ನಿರ್ಣಯದ ಬಗ್ಗೆ ಪಡೆದರೆ ಅದು ಸ್ವಾಗತಾರ್ಹವಾಗುದೆಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕಾಗಿ ನಮ್ಮ ರಾಜ್ಯದ ಜನತೆಯ ಮನೋಭಾವನೆ ಯಾವ ರೀತಿ ಇದೆ ಎನ್ನುವುದನ್ನು ನಾನು ಇಲ್ಲಿ ಹೇಳಬೇಕಾಗಿದೆ. ಏಕೆಂದರೆ ಸಾಮಾನ್ಯ ಜನರಲ್ಲಿರುವ ಕೆಲವು ಅನುಮಾನಗಳನ್ನು ಬಗೆಹರಿಸುವುದಕ್ಕೆ ದೇಶದಲ್ಲಿ ಇಂತಹ ಪೆಡಂಭೂತಗಳು ಬಂದು ಆಗದೇ ಇರಬಹುದು ಹೀಗೆ ಇದೆ ಎಂದು ನಾವು ತಿಳಿದುಕೊಂಡರೆ ಅದು ಸರಿಯಾಗುವುದಿಲ್ಲ. ಇದಕ್ಕಾಗಿ ಮಾನ್ಯ ಸದಸ್ಯರಾದ ಶ್ರೀ ಗಂಗಾಧರ್‌ರವರಲ್ಲಿ ನಾನು ಇಲ್ಲಿ ಹೇಳುವುದನ್ನು ಅವರು ತಪ್ಪಾಗಿ ತಿಳಿದುಕೊಳ್ಳಬಾರದು ಎಂದು ಅವರನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಇದಕ್ಕಾಗಿಯೇ ನಾನು ಒಂದು ನಿರ್ಣಯವನ್ನು ಕೂಡ ಕಳಿಸಿದ್ದೇನೆ. ಅದರಲ್ಲಿ ನಾನು ಹೇಳಿರುವುದು :

5-30 P.M.

'to assess the regional imbalances in the spheres of economic, political and administrative activities of the State since 1956'

ಇದರ ಅರ್ಥ ನಮ್ಮ ರಾಜ್ಯವನ್ನು ಎರಡು ಹೋಳಾಗಿ ಮಾಡಬೇಕೆನ್ನುವ ಅರ್ಥವಲ್ಲ. ಈ ರಾಜ್ಯ ದಲ್ಲಿ ಪ್ರಾತೀಯವಾದ ಇದೆ ಎಂದು ನಾನು ನಂಬಿಕೊಂಡಿಲ್ಲ. ಪ್ರಾತೀಯವಾದದಮೇಲೆ ರಾಜ್ಯವನ್ನು ರಚನೆ ಮಾಡಕೂಡದು ಎನ್ನುವ ವಾದವನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದರೆ ಏನಾದರೂ ಒಂದು ಕೆಲಸವನ್ನು ಮಾಡಬೇಕಾದರೆ ಅದನ್ನು ಮೊದಲು ನಾನು ಒಪ್ಪಬೇಕು. I am to be convinced first. ಆ ರೀತಿ ಮೊದಲು ನನಗೆ ಕನ್‌ವಿನ್ಸ್ ಆಗಬೇಕು. ನಮ್ಮ ಈ ನಿರ್ಣಯದನ್ನೇಲೆ ನಡೆಯುತ್ತಿರುವ ಚರ್ಚೆ ನೋಡಿದರೆ ಇದು ಯಾವ ಮಟ್ಟಕ್ಕೆ ಹೋಗುತ್ತದೋ ಹೇಳುವುದಕ್ಕೆ ಆಗುವುದಿಲ್ಲ. ಇದರಿಂದ ಜನತೆಯಮೇಲೆ ಯಾವ ರೀತಿ ಪರಿಣಾಮವಾಗುತ್ತದೆ. ಎನ್ನುವುದನ್ನು ನೋಡಿಕೊಂಡು ನಾವು ಒಪ್ಪಬೇಕಾಗುತ್ತದೆ. ಇದರಲ್ಲಿ ನನಗೆ ಕಂಡುಬರುವ ಅನುಮಾನಗಳನ್ನು ಇಲ್ಲಿ ಹೇಳುತ್ತಿದ್ದೇನೆ. ಯಾರು ಯಾರು ಯಾವ ಯಾವ ಭಾಗಗಳಲ್ಲಿ ಇದರ ಬಗ್ಗೆ ಏನು ಹೇಳುತ್ತಿದ್ದಾರೆ ಅದನ್ನೆಲ್ಲಾ ನಾನು ಕೇಳಿದ್ದೇನೆ. ಕಾರವಾರ ಕ್ಯೆಬಟ್ಟು ಪುನರ್ವಿಂಗಡಣೆ ಯಾದಾಗ ಜನ ಏನು ಹೇಳಿದರು ಅದನ್ನೂ ಕೇಳಿದ್ದೇನೆ. ಕೃಷ್ಣಾ ಬೇಸಿನ್ ಮಾಡಲ್ಲ ಎಂದು ಅಲ್ಲರುವ ಜನ ಏನು ಹೇಳುತ್ತಿದ್ದಾರೆ ಅದನ್ನೂ ಕೇಳಿದ್ದೇನೆ. ಅದೂ ಅಲ್ಲದೆ ನಮ್ಮ ಮುಖ್ಯ ಮಂತ್ರಿಗಳು ಹಿಂದೆ ಪಿ. ಡಬ್ಲ್ಯು. ಡಿ. ಮಂತ್ರಿಗಳಾಗಿದ್ದಾಗ ಅವರ ಕ್ಷೇತ್ರವಾದ ಗುಲ್ಬರ್ಗಾ ಪ್ರದೇಶವನ್ನು ಯಾವ ರೀತಿ ಅಭಿವೃದ್ಧಿ ಮಾಡಿದರು ಎನ್ನುವುದನ್ನು ಅಲ್ಲಿಯ ಜನರಿಂದ ಕೇಳಿದ್ದೇನೆ. ನಾನು ಕೇವಲ ಹಳೆಯ ಮೈಸೂರಿನ ಜನರನ್ನೆ ಕೇಳಲಿಲ್ಲ. ಮತ್ತು ಕೆಲವು ಕಡೆಗಳಲ್ಲಿ ಜನರು ಇಲ್ಲ ಲಂಗಾಯಿತರ ಪ್ರಾಬಲ್ಯ ಹೆಚ್ಚಾಗುತ್ತಿದೆ ಎನ್ನುವ ವಾದವನ್ನೂ ಕೇಳಿದ್ದೇನೆ. ಇದರಿಂದಾಗಿ ಅವರಿಗೆ ಬೇಕಾದವರಿಗೆ ಕೆಲಸಗಳನ್ನು ಕೊಡುತ್ತಿದ್ದಾರೆ ಎನ್ನುವ ಮಾತುಗಳನ್ನೂ ಕೇಳಿದ್ದೇನೆ. ಹಾಗೇ ಇಂದು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಯಾವ ರೀತಿಯಾದ ಒಂದು ರೀತಿ ಜಾತೀಯ ವಾದ ಎದ್ದಿದೆ ಎನ್ನುವುದನ್ನೂ ನಾನು ಕೇಳಿದ್ದೇನೆ ಮತ್ತು ಇಲ್ಲಿನ ವಿದ್ಯಾರ್ಥಿಗಳ ತಂಡದವರು ಯಾವ ಮಟ್ಟಕ್ಕೆ ಇಳಿದಿದ್ದಾರೆ ಎನ್ನುವುದನ್ನು ಕೂಡ ನಾನು ಇಲ್ಲಿನ ಜನರಿಂದ ಕೇಳಿದ್ದೇನೆ. ಜವಾಬುದಾರಿ ಹೊತ್ತವರು ಅವರ ಕರ್ತವ್ಯ ನಿರ್ವಹಣೆಯನ್ನು ಸರಿಯಾದ ಜವಾಬುದಾರಿಯಿಂದ ಮಾಡದೇಹೋದರೆ ಆಗ ಏನು ಮಾಡುವುದಕ್ಕೆ ಆಗುವುದಿಲ್ಲ. ಇದರಲ್ಲಿ ಯಾರೇ ಏನು ಹೇಳಲಿ ಮೊದಲು ನನ್ನ ಆತ್ಮಕ್ಕೆ ಒಪ್ಪುವಂತಹ ವಿಚಾರ ಆದರೆ ಅದರಂತೆ ಕೆಲಸ ಮಾಡುವುದಕ್ಕೆ ತಯಾರಾಗುತ್ತೇನೆ. ಇಲ್ಲದಿದ್ದರೆ ಇಲ್ಲ. ಆದುದರಿಂದ ನಾನು ಹೇಳುವುದನ್ನು ಇತರರಮೇಲೆ ರಿಫ್ಲೆಕ್ಟ್ ಆಗುವಂತೆ ಹೇಳಿದರು ಎಂದು ಯಾರೂ ತಿಳಿದುಕೊಳ್ಳಬಾರದು.

ಮುಖ್ಯವಾಗಿ ಇಲ್ಲಿರುವುದು ರಾಜ್ಯದ ಹೆಸರನ್ನು ಯಾವ ರೀತಿ ಇಡಬೇಕು ಎನ್ನುವುದು. ರಾಜ್ಯದ ಹೆಸರನ್ನು ಯಾವ ರೀತಿ ಇಡಬೇಕೆನ್ನುವುದನ್ನು ಹೇಳುವಾಗ ಇದು ದೊಡ್ಡದಾಗಿರಬೇಕೇ ಇಲ್ಲವೇ ಸಣ್ಣ ರಾಜ್ಯವಾಗಿರಬೇಕೇ ಎನ್ನುವುದನ್ನು ಹೇಳಬೇಕಾದರೆ ಅದು ಒಂದು ದೊಡ್ಡ ಕತೆಯೇ ಆಗುತ್ತದೆ. ಏಕೆಂದರೆ ಇವೊತ್ತು ಈ ಭೂಮಿಯಲ್ಲಿ ಒಂದೇ ತರಹದ ರಾಜ್ಯಗಳು ಇರಬೇಕು ಎನ್ನುವುದಕ್ಕೆ ಒಂದು ರೀತಿಯಾದ ಪ್ರಯೋಗ ಮಾಡಿದ್ದಾರೆ. ಅನೇಕ ಭಾಷೆಗಳ ಜನರು ಒಟ್ಟಾಗಿ ಒಂದೇ ರೀತಿಯಾದ ರಾಜ್ಯವನ್ನು ಮಾಡಿಕೊಂಡು ಆಡಳಿತ ನಡೆಸಿರತಕ್ಕ ಉದಾಹರಣೆಗಳೂ ಕೆಲವು ಇಂದಿನ ಪ್ರಜಾಪ್ರಭುತ್ವದಲ್ಲಿ ಯೂರೋಪಿನಲ್ಲಿ ಕೆಲವು ಕಡೆಗಳಲ್ಲಿವೆ. ಚಿಕ್ಕ ಚಿಕ್ಕ ರಾಜ್ಯಗಳೂ ಆಡಳಿತ ನಡೆಸಿರುವ ಉದಾಹರಣೆಗಳೂ ಇವೆ. ಬೇರೆ ರಾಜ್ಯಗಳಲ್ಲಿ ಕೆಲಸ ಯಾವ ರೀತಿ ನಡೆಯು

(ಶ್ರೀ ಎಚ್. ಎನ್. ನಂಜೇಗೌಡ)

ತ್ತಿವೆ ಎನ್ನುವುದನ್ನು ನಾವು ನೋಡಿದ್ದೇವೆ. ಉದಾಹರಣೆಯಾಗಿ ಕೆಲವು ಕಡೆ ದೊಡ್ಡ ರಾಜ್ಯಗಳು ಎಂದರೆ ಯು. ಪಿ. ಅಂತಹ ದೊಡ್ಡ ರಾಜ್ಯಗಳಲ್ಲಿ ಯಾವ ರೀತಿ ಆಡಳಿತ ನಡೆಸುತ್ತಿವೆ ಎನ್ನುವುದನ್ನೂ ನಾವು ನೋಡಿದ್ದೇವೆ. ಇದೇ ರೀತಿ ಅಮೆರಿಕಾ ಸಂಸ್ಥಾನದಲ್ಲಿ ನುಮಾರು ನಲವತ್ತು ಲಕ್ಷ ಜನನಂಖ್ಯೆ ಇರುವ ಕಡೆಗಳಲ್ಲಿ ಯಾವ ರೀತಿ ಕೆಲಸಗಳನ್ನು ಮಾಡುತ್ತಿದ್ದಾರೆ ಎನ್ನುವುದನ್ನೂ ನಾವು ತಿಳಿದಿದ್ದೇವೆ. ಇದೇ ರೀತಿ ರಷ್ಯಾ ದೇಶದಲ್ಲೂ ಕೂಡ ಅಲ್ಲಿರುವ ಸೋವಿಯಟ್ ಪೊಲಿಟ್‌ಬ್ಯೂರೋ ಮೂಲಕ ಯಾವ ರೀತಿ ಆಡಳಿತ ನಡೆಸುತ್ತಿದ್ದಾರೆ ಎನ್ನುವುದನ್ನು ನಾವು ಕೇಳಿ ತಿಳಿದುಕೊಂಡಿದ್ದೇವೆ. ಇವನ್ನೆಲ್ಲಾ ನ ಪುಗಮನದಲ್ಲಿ ಇಟ್ಟುಕೊಂಡು ವಿಚಾರ ಮಾಡುವಾಗ ಬಹಳ ಪ್ರಾಮುಖ್ಯವಾದ ಬೇರೆ ಬೇರೆ ರಾಜ್ಯಗಳ ಜನರು ಬೇರೆ ಬೇರೆ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಪ್ರಜಾಪ್ರಭುತ್ವದ ಪದ್ಧತಿಗಳಲ್ಲಿ ಆಡಳಿತ ನಡೆಸುತ್ತಿರುವ ಚಿಕ್ಕ ಪುಟ್ಟ ರಾಜ್ಯಗಳು ಕೂಡ ದಕ್ಷತೆಯಿಂದ ಆಡಳಿತ ನಡೆಸುತ್ತಿವೆ ಎನ್ನುವುದನ್ನು ಕೇಳಿ ತಿಳಿಯಿಕೊಂಡಿದ್ದೇವೆ, ದೊಡ್ಡ ರಾಜ್ಯಗಳು ಇರುವ ಕಡೆ ಯಾವ ರೀತಿಯಾಗಿ ಆಡಳಿತ ನಡೆಸುತ್ತಿದ್ದಾರೆ ಎನ್ನುವುದನ್ನೂ ನೋಡಿ ನಾವು ತಿಳಿದ ಕೊಂಡಿದ್ದೇವೆ. ಬೃಹದಾಕಾರವಾಗಿರುವ ದೊಡ್ಡ ರಾಜ್ಯಗಳಲ್ಲಿ ಆಡಳಿತ ನಡೆಸಲು ಯಾವ ರೀತಿಯಾಗಿ ಪ್ರಜಾಪ್ರಭುತ್ವದ ನೀತಿಗಳನ್ನು ಅನುಸರಿಸುತ್ತಿದ್ದಾರೆ ಎನ್ನುವುದನ್ನೂ ಕೇಳಿ ತಿಳಿದಿದ್ದೇವೆ. ಮತ್ತು ಪ್ರಜಾ ಪ್ರಭುತ್ವಕ್ಕೆ ಧಕ್ಕೆ ಬಾರದ ರೀತಿಯಲ್ಲಿ ದಕ್ಷತೆಯಿಂದ ಆಡಳಿತ ನಡೆಸುತ್ತಿದೆ ಎನ್ನುವುದನ್ನೂ ಅನೇಕ ಜನರು ಒಪ್ಪಿಕೊಂಡಿದ್ದಾರೆ. ಆದುದರಿಂದ ಪ್ರಜಾಪ್ರಭುತ್ವದಲ್ಲಿರುವ ಪ್ರತಿನಿಧಿಗಳು ಇರುವ ಕಡೆ ಸಾಮಾನ್ಯ ಪ್ರಜೆಗೆ ಅನುಕೂಲವಾಗುವಂತೆ ಯಾವ ರೀತಿ ಆಡಳಿತ ನಡೆಯುತ್ತಿದೆ ಎನ್ನುವುದನ್ನೂ ನಾವು ಕೇಳಿ ತಿಳಿದುಕೊಂಡಿದ್ದೇವೆ. ಬಹುಶಃ ಅಮೆರಿಕಾದಲ್ಲಿ ಇರುವ ರಾಜ್ಯಾಂಗವನ್ನು ನೋಡಿದರೆ ಮತ್ತು ಇಲ್ಲಿರುವ ಪದ್ಧತಿಯನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ನಮಗೆ ಇನ್ನೂ ಚೆನ್ನಾಗಿ ಎಲ್ಲ ವಿಚಾರಗಳೂ ತಿಳಿಯುತ್ತವೆ. ಸೋವಿಯಟ್ ರಾಜ್ಯಾಂಗದಲ್ಲೂ ಕೂಡ ಅಲ್ಲಿನ ಆಡಳಿತ ನಡೆಸತಕ್ಕವರು ಒಂದು ರೀತಿಯಾದ ಪದ್ಧತಿ ಅನುಸರಿಸುತ್ತಿದ್ದಾರೆ. ಇದರಂತೆ ಅಮೆರಿಕಾದಲ್ಲಿ ಕೂಡ ಒಂದು ರೀತಿಯಾದ ಪದ್ಧತಿ ಅನುಸರಿಸುತ್ತಿದ್ದಾರೆ. ಇಲ್ಲಿನ ಜನತೆಯು ಕೂಡ ದಕ್ಷತೆಯಿಂದ ರಾಜ್ಯಭಾರ ನಡೆಸುತ್ತಾ ಬರುತ್ತಿದ್ದಾರೆ. ರಾಜ್ಯ ದೊಡ್ಡ ದಾಗಿರಬೇಕೇ ಇಲ್ಲವೇ ಚಿಕ್ಕದಾಗಿರಬೇಕೇ ಎಂದರೆ ಇದರ ಸಮಸ್ಯೆಯೇ ಬೇರೆಯಾಗುತ್ತದೆ. ಇಲ್ಲಿ ಆ ಪ್ರಶ್ನೆ ಬರುವುದಿಲ್ಲ. ಇಲ್ಲಿ ಇರುವುದು ಬರೀ ರಾಜ್ಯಕ್ಕೆ ಹೆಸರು ಇಡುವ ಪ್ರಶ್ನೆ ಇಷ್ಟೇ. ಇದರಲ್ಲಿ ಆಡಳಿತ ಚೆನ್ನಾಗಿ ನಡೆಯಬೇಕು ಅಥವಾ ನಡೆಯುತ್ತಿಲ್ಲ ಎನ್ನುವುದು ಮುಖ್ಯವಲ್ಲ. ಇದು ಬೇರೆ ವಿಷಯವಾಯಿತು. ಇಲ್ಲಿ ಇರುವುದು ಬರೀ ಹೆಸರು ಇಡುವ ಪ್ರಶ್ನೆ. ಇಂತಹ ಪ್ರಶ್ನೆ ಬಂದಾಗ ಜನತೆಯಲ್ಲಿ ಯಾವ ರೀತಿಯಾದ ಮನೋಭಾವನೆ ಇರುತ್ತದೆ ಎನ್ನುವುದಕ್ಕಾಗಿ ಇಲ್ಲಿ ನಿರ್ಣಯ ತಂದಿದ್ದಾರೆ. ಇದೇ ಇಲ್ಲಿರುವ ಪ್ರಾಮುಖ್ಯವಾದ ಅಂಶ. ಕರ್ನಾಟಕ ಎನ್ನುವ ಹೆಸರು ಇಡಬೇಕೇ ಇಲ್ಲವೇ ಹಳೆಯ ಮೈಸೂರಿನ ಜನ ಹೇಳುವಂತೆ ಕನ್ನಡ ನಾಡು ಎಂದಿರಬೇಕೇ ಎನ್ನುವ ವಿಚಾರದಲ್ಲಿ ಒಂದು ನಿರ್ಣಯ 1942—48ರಲ್ಲಿ ಆಗಿರುವ ಪ್ರಜಾಪ್ರತಿನಿಧಿ ಸಭೆಯಲ್ಲಿ ತಂದಿದ್ದರೆ, ಅದನ್ನು ಒಪ್ಪುತ್ತಿದ್ದರು. ಏಕೆಂದರೆ ಆಗ ಇದ್ದುದ ಕೇವಲ ಒಂಬತ್ತು ಜಿಲ್ಲೆಗಳಿಂದ ಕೂಡಿದ ಹಳೇ ಮೈಸೂರು ರಾಜ್ಯ. ರಾಜ್ಯ ಚಿಕ್ಕ ಸಂಸ್ಥಾನವಾಗಿತ್ತು ಆ ರಾಜ್ಯದವರು ಬೇಕಾದರೆ ಕನ್ನಡ ನಾಡು ಎಂದು ಆಗಲೇ ಹೆಸರು ಇಡಬಹುದಾಗಿತ್ತು ಮತ್ತು ಆಗ ಮಹಾರಾಜರು ಇದ್ದ ಕಾಲ. ಆಗಿನ ಜನ ಮಹಜರನ್ನು ದೇವರು ಎಂದು ಕರೆಯುತ್ತಿದ್ದ ಕಾಲ. ಅಂದಿನ ಜನ ಇಂತಹ ಬಾವನೆಗೆ ಒಪ್ಪುತ್ತಿದ್ದರು. ಆಗಿನ ಜನ ಇಂತಹ ಒಂದು ನಿರ್ಣಯವನ್ನು ಯಾವ ಅನುಮಾನವೂ ಇಲ್ಲದೆ ಒಪ್ಪುತ್ತಿದ್ದರು ಎನ್ನುವುನು ನನ್ನ ಮನಸ್ಸಿಗೆ ಅರಿವಾಗುತ್ತದೆ.

ಅಂದು ಜನತೆ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದರು. ಅವೊತ್ತು ಕನ್ನಡ ನಾಡು ಎನ್ನುವ ಹೆಸರನ್ನು ಇಡಿ ಎಂದು ನಿರ್ಣಯ ತಂದಿದ್ದರೆ, ಶ್ರೀಮಾನ್ ರಾಷಯ್ಯನವರಾಗಲಿ, ಶ್ರೀಮಾನ್ ದೇವರಾಜ ಅರಸರವರಾಗಲಿ, ಶ್ರೀಮತಿ ನಾಗರತ್ನಮ್ಮನವರಾಗಲಿ, ಎಲ್ಲರೂ ಒಪ್ಪುತ್ತಿದ್ದರು. ಆದರೆ ಈವೊತ್ತಿನ ದಿವಸ ಆ ಪರಿಸ್ಥಿತಿ ಇಲ್ಲ. ಭಾಷೆಯ ಹೆಸರಿನಲ್ಲಿ ರಾಜ್ಯವಾಗಬೇಕು ಅದಕ್ಕಾಗಿ ಕನ್ನಡನಾಡು ಎಂದು ಹೆಸರಿಡಬೇಕು ಎಂದು ನಿರ್ಣಯ ಸೂಚಿಸಿದವರು ಹೇಳುತ್ತಿದ್ದಾರೆ. ಶ್ರೀಮಾನ್ ಗಂಗಾಧರರವರು ಒಂದು ತಿದುಪಡಿ ತಂದು ಸಂಸ್ಕೃತಿ ಮತ್ತು ಇತರ ಆಧಾರದ ಮೇಲೆ ಕರ್ನಾಟಕ ಎಂದು ಹೆಸರು ಇಡುವುದೇ ಸರಿಯಾಗಿದೆ ಎಂದು ಹೇಳಿದ್ದಾರೆ. 1947-48 ರಲ್ಲಿ ಕರ್ನಾಟಕ ಅಥವಾ ಕನ್ನಡನಾಡು ಎಂದು ಹೆಸರಿಸಿ ಎನ್ನುವ ನಿರ್ಣಯ ತಂದಿದ್ದರೆ ಆವೊತ್ತಿನ ದಿನ ಜನ ಒಪ್ಪುತ್ತಿದ್ದರು. ಈವೊತ್ತಿನ ಪರಿಸ್ಥಿತಿ ಏನಿದೆ ಎಂದರೆ ರಾಜ್ಯ ಇಭ್ಭಾಗವಾಗಬೇಕು ಎನ್ನುವಂಥ ಕೂಗು ಕೇಳುತ್ತಿದ್ದೇವೆ. 1958 ರಿಂದ 1969 ರವರೆಗೆ ಈ ರಾಜ್ಯದಲ್ಲಿ ಇದ್ದಂಥ ಮನೋಭೂಮಿಕೆ

ನೋಡಿದರೆ ಈ ತಿದ್ದುಪಡಿಯನ್ನು ಒಪ್ಪುತ್ತದೆಯೇ ಎನ್ನುವ ಅನುಮಾನವಾಗಿದೆ. ಈಗ ರಾಜ್ಯ ಒಮ್ಮುಖವಾಗಿದೆಯೇ? ರಾಜ್ಯದ ಜನತೆಯ ಮನಸ್ಸಿನಲ್ಲಿ ಭಾಷೆಯ ಗಮನ ಇದೆಯೇ ಅಥವಾ ಸಂಸ್ಕೃತಿ ಕಡೆ ಅವರ ಗಮನ ಇದೆಯೇ ಎಂದು ನೋಡಿದರೆ ಆ ಪರಿಸ್ಥಿತಿ ಈವೊತ್ತಿಲ್ಲ. ರಾಜ್ಯದ ಮನೋಭೂಮಿಕೆಯಲ್ಲಿ ರಾಜ್ಯವನ್ನು ತುಂಡು ಮಾಡಬೇಕು ಎನ್ನತಕ್ಕಂಥ ಚಿತ್ರ ಈವೊತ್ತು ಬಹಳ ಮಟ್ಟಿಗೆ ಇದೆ. ಇದು ದುಃಖಕಾರಕವಾದ ಸಂಗತಿ. ನಾನು ಸಾಹಿತಿಯೊಬ್ಬರನ್ನು ನಮ್ಮ ರಾಜ್ಯಾಡಳಿತದ ಬಗ್ಗೆ ನಿಮ್ಮ ಅಭಿಪ್ರಾಯ ಏನು ಎಂದು ಕೇಳಿದೆ. ಆವರು ಬುದ್ಧಿಜೀವಿಗಳ ಮೇಲೆ ಬುದ್ಧಿಯೇತರರ ಧಾಳಿಯಾಗಿದೆ ಎಂದು, ಅಂದರೆ ಜಾಣರಮೇಲೆ ದಡ್ಡರು ನಡೆಸುತ್ತಾ ಇರತಕ್ಕಂಥ ಧಾಳಿ. ಇದು ತಪ್ಪೋ ಸರಿಯೋ ಎನ್ನುವ ಪ್ರಶ್ನೆ ಬೇರೆ. ಒಬ್ಬ ಫ್ರಾಜ್ಞರು ಹೇಳಿದ ಮಾತನ್ನು ಇಲ್ಲಿ ಹೇಳಿದ್ದೇನೆ. ಈರೀತಿ ಅವರು ಹೇಳಿದುದನ್ನು ಜ್ಞಾಪಿಸಿಕೊಂಡರೆ ನನಗೆ ಚೇಳು ಕುಟುಕಿದಂತಾಗುತ್ತದೆ.

ಶ್ರೀ ಬಿ. ರಾಚಯ್ಯ (ವ್ಯವಸಾಯ ಶಾಖೆಯ ಮಂತ್ರಿಗಳು).—ದಡ್ಡರಿಗೆ ಒಟು ಕೊಟ್ಟಿದ್ದಾರಾ?

ಶ್ರೀ ಹೆಚ್. ಎನ್. ನಂಜೇಗೌಡ.—ಈ ಪ್ರಜಾಪ್ರಭುತ್ವದಲ್ಲಿ Men of eminence; men of knowledge, men of integrity and character ಇರಬೇಕು. ಆದರೆ ಸಾಮಾನ್ಯವಾಗಿ ರಾಜಕೀಯ ವಾತಾವರಣ ಹೇಗಿದೆ ಎಂದರೆ, ಎಲ್ಲಿ ಯಾವ ಜಾತಿಯವರು ಅಧಿಕ ಸಂಖ್ಯೆಯಲ್ಲಿದ್ದಾರೋ ಆ ಜಾತಿಯವರನ್ನೇ ನಿಲ್ಲಿಸಿ, ಅಂಥವರು ಆರಿಸಿ ಬರುವ ಪರಿಸ್ಥಿತಿ ಇದೆ. ಆದರೆ ದೇವರಾಜ ಅರಸರು ಮತ್ತು ಚನ್ನಬಸಪ್ಪನಂಥವರು ಈ ತರಹ ಚುನಾವಣೆಯಲ್ಲಿ ಆರಿಸಿ ಬರುವುದು ಬಹಳ ವಿರಳ. ನನ್ನ ವಿಷಯವನ್ನೇ ಹೇಳುವುದಾದರೆ ನಾನು ಅಂತಹ ಜಾಣನಲ್ಲವೇ ಇದ್ದರೂ ಅಲ್ಲಿಯ ಜನಗಳು ಈ ಸಭೆಯಲ್ಲಿ ನಾಲ್ಕು ಮಾತಗಳನ್ನಾಡುವ ಹಾಗೆ ನಮ್ಮ ಜಾತಿಯವರು ಯಾರಾದರೂ ಇದ್ದಾರೆಯೇ ಎನ್ನುವುದನ್ನು ನೋಡಿಕೊಂಡು ನನ್ನನ್ನು ಚುನಾವಣೆಗೆ ನಿಲ್ಲಿಸಿದರು. ಅದು ಹೇಗಾದರೂ ಇರಲಿ ಚುನಾಯಿತರಾಗಿ ಇಲ್ಲಿಗೆ ಬಂದಮೇಲೆ ಎಲ್ಲರೂ ದೇಶದ ಹಿತಕಾರ್ಯಕ್ಕಾಗಿ ಶ್ರಮಿಸಬೇಕು ಕಮಲ ಕೆಸರಿನಲ್ಲಿ ಹುಟ್ಟಿದರೂ ಕೂಡ, ಅದು ಮುಂದೆ ಯಾವರೀತಿ ನಿಷ್ಕಲ್ಮಷತೆಯಿಂದ—ಶೋಭಿಸುತ್ತದೋ ಅದೇರೀತಿ ನಾವು ಎಂತಹ ಕಲ್ಮಷ ವಾತಾವರಣದಲ್ಲಿ ಚುನಾಯಿತರಾಗಿ ಬಂದರೂ ಕೂಡ ಇಲ್ಲಿಗೆ ಬಂದಮೇಲೆ ಕಮಲದೋಪಾದಿಯಲ್ಲಿ ಈ ರಾಜ್ಯವನ್ನು ರೂಢಿಸದೇ ಇದ್ದರೆ ಎನು ಪ್ರಯೋಜನ? ಶ್ರೀಮಾನ್ ಚನ್ನಬಸಪ್ಪನವರ ವಿಚಾರ ತೆಗೆದುಕೊಂಡರೆ ಅವರ ಕ್ಷೇತ್ರದಲ್ಲಿ ಗೌಡರೇ ಜಾಸ್ತಿ ಸಂಖ್ಯೆಯಲ್ಲಿದ್ದಾರೆ. ಅಲ್ಲಿ ಜಾತೀಯತೆ ಇಲ್ಲದಿದ್ದ ಕಾರಣ ಅವರು ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಯಿತು. ಹೀಗೆ ನಿಜಲಿಂಗಪ್ಪನವರು ಕಾಂಗ್ರೆಸ್ಸಿನವರು, ರಂಗನಾಥ ಪಿ.ಎಸ್.ಪಿ.ಯವರು ಎಂದು ಇರಬಾರದು. ನಂಜೇಗೌಡ ಯಾವ ಜನಾಂಗದವನೇ ಆಗಿರಲಿ, ಶ್ರೀಮಾನ್ ಗಂಗಾಧರ್ ಯಾವ ಜನಾಂಗದವರೇ ಆಗಿರಲಿ ಅವರನ್ನು ಜನಾಂಗದ ಆಧಾರದಮೇಲೆ ಚುನಾಯಿಸುವ ಮನೋಭಾವ ಹೋಗಬೇಕು. ಶ್ರೀ ರಂಗನಾಥ್ ನಮ್ಮ ಜನಾಂಗದವರು ಎಂದು ಯೋಚನೆ ಮಾಡುವುದು, ಈ ಮಟ್ಟದಲ್ಲಿ ನಡೆದುಕೊಳ್ಳುವುದಕ್ಕೆ ಇಳಿದರೆ ಈ ರಾಜ್ಯದ ಹೆಸರನ್ನು ಸಂಸ್ಕೃತಿಗೆ ಸಾಯಾಗಿ ಇರುವ ಮಟ್ಟಕ್ಕೆ ತಲುಪಿದ್ದೇವೆಯೇ ಎಂದು ಅಧ್ಯಕ್ಷರನ್ನು ಕೇಳುತ್ತೇನೆ. ಈ ನಿರ್ಣಯದ ಚರ್ಚೆಗೆ ಏಕೆ ಅವಕಾಶ ಕೊಟ್ಟಿರಿ ಎನ್ನುವುದು ನನಗೆ ಅರ್ಥವಾಗಿಲ್ಲ. ನಮ್ಮ ರಾಜ್ಯಾದಲ್ಲಿನ ಮನೋ ಭೂಮಿಕೆ ಸರಿಯಿಲ್ಲದೆ, ವಾತಾವರಣ ಸರಿಯಿಲ್ಲವೆ ಇರುವಾಗ ರಾಜ್ಯವನ್ನು ಎರಡು ಮಾಡಬೇಕು ಎನ್ನುವ ಮಾತು ಕೇಳಿ ಬರುತ್ತಿರುವಾಗ ಇಂಥ ಪೂಜ್ಯವಾದ ನಿರ್ಣಯವನ್ನು ತಂದು ಸಭೆಯಮುಂದೆ ಚರ್ಚೆಗೆ ಇಟ್ಟಿರುವುದು ಸರಿಯೇ ಎನ್ನುವ ಮಟ್ಟಕ್ಕೆ ನಾನು ತಲುಪಬೇಕಾಗಿದೆ. ಇದರ ವಿಷಯ ಕುರಿತು ಚರ್ಚೆ ಮಾಡುವಾಗ ಕೆಲವಾರು ವಿಷಯಗಳನ್ನು ನಾವು ಚರ್ಚೆ ಮಾಡಬೇಕಾಗುತ್ತದೆ. ತಂದೆ ನತ್ಕಾಗ ಹನ್ನೊಂದನೇ ದಿನದ ಕರ್ಮವನ್ನು ಮಾಡುವಾಗ ಮಗನ ಮನಸ್ಸು ಹೇಗಿರುತ್ತದೆ, ದುಃಖ ಜಾಸ್ತಿ ಆಗಬಾರದು, ದುಃಖ ಪ್ರದರ್ಶನ ಮಾಡಿದರೂ ಕೆಲವಾರು ದುಃಖಗಳನ್ನು ಅಡಗಿಸಿಕೊಂಡಿರುವಂಥ ಸಂದರ್ಭದಲ್ಲಿ ಈ ದಿನದ ಚರ್ಚೆಯಲ್ಲಿ ಭಾಗವಹಿಸಿರುವ ಕಾಲದಲ್ಲಿ ನಾನು ಅನೇಕ ಸಂಗತಿಗಳನ್ನು ನುಂಗಿಕೊಂಡು ಮಾತನಾಡುತ್ತಿದ್ದೇನೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಏಕೆ ಹೀಗಾಯಿತು, ಏನು ಕಾರಣದಿಂದ ಒಳ್ಳೆಯ ವಾತಾವರಣ ಸೃಷ್ಟಿಯಾಗಿಲ್ಲ? ಸ್ವಜನ ಪಕ್ಷಪಾತ ಮುಂತಾದುವು ತಲೆ ಹಾಕಿ ಮಂತ್ರಿಮಂಡಲವನ್ನು ರಚಿಸುವುದಕ್ಕೆ ಹೋಗುವುದು, ಇಂಥವೇ ಕಾರಣ ಎಂದು ಹೇಳಬಹುದು. ಈ ರೀತಿಯಾಗಿ ಸ್ವಜನಪಕ್ಷಪಾತದಿಂದ ಹೋದಾಗ ಬುದ್ಧಿ ಜೀವಿಗಳಿಗೆ ಪ್ರಾಮುಖ್ಯತೆ ಬರುವುದಿಲ್ಲ. ಬುದ್ಧಿ ಜೀವಿಗಳಿಗೆ ಯಾವಾಗ ಪ್ರಾಮುಖ್ಯತೆ ಬರುವುದಿಲ್ಲವೋ ಆವಾಗ ಒಳ್ಳೆಯ ಆಡಳಿತವಿರುವುದಿಲ್ಲ. ಸ್ವಜನ ಪಕ್ಷಪಾತದಿಂದ

(ಶ್ರೀ ಎಚ್. ಎನ್. ನಂಜೇಗೌಡ)

ಏನಾಗಿದೆ ಎಂದರೆ ಒಂದು ಮಗುವಿಗೆ ಒಂದು ದೊಡ್ಡ ಬಂಡೆಯನ್ನು ತರೆಯುವುದಕ್ಕೆ ಎತ್ತಿಕೋ ಎಂದು ಹೇಳಿದರೆ ಎಷ್ಟು ಕಷ್ಟವಾಗುತ್ತದೆಯೋ ಹಾಗೆ ಆಗಿದೆ. ಎಲ್ಲರಿಗೂ ಒಂದು ಲಿಮಿಟೇಷನ್ಸ್ ಇರುತ್ತವೆ. ಆಡಳಿತದಲ್ಲಿ ಶ್ರದ್ಧೆ ವಹಿಸಿ ಕೆಲಸ ಮಾಡಬೇಕಾದರೆ ಮನುಷ್ಯನಿಗೆ ಅನುಭವ ಇರಬೇಕು, ಇದೆಲ್ಲ ಇದ್ದರೆ ಅವರಿಗೆ ಫೇಲ್ಯೂರ್ಸ್ ಇರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಮಾನ್ಯ ಚನ್ನಬಸಪ್ಪನವರ ವಿಷಯವನ್ನು ತೆಗೆದುಕೊಂಡರೆ ಅವರು ದಕ್ಷ ಆಡಳಿತಗಾರರು, ಅಂಥ ಮಂತ್ರಿಗಳು ದೊರೆಯುವುದಿಲ್ಲವೆಂದು ಹೇಳುತ್ತಾರೆ. ಕೆಲವರು ಅವರಿಗೆ ಯಾವ ಮಾತೂ ಹೇಳುವುದಕ್ಕೆ ಆಗುವುದಿಲ್ಲ. ಅವರಂತೆ ಹೆಚ್ಚು ಸ್ಟ್ರಿಕ್ಟ್ ಆದರೂ ರಾಜಕೀಯದಲ್ಲಿ ನಿರ್ವಹಿಸುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಹತ್ತು ಜನರ ಮುಖಂಡರಾಗಿರುವುದಕ್ಕೆ ಅವರು ಅನ್‌ಫಿಟ್, ನಾಯಕರಾಗುವುದಕ್ಕೆ ಅನ್‌ಫಿಟ್, ಅವರಲ್ಲಿ ದಕ್ಷತೆ ಇದ್ದರೂ ಟ್ಯಾಕ್ಟ್ ಇಲ್ಲ ಎಂದು ಕೆಲವರು ಹೇಳುತ್ತಾರೆ. ಮಂತ್ರಿಮಂಡಲದಲ್ಲಿ ತೆಗೆದುಕೊಂಡಮೇಲೆ ಅವರಿಗೆ ಮೆಜಾರಿಟಿ ಬರಬೇಕು, ಸಪೋರ್ಟ್ ಇರಬೇಕು ಅವಿಶ್ವಾಸ ನೂಚನೆಯೇನಾದರೂ ಬಂದರೆ ಅದರ ವಿರುದ್ಧ ನರಿಯಾದ ಬೆಂಬಲವಿರಬೇಕು ಇಂಥ ವಿಚಾರಗಳಿಗೇ ಗಮನ ಕೊಡುತ್ತಾರೆ. ನಮ್ಮ ಊರಿಗೆ ರಸ್ತೆ ಮಾಡಿಸಿ, ಬಾವಿ ಕೊಡಿಸಿ ಎನ್ನುವ ಸಣ್ಣ ಸಣ್ಣ ವಿಚಾರಗಳನ್ನು ಸದಸ್ಯರು ಕೇಳಬೇಕೆ ಹೊರತು ರಾಜ್ಯದ ಸಮಸ್ಯೆಗಳ ಬಗ್ಗೆ ವಿಚಾರ ಮಾಡ ಕೂಡದು, ಕಾವೇರಿ ಬೇಸಿನ್‌ನಲ್ಲಿ ಏಕೆ ಏನೂ ಆಗುವುದಿಲ್ಲ, ಕೃಷ್ಣ ಬೇಸಿನ್‌ನಲ್ಲಿ ಏಕೆ ಏನನ್ನೂ ಮಾಡಿಲ್ಲ ಎಂದು ಕೇಳಬಾರದು, ಫರ್ಟಿಲೈಸರ್ಸ್ ಫ್ಯಾಕ್ಟರಿ ಏನಾಯಿತು, ಸ್ಟೀಲ್ ಫ್ಯಾಕ್ಟರಿ ಏಕೆ ಹೋಯಿತು ಎಂದು ಕೇಳಬಾರದು. ಹೇಳಿದುದನ್ನು ಕೇಳುವವರಿರಬೇಕು. ಅಂಥವರ ಆಡಳಿತವಿದ್ದರೆ ರಾಜ್ಯದಲ್ಲಿ ಒಳ್ಳೆಯ ಮನೋಭೂಮಿಕೆ ತಯಾರಾಗಬೇಕಾದರೆ ಏನಾಗಬೇಕು ಎಂಬುದನ್ನು ಯೋಚನೆ ಮಾಡಬೇಕು. ನಾನು ಇರುವ ಕೊಠಡಿಗೆ ನನ್ನ ಕ್ಷೇತ್ರದ ಜನರು ಬಂದಾಗ ಅವರನ್ನು ಕೊಠಡಿ ಬಿಟ್ಟು ಹೋಗಿ ಎಂದು ಹೇಳುವುದಕ್ಕಾಗುವುದಿಲ್ಲ. ಎಂಥ ಜನರು ಬರುತ್ತಾರೆಂದೂ ಹೇಳುವುದಕ್ಕೆ ಆಗುವುದಿಲ್ಲ. ನಾವು ಏನೇನೋ ಮಾತನಾಡುತ್ತೇವೆ. ಮಕ್ಕಳ ಮನಸ್ಸು ಇದ್ದ ಹಾಗೆ ಜನರ ಮನಸ್ಸು ಇರುತ್ತದೆ. ಜಾತೀಯತೆಯ ಮಾತು, ಎಂಡು ಮೈಸೂರು ಮಾತು ಇವನ್ನೆಲ್ಲ ಮಾತನಾಡುತ್ತ ಹೋದರೆ ಜನರೂ ಅದನ್ನೇ ನೆನೆದುಕೊಂಡು ಊರುಗಳಿಗೆ ಹೋಗುತ್ತಾರೆ. ಅವರ ಪ್ರಚೋದನೆಯಿಂದ ಅದು ರಾಜ್ಯದಲ್ಲೆಲ್ಲ, ಹರಡುತ್ತಿದೆ, ಇಂಥ ಮನೋಭೂಮಿಕೆ ರಾಜ್ಯದಲ್ಲಿ ತಯಾರಾಗುತ್ತಿದೆ. ಇದಕ್ಕೆ ಏಕೆ ಅವಕಾಶ ಕೊಡಬೇಕು?

ನಮ್ಮ ಮುಂದೆ ಇರುವ ನಿರ್ಣಯವನ್ನು ಒಪ್ಪಬೇಕೋ ಬಿಡಬೇಕೋ ಎನ್ನುವುದು ಬೇರೆ ವಿಷಯ. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಇದು ಒಂದು ಒಳ್ಳೆಯ ನಿರ್ಣಯ. ನಮ್ಮ ಸಂಸ್ಕೃತಿಯ ಆಧಾರದಮೇಲೆ, ಒಳ್ಳೆಯ ಪುಣ್ಯ ಕೆಲವರನ್ನು ಸ್ಮರಣೆಗೆ ತರಬೇಕಲ್ಲ, ಕಿತ್ತೂರು ಚನ್ನಮ್ಮ, ಬೆಳವಾಡಿ ಮಲ್ಲಮ್ಮ ಇಂಥವರನ್ನು ನೆನಪಿಗೆ ತರಬೇಕಲ್ಲ ಸಂಸ್ಕೃತಿಯ ಆಧಾರದಮೇಲೆ ಇರಬೇಕಲ್ಲ ಕರ್ನಾಟಕ ಎನ್ನುವ ಹೆಸರನ್ನು ಇಡಬೇಕು ಎಂದು ತಂದಿರುವ ತಿದ್ದುಪಡಿ ನಿರ್ಣಯ ಒಳ್ಳೆಯ ನಿರ್ಣಯ. ಈ ಹೊತ್ತು ಈ ನಿರ್ಣಯವನ್ನು ತಂದಿರುವುದರಿಂದ ಒಳ್ಳೆಯ ಪರಿಣಾಮವೇ ಆಗಬಹುದು. ಮದುವೆ ಮನೆಯಲ್ಲಿ ಸೇರಿರುವ ಜನಗಳಿಗೆ ಮದುವೆ ಮಾಡಿದಷ್ಟು ಸಂತೋಷವಾಗಬಹುದು. ತಂದೆ ತಾಯಿಗಳಿಗೆ ಹಿರಿಯ ಮಗನಿಗೆ ಮಾಡತಕ್ಕ ಮೊದಲನೇ ಮದುವೆಯಲ್ಲಿ ಎಷ್ಟು ಸಂತೋಷವಾಗಬಹುದೋ ಅಷ್ಟು ಸಂತೋಷವಾಗಬಹುದು, ಅಂಥ ಸಂಭ್ರಮ ರಾಜ್ಯದಲ್ಲಿ ಕಂಡು ಬರಬೇಕಾದರೆ ಅಂಥಾ ಸಂಭ್ರಮ ಕಂಡುಬರಬೇಕಾದರೆ, ಜನತೆಯ ಮನೋಭೂಮಿಕೆಯು ತಯಾರಿ ನಡೆಯಬೇಕು. ಅದನ್ನು ಹೇಗೆ ನಡೆಸಬೇಕು? ನಮ್ಮ ರಾಜ್ಯ, ನಮ್ಮ ಬಯಕೆಯಂತೆ ವಿಶಾಲವಾಗಿ ದೊಡ್ಡದಾದಮೇಲೆ ರಾಜ್ಯದ ಪ್ರಗತಿ ಸಮಷ್ಟಿ ದೃಷ್ಟಿಯಿಂದ ಆಗಿ ಸರ್ವರಿಗೂ ಸಾರ್ವತ್ರಿಕವಾಗಿ ಸಮಾಜದಲ್ಲಿ ನ್ಯಾಯ ದೊರೆತಿದೆ ಎನ್ನುವ ನಂಬಿಕೆ ಹುಟ್ಟುವುದನ್ನು ಮೊದಲು ಮಾಡಬೇಕು. ಅನೇಕ ಭಾಗಗಳಲ್ಲಿರುವವರಿಗೆ ಕೆಲವೇ ಭಾಗದಲ್ಲಿರುವವರು ಅಥವಾ ಕೆಲವೇ ಜನ ರಾಜ್ಯ ಸರ್ಕಾರವನ್ನು ನಡೆಸುವುದಕ್ಕೆ, ಅದರಿಂದ ಪ್ರಯೋಜನ ಪಡೆಯುವುದಕ್ಕೆ ಅವಕಾಶವಾಗಿದೆ ಎನ್ನುವುದು ಹೋಗಬೇಕು. ಈ ಹೊತ್ತು ಪರಿಸ್ಥಿತಿ ಯಾವ ಮಟ್ಟಕ್ಕೆ ಬಂದಿದೆ ಎಂದರೆ ನಮ್ಮ ಆಡಳಿತ ಪದ್ಧತಿಯನ್ನು ಕುರಿತು ಮಾತನಾಡಿಕೊಳ್ಳುವುದು ಹೇಸಿಗೆ ಎನ್ನುವ ಮಟ್ಟಕ್ಕೆ ಬಂದಿದೆ. ಮನಸ್ಸು ಬಂದಹಾಗೆ ಮಾಡಬಹುದು ಎಂದು ಹೇಳುವಂಥ ಮಟ್ಟಕ್ಕೆ ಬಂದಿದೆ. ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ನಿಜಲಿಂಗಪ್ಪನವರು ಅಧಿಕಾರವನ್ನು ಬಿಟ್ಟು ಹೋಗುವುದಕ್ಕೆ ಒಂದು ಒಂದೂವರೆ ತಿಂಗಳಿಗೆ ಮುಂಚೆ ವಿದ್ಯುಚ್ಛಕ್ತಿ ದರವನ್ನು ಏರಿಸಿ ಹೋದರು. ಆಗ ಮಾನ್ಯ ವೀರೇಂದ್ರ ಪಾಟೀಲರೇ ಪಿ. ಡಬ್ಲ್ಯು. ಇರಿಗೇಷನ್ ಮಂತ್ರಿಗಳಾಗಿದ್ದರು. ಇವರು ಮುಖ್ಯ ಮಂತ್ರಿಗಳಾದಮೇಲೆ ಹಿಂದಿನ ರೇಟಿಗೆ ಇಳಿಸಲಾಗಿದೆ ಎಂದು ಹೇಳಿದರು. ಮೊದಲು ಇದ್ದ ದರವನ್ನು ಏರಿಸುವುದು, ಅದರಲ್ಲಿ ಆ ನಂತರ ಸ್ವಲ್ಪ ಕಡಿಮೆ

ಮಾಡುವುದು. ಹೀಗೆ ಮಾಡಿ ಜನರಲ್ಲಿ ಏನೂ ಅನುಕೂಲ ಮಾಡಿಕೊಟ್ಟರು ಎನ್ನುವ ಭಾವನೆ ಉಂಟು ಮಾಡುವುದಕ್ಕೆ ಪ್ರಯತ್ನ ಮಾಡುವುದು. ಇಂಥ ಟ್ಯಾಕ್ಟಿಕ್ಸ್ ಮಾಡಿದರೆ ಜನರಲ್ಲಿ ಒಳ್ಳೆಯ ಭೂಮಿಕೆ ಸೃಷ್ಟಿಯಾಗುತ್ತದೆಯೇ? ವಿಶಾಲ ದೃಷ್ಟಿಯಿಂದ ರಾಜ್ಯದ ಹಿತಕ್ಕೆ, ರಾಜ್ಯದ ಜನತೆಯ ಸಮಷ್ಟಿ ದೃಷ್ಟಿಯಿಂದ, ಅವರು ಉದ್ಧಾರವಾಗಲಿ ಎನ್ನುವ ದೃಷ್ಟಿಯಿಂದ ಕಾರ್ಯಕ್ರಮವನ್ನು ನೀವು ತೆಗೆದುಕೊಂಡಿದ್ದೀರಿ ಎನ್ನುವ ಅಭಿಪ್ರಾಯ ಬಂದರೆ ಆವಾಗ ಜನತೆಯು ಮನೋಭೂಮಿಕೆ ವಿಶಾಲವಾಗುವುದಕ್ಕೆ ಅವಕಾಶವಾಗುತ್ತದೆ. ಜನರಿಗೆ ಮನಸ್ಸಿನಲ್ಲಿ ಕಲಸುಮೇಲೋಗರವಾಗಿ ಅವರು ತಳಮಳಗೊಂಡು ಈ ನಿರ್ಣಯವನ್ನು ಸ್ವೀಕಾರಮಾಡಲು ಸಿದ್ಧರಾಗಿಲ್ಲ. ಅವರಿಗೆ ಮನಸ್ಸಿಲ್ಲ. ದೇವರ ಪೂಜೆ ಮಾಡಬೇಕಾದರೆ ಮುಖ್ಯವಾಗಿ ಭಕ್ತಿ ಬೇಕು. ಅದಿದ್ದರೆ ಚಿನ್ನಾಗಿ ಪೂಜೆ ಮಾಡುವರು. ಪೂಜೆ ಮಾಡಬೇಕಾದರೆ ಮನಸ್ಸಿನಲ್ಲಿ ಕಲ್ಮಷವಿರಬಾರದು. ಈಗ ಕಲ್ಮಷವಿದೆ, ಅದು ಹೋಗಬೇಕು. ಸರಕಾರವು ಬೊಕ್ಕನವನ್ನು ಲೂಟಿಮಾಡಿ ಕೆಲವೇ ಪ್ರದೇಶದವರಿಗೆ ಉದ್ಧಾರಮಾಡಿದ್ದಾರೆ ಎಂಬ ಸಂಶಯವುಂಟಾಗಿದೆ ಎಂಬ ಭಾವನೆಯಿದೆ. ಅದು ಸರಿಯೋ, ತಪ್ಪೋ ಗೊತ್ತಿಲ್ಲ. ಸರಕಾರ ಹಾಗೆ ಮಾಡಿದೆಯೋ ಇಲ್ಲವೋ ತಿಳಿಯದು ಇಂದು ಕೆಲವು ಪ್ರದೇಶಗಳಲ್ಲಿ ರಾಜ್ಯ ಸರಕಾರ ಹಣ ಖರ್ಚು ಮಾಡಿ ಕೆಲಸ ಬೇಕಾದ್ದನ್ನು ಮಾಡಿಕೊಟ್ಟು ತನ್ನ ಅಧಿಕಾರ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆ ಎಂಬ ಅಭಿಪ್ರಾಯವಿದೆ. ಅದು ಹೋಗಬೇಕು.

6.00 P.M.

ಶ್ರೀ ಎಂ. ನಾಗಪ್ಪ.— ಈಗ ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ತಾಲ್ಲೂಕುವಾರು ಹಂಚಿದರೆ ಸರಿಹೋಗಬಹುದೇ !

ಶ್ರೀ ಎಚ್. ಎನ್. ನಂಜೇಗೌಡ.—ಗಾಂಧೀಜಿಯವರು ಒಂದು ಪುಸ್ತಕ ಬರೆದಿದ್ದಾರೆ, ಅದರಲ್ಲಿ ನೇರವಾಗಿ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ಕೊಡಬೇಕು ಎಂದು ತಿಳಿಸಿದ್ದಾರೆ.

ಶ್ರೀ ಎಂ. ನಾಗಪ್ಪ.—ಸ್ವಜನಪಕ್ಷಪಾತ, ಬೇಕಾದವರಿಗೆ ಅಧಿಕಾರ ಕೊಡುವುದು ಮುಂತಾ ದ್ದೆಲ್ಲಾ ನಡೆಯುತ್ತಿದೆ ಎಂದು ಹೇಳುವಾಗ ಇರುವ ಅಧಿಕಾರವನ್ನು ವಿಕೇಂದ್ರೀಕರಣಮಾಡಿದರೆ ಅನುಕೂಲವಾಗಬಹುದಲ್ಲವೇ !

ಶ್ರೀ ಎಚ್. ಎನ್. ನಂಜೇಗೌಡ.—ಆದರೆ ನಮ್ಮ ರಾಜ್ಯದಲ್ಲಿ ಅನೇಕ ಸಮಸ್ಯೆಗಳಿವೆ, ಕೃಷ್ಣಾ ನೀರಿನ ಸಮಸ್ಯೆಯಿದೆ, ಕಾವೇರಿ ನದಿ ನೀರಿನ ಸಮಸ್ಯೆ ಬೃಹದಾಕಾರವಾಗಿದೆ, 1974ರೊಳಗಾಗಿ ಕಾವೇರಿ ನೀರನ್ನು ಉಪಯೋಗಿಸಿಕೊಳ್ಳದಿದ್ದರೆ ನಂತರ ತೊಂದರೆಯಾಗುವುದು. ಹಾಗಿರುವಾಗ ರಾಜ್ಯದ ಮುಖ್ಯ ಮಂತ್ರಿಗಳು ರಾಜ್ಯದ ಪ್ರಥಮ ಪ್ರಜೆಯಾಗಿ ಇರುವ ಸಮಸ್ಯೆಗಳಿಗೆ ಸಾಕಷ್ಟು ಗಮನ ಕೊಡಬೇಕಾಗಿದೆ.

ಶ್ರೀ ಕೆ. ಪ್ರಭಾಕರ್ (ವರ್ತೂರು).—ಶ್ರೀ ನಾಗಪ್ಪನವರು ಹೇಳುವುದು ಕನಸಿನ ಕಜ್ಜಾಯ. ನಮ್ಮ ದೇಶದಲ್ಲಿ ಜಾತೀಯ ಭೂತ ಉಲ್ಬಣವಾಗಿದೆ. ಪಂಚಾಯತಿ ರಾಜ್ಯದ ಉದ್ದೇಶ ಸಾರ್ಥಕವಾಗಿಲ್ಲ, ಅದರಿಂದ ಹಿಂದುಳಿದವರಿಗೆ ನೋವಾಗಿದೆ, ರಾಭವಾಗಿಲ್ಲ. ಅಧಿಕಾರ ವಿಕೇಂದ್ರೀಕರಣವಾದರೂ ಪ್ರಯೋಜನವಾಗುವುದಿಲ್ಲ.

ಶ್ರೀ ಎಂ. ನಾಗಪ್ಪ.—ಅಧಿಕಾರ ವಿಕೇಂದ್ರೀಕರಣವಾದರೆ, ಸಾಕಷ್ಟು ಕೆಳಮಟ್ಟಕ್ಕೆ ಹೋದರೆ ಉಪಯೋಗವಾಗುವುದು.

ಶ್ರೀ ವಿ. ಎನ್. ಪಾಟೀಲ್.—ಪ್ರೈವೇಟ್ ಆಸ್ತಿ ಇರಬಾರದು, ಎಲ್ಲವೂ ರಾಷ್ಟ್ರದ್ದಾಗಬೇಕು. ಹಾಗಾದಾಗ ಜಾಸ್ತಿ ಹೊಡೆದಾಟವಿರುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಮ್ಮ ಮೂಲಕ ಒಂದು ಕ್ಲಾರಿಫಿಕೇಷನ್ ಕೇಳಬೇಕೆಂದು ಅಪೇಕ್ಷೆಪಡುತ್ತೇನೆ. ಅಧಿಕಾರ ವಿಕೇಂದ್ರೀಕರಣದ ಮಾತು ಬಂತು. ಅಧಿಕಾರ ವಿಕೇಂದ್ರೀಕರಣ ಮಾಡಿದರೆ ಕೆಲವರಿಗೆ ಕೆಲವು ಪಾಕೆಟ್ಸ್ ಬರುವಹಾಗೆ ಆಗಿಬಿಟ್ಟು, ಸರ್ವಾಧಿಕಾರ ಬಂದು ಉಳಿದವರು ಏನೂ ಅಲ್ಲ ನಿರೀಕ್ಷಿಸಲು ಸಾಧ್ಯವಾಗದೇ ಇರುವ ಕಾಲ ಬಂದರೂ ಬರಬಹುದು ಎಂಬ ಭಯ ಇದೆ ಎಂಬುವುದು ಗೊತ್ತೇ !

ಶ್ರೀ ಎಚ್. ಎನ್. ನಂಜೇಗೌಡ.—ಶ್ರೀಮಾನ್ ಪಾಟೀಲ್‌ರವರು ಕೇಳುತ್ತಾ ಇದ್ದರು, ಕೊಳಕು ಇದೆ ಅಂತ ಹೇಳುತ್ತಾಇದ್ದಾರೆ, ಅದನ್ನು ನಿರ್ಮೂಲ ಮಾಡುವುದಕ್ಕೆ ಔಷಧಿ ಹಾಕ ಬೇಕು. ಯಾವಾಗಲೂ ನಮತವಾದಿಗಳಿಗೆ ಬಹಳ ಆತುರ ಸ್ವಲ್ಪ ತಡೆದುಕೊಳ್ಳಿರಿ. ನಾನು ಸೌಮ್ಯವಾದಿ. ಶ್ರೀಮಾನ್ ಕೆ. ಪ್ರಭಾಕರ್‌ರವರು ಅನ್ಯಾಯವಾಗಿದೆ ಎಂಬುದನ್ನು ಒಪ್ಪಿ ಕೊಂಡಿದ್ದೇವೆ ಎಂದು ಹೇಳಿದರು. ನಾವು ಯಾವುದನ್ನು ಒಪ್ಪಿಕೊಂಡಿದ್ದೇವೆ ಯಾವುದನ್ನು ಒಪ್ಪಿ ಕೊಂಡಿಲ್ಲ ಅಂತ ಅನ್ನುವುದು ಪ್ರಶ್ನೆ ಅಲ್ಲ.

ಚೇರ್ಮನ್‌ರವರು.—ಈಗ ನಿರ್ಣಯದ ವಿಷಯ ಹೇಳಿ.

ಶ್ರೀ ಎಚ್. ಎನ್. ನಂಜೇಗೌಡ.—ಅದಕ್ಕೆ ಭೂಮಿಕೆ ತಯಾರಾಗಬೇಕಲ್ಲಾ, ಮೊದಲು ಭೂಮಿಕೆ ಹೇಳಿದೆ, ಶ್ರೀಮಾನ್ ಪ್ರಭಾಕರ್‌ರವರಿಗೆ ಅನುಭವ ಇದೆ. ಅವರು ಅಂಕಿಅಂಶ ಕೊಟ್ಟು ಹೇಳಲಿ. ನಾನು ಚೀಫ್ ಮಿನಿಸ್ಟ್ರರು ಕೊಟ್ಟದ್ದನ್ನೂ ಒಪ್ಪುವವನಲ್ಲ. ನನಗೆ ಒಪ್ಪಿಗೆ ಆಗುವ ಹಾಗೆ ಹೇಳಬೇಕು. ಶ್ರೀಮಾನ್ ಶ್ರೀಕಂಠಯ್ಯನವರು ಒಂದು ನಿರ್ಣಯವನ್ನು ತಂದರು ಅದಕ್ಕೆ ನನ್ನ ಗೆಳೆಯರು ಶ್ರೀಮಾನ್ ಗಂಗಾಧರ್‌ರವರು ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಇದಕ್ಕೆ ಶಾಸನವಾಗಬೇಕು ಎನ್ನುವ ಅಭಿಪ್ರಾಯ ಇದ್ದರೆ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಸರ್ಕಾರದವರೇ ಇದಕ್ಕೆ ಲೀಡ್ ಕೊಡಬೇಕು. ಇವತ್ತು ಏನು ಅನಿನುತ್ತಪೆ? ಮಾನ್ಯ ಮುಖ್ಯಮಂತ್ರಿಗಳು ಇಂತಹ ಒಂದು ನಿರ್ಣಯವನ್ನು ತಂದಿದ್ದರು ಅನ್ನಿ ಆಗಲೂ ಅದು ಕೇಂದ್ರಕ್ಕೆ ಹೋಗಬೇಕು. ಏನೇ ಆದರೂ ಜನರ ಮನಸ್ಸಿನಲ್ಲಿರತಕ್ಕ ಕಲ್ಮಷವನ್ನು ತೊಳೆಯಬೇಕು. ಪಾಪ ನಾಗಪ್ಪನವರು ಡೀಸೆಂಟ್ರಲೈಸ್ ಆಗಬೇಕೆಂದು ಹೇಳುತ್ತಾರೆ. ಅದೇನು ಆಗುತ್ತದೆಯೋ ಬಿಡುತ್ತದೆಯೋ ಮದುವೆಯೇ ಆಗಿಲ್ಲ ಮಗುವಿನ ಹೆಸರು ರಾಮಕೃಷ್ಣ ಅಂತ ಇಟ್ಟರಂತೆ ಆ ರೀತಿ ಇದಕ್ಕೆ ಬೆರೆ ಕಟ್ಟುವುದು ಅಲ್ಲ. ರಾಜ್ಯ ದಲ್ಲಿ ಕಾಣುತ್ತಾ ಇರುವುದು, ಗಂಭೀರವಾದಂತಹ ಕೆಲವು ಸಮಸ್ಯೆಗಳು ಇವೆ. 74ನೇ ಇಸವಿಯಲ್ಲಿ ಕಾವೇರಿ ನದಿ ನೀರಿನ ಹಕ್ಕನ್ನು ಕಳೆದುಕೊಳ್ಳುತ್ತೇವೆ, ಕೃಷ್ಣಾ ನದಿ ನೀರಿನ ಸಮಸ್ಯೆ ಇದೆ. ಈ ರಾಜ್ಯವನ್ನು ನರಿಯಾದ ಮಾರ್ಗದಲ್ಲಿ ನಡೆಸಿ ರಾಜ್ಯದ ಹಿತಾಸಕ್ತಿಗಳನ್ನು ಕಾಪಾಡತಕ್ಕ ಒಂದು ದೈತ್ಯ ಶಕ್ತಿಯಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇರಬೇಕು. ಅವರಿಗೆ ಕಷ್ಟಗಳು ಇರುತ್ತದೆ ನಿಜ, ಬೇರೆ ಕಾರ್ಯಗಳು ಬೇಕಾದಷ್ಟು ಇವೆ. ಯಾವ ರೀತಿ ನಮ್ಮ ರಾಜ್ಯವನ್ನು ಉದ್ಧಾರ ಮಾಡಬೇಕೆಂಬ ಒಂದು ತಳಮಳವನ್ನು ಇಟ್ಟುಕೊಂಡು ಬೇರೆ ಯಾವ ಕೆಲಸವನ್ನೂ ಕೂಡ ಇಟ್ಟುಕೊಂಡಿಲ್ಲದೇ ಇರಬೇಕಾದಂತಹ ನಂದರ್ಭ ಇದೆ. ಅಂತಹ ಪರಿಸ್ಥಿತಿಯಲ್ಲಿ ಅವರು ಭಾರಿ ನೀರಾ ವರಿ ಯೋಜನೆಯನ್ನು ಇಟ್ಟುಕೊಂಡಿದ್ದಾರೆ ಅದರ ಜೊತೆಗೆ ಜನರಲ್ ಅಡ್ಮಿನಿಸ್ಟ್ರೇಷನ್, ಗೃಹ ಖಾತೆ ಇವುಗಳೂ ಸಹ ಇವೆ. ಪಾಪ, ನಮ್ಮ ಡಿಲ್ಲೆಯವರಾದ ಶ್ರೀಮಾನ್ ಲಕ್ಕಪ್ಪನವರು ಪಿ.ಡಬ್ಲ್ಯು.ಡಿ. ಮಂತ್ರಿಗಳಾಗಿದ್ದುಕೊಂಡು ಬರೀ ಸುಣ್ಣ ಬಣ್ಣ ಹೊಡೆಯುವ ಕೆಲಸ ಮಾತ್ರ ಮಾಡು ವುದಾಗಿದೆ. ಇವರಿಗೆ ಇನ್ನಾವ ಅಧಿಕಾರವೂ ಇಲ್ಲ, ಇದರ ಜೊತೆಗೆ ಪಾಪಾ ಇವರು ಸಂಪೂರ್ಣವಾಗಿ ತಬ್ಬಲಿಯಹಾಗೆ ನಿದ್ರೆ ಮಾಡುತ್ತಾ ಕುಳಿತಿರುತ್ತಾರೆ, ಇವರಿಗೆ ಒಂದು ಆಫೀಸು ಕೊಟ್ಟು ಒಂದು ಕಾರು ಕೊಟ್ಟು ಏನೇನೂ ಕೆಲಸವಿಲ್ಲದವರಿಗೆ ಏನಾದರೂ ಒಂದು ಕೆಲಸ ಕೊಟ್ಟಿರುತ್ತಾರೆಯಲ್ಲಾ ಆ ರೀತಿ ಆನ್ಯುಯಲ್ ರಿಪೋರ್ಟ್ಸ್ ನೋಡುವುದು ಮುಂತಾದ ಕೆಲಸ ಅವರದಾಗಿದೆ. ಇವರು ಒಬ್ಬ ಫುಲ್‌ಫ್ಲೆಡ್ಜ್‌ಡ್ ಮಂತ್ರಿಗಳು ಪಿ.ಡಬ್ಲ್ಯು.ಡಿ. ಮಿನಿಸ್ಟರು ಅಂತ ಹೆಸರು, ಶೇಕಡ 80 ಭಾಗ ಎಲ್ಲಾ ಮುಖ್ಯಮಂತ್ರಿಗಳೇ ಇಟ್ಟುಕೊಂಡು ಇನ್ನು 20 ಭಾಗ ಅವರಿಗೆ ಕೊಟ್ಟಿದ್ದಾರೆ ಅದರಲ್ಲೂ ಕೂಡ ಒಬ್ಬರು ಡೆಪ್ಯುಟಿ ಮಿನಿಸ್ಟರು ಮಾಗಾವಿಯವರು ಇದ್ದಾರೆ ಅವರು ಶೇಕಡ 18ರಷ್ಟು ಕೆಲಸ ಮಾಡಿಕೊಂಡು ಹೋಗುತ್ತಾರೆ ಇನ್ನು ಉಳಿದಿರುವುದು 2 ಪರ್ಸೆಂಟ್ ಕೆಲಸ ಲಕ್ಕಪ್ಪನವರಿಗೆ ಈ ಮಟ್ಟದಲ್ಲಿರುವಾಗ ನಾವು ಇಲ್ಲಿ ವಿಕೇಂದ್ರೀಕರಣವಾಗಲಿ ಎಂದು ನೀರಿಕ್ಷೆ ಮಾಡಿದರೆ ಅದನ್ನು ಕನಸಿ ನಲ್ಲೂ ಕೂಡ ನಾನು ಕಾಣಲಾರೆ. ಆದ್ದರಿಂದ ಶ್ರೀಮಾನ್ ನಾಗಪ್ಪನವರಲ್ಲಿ ನನ್ನ ಅರಿಕೆ ಇಷ್ಟೆ ಅದಕ್ಕೆ ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ? ಇನ್ನೊಂದು ಪ್ರಾಮುಖ್ಯವಾದ ಅಂಶವನ್ನು ಬಿಟ್ಟುಬಿಟ್ಟರು, ಇದು ಬಹಳ ಗಂಭೀರವಾದ ಸಮಸ್ಯೆ ನಾಗಪ್ಪನವರಾಗಲಿ, ರಂಗನಾಥ್‌ರವರಾಗಲಿ ನಾನಾಗಲೀ ತಿಳಿದುಕೊಂಡಿರುವಹಾಗೆ ಇದು ಲಘುವಾದ ಪ್ರಶ್ನೆಯಲ್ಲ. ಪ್ರಜಾಪ್ರಭುತ್ವದಲ್ಲಿ ಆಡಳಿತ ನಡೆಸುವುದು ಒಂದು ಬಂದೋಬಸ್ತು ಸರ್ಕಾರ ಕೊಡುವುದು ಭಾರಿ ಕಷ್ಟದ ಕೆಲಸವೇ. 7 ದಿನದ ಒಂದು ಮಂತ್ರಿಮಂಡಲ ಆಯಿತು, ವಾರಕ್ಕೆ ಒಂದು ಮಂತ್ರಿಮಂಡಲ ಆಯಿತು. ಸುಭದ್ರವಾದ ಮಂತ್ರಿಮಂಡಲ ಇರಬೇಕಾದರೆ ಮುಖ್ಯಮಂತ್ರಿಗಳು ಕೆಲವಾರು ಕ್ರಮ ಗಳನ್ನು ಕೈಗೊಳ್ಳಬೇಕಾಗುತ್ತದೆ. ಜಿಲ್ಲೆಗಳಲ್ಲಿ, ಗ್ರಾಮಗಳಲ್ಲಿ ಏನೇ ಕಾರ್ಯಕ್ರಮವಾಗ ಬೇಕಾದರೂ ಕೂಡ ನಾವು ಯಾರು ಹೇಳಿದರೂ ನಿಜವಾಗಿಯೂ ಆಗುತ್ತಿಲ್ಲ. ಏನಾದರೂ ಮಾಡ ಬೇಕಾದರೆ ಪಿ.ಡಬ್ಲ್ಯು.ಡಿ. ಮಿನಿಸ್ಟರು ಅಂತ ಹಾಕಿ, ಚೀಫ್ ಮಿನಿಸ್ಟರ್ ಮುಖಾಂತರ ಹೋಗಬೇಕು

ಎಂದು ಸೆಕ್ಕೆಜೆರಿಗಳು ಬರೆಯತಕ್ಕ ನಂದರ್ಭ ಇದೆ ಎಂದು ಹೇಳುತ್ತಾರೆ. ಅಲ್ಲಿಗೆ ಏನೇ ಒಂದು ರೆಪ್ರೆಸೆಂಟೇಷನ್ ಬರಲಿ ಅದು ಮುಖ್ಯಮಂತ್ರಿಗಳಿಗೂ ತಲುಪಲೇಬೇಕು. ಅಂಥ ಒಂದು ಸುಭದ್ರವಾದ ಸರ್ಕಾರವನ್ನು, ಒಂದು ಸುಭದ್ರವಾದ ಆಡಳಿತವನ್ನು ಮತ್ತು ಒಂದು ಸಮತೋಲನವಾದ ಆಡಳಿತವನ್ನು ಕಾಪಾಡಿಕೊಂಡು ಬರುವುದು ಬಹಳ ಮುಖ್ಯವಾದ ವಿಷಯವೇ. ಯಾವ ಒಂದು ವಿಷಯವೇ ಆಗಲಿ ಅದು ಮುಖ್ಯ ಮಂತ್ರಿಗಳ ಗಮನಕ್ಕೆ ಬಾರದೆ ಕ್ಯಾನಲ್‌ಆಗುವುದಕ್ಕೆ ಅವಕಾಶವೇ ಇಲ್ಲ. ಅಂತೂ ಯಾವ ಒಂದುಕೆಲಸವಾಗಬೇಕಾಗಿದ್ದರೂ ಅದು ಆ ಮುಖ್ಯಮಂತ್ರಿಗಳ ದಾಕ್ಷಿಣ್ಯ ದಿಂದಲೇ ಆಯಿತೆನ್ನುವಂತೆ ಅದು ನಡೆಯಬೇಕು. ಇಂಥ ಒಂದು ಪದ್ಧತಿಯಿಂದ ಪ್ರತಿಯೊಬ್ಬರೂ ಮುಖ್ಯಮಂತ್ರಿಗಳ ಮನೆಯ ಮುಂದೆ ಹೋಗಿ ನಿಲ್ಲಲೇಬೇಕಾಗಿದೆ.

ಧೇರ್ಮನ್‌ರವರು.—ಈಗ ಸಭೆಯ ಮುಂದಿರತಕ್ಕ ವಿಷಯ —ರಾಜ್ಯದ ಹೆಸರು ಕನ್ನಡ ರಾಜ್ಯ ಎಂದಿರಬೇಕೇ ಅಥವಾ ಕರ್ಣಾಟಕ ಎಂದಿರಬೇಕೇ ಎಂಬುದು. ಅವರ ಬಗ್ಗೆ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವೇನೆಂಬುದನ್ನು ತಿಳಿಸಿದರೆ ಸಾಕು.

ಶ್ರೀ ಎಚ್. ಎನ್. ನಂಜೇಗೌಡ.—ರಾಜ್ಯದ ಹೆಸರು—ಮೈಸೂರು ಎಂದಿರಬೇಕೇ ಅಥವಾ ಕನ್ನಡ ನಾಡು ಎಂದಿರಬೇಕೇ ಇಲ್ಲವೇ ಅದರ ಹೆಸರು ಕರ್ಣಾಟಕ ಎಂದಿರಬೇಕೇ ಎಂಬುದಾಗಿ ಮೂರು ಚೀಟಿಗಳನ್ನು ಬರೆದು ಮೂರು ಪೆಟ್ಟಿಗೆಗಳನ್ನು ಇಟ್ಟು ಓಟ್ ಹಾಕಿದರೆ ಈ ವಿಚಾರ ತೀರ್ಮಾನವಾದಂತೆ ಆಯಿತು ಅನ್ನುವಂತಿಲ್ಲ. ಇದು ಅಷ್ಟು ಹಗುರವಾದ್ದಲ್ಲ. ನಾವು ಇಂಥ ಒಂದು ಸನ್ಮಾನ್ಯ ತೀರ್ಮಾನವನ್ನು ಕ್ಯೆಗೊಳ್ಳಬೇಕಾಗಿದ್ದರೆ ಈ ಸಮಸ್ಯೆಯ ಬಗ್ಗೆ ರಾಜ್ಯದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಯ ಅಭಿಪ್ರಾಯವನ್ನೂ ಪಡೆಯಬೇಕಾಗುವುದು. ಅವನ್ನು ಪಡೆಯದೆ ಇದನ್ನು ನಾವು ನಾವೇ ಇಲ್ಲಿ ಕುಳಿತು ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ನಾನಾಗಲೇ ಆ ಭಕ್ಕಿ ಪೂಜೆ, ವಿಭೂತಿ ಪೂಜೆಗಳ ಬಗ್ಗೆ ಹೇಳಿದ್ದೇನೆ. ಅಂದ ಹಾಗೇ ನಾವೀದಿವಸ ಇಲ್ಲಿ ಇದರ ಚರ್ಚೆಗೆ ತೊಡಗಿರುವುದಕ್ಕೆ ಕಾರಣವೇನೆಂದರೆ ನಾವೆಲ್ಲರೂ ಮೊದಲು ವಿಭೂತಿ ಪುರುಷರಾಗಬೇಕು. ನಮ್ಮ ನಮ್ಮ ತಪ್ಪುಗಳನ್ನು ನಾವು ಮೊದಲು ತಿದ್ದಿಕೊಳ್ಳಬೇಕು. ಆ ತಪ್ಪುಗಳನ್ನೆಲ್ಲಾ ನರಿಪಡಿಸಿಕೊಂಡು ಮೊದಲು ಇಲ್ಲಿ ಒಂದು ಒಳ್ಳೆಯ ವಾತಾವರಣವನ್ನು ಉಂಟುಮಾಡಬೇಕು. ಅದಕ್ಕಾಗಿ ನಾವೀದಿವಸ ಈ ಚರ್ಚೆಯಲ್ಲಿ ತೊಡಗಿದ್ದೇವೆ.

ಧೇರ್ಮನ್‌ರವರು.—ಮಾನ್ಯ ಸದಸ್ಯರಿಗೆ ವೇಳೆ ಇನ್ನೂ ಎಷ್ಟು ಬೇಕಾಗಬಹುದು ?

ಶ್ರೀ ಎಚ್. ಎನ್. ನಂಜೇಗೌಡ.—ಸಭಾಧ್ಯಕ್ಷರ ಪೀಠವಲ್ಲಿರತಕ್ಕ ಮಾನ್ಯ ಸಿದ್ದಯ್ಯನವರ ಭಾಷಣವನ್ನು ಕೇಳುವುದಕ್ಕೆ ನಾನು ಬಹಳ ತವಕದಿಂದ ಕಾಯುತ್ತಿದ್ದೇನೆ. ಅದೇ ರೀತಿ ನಮ್ಮ ಶ್ರೀಮತಿ ನಾಗರತ್ನಮ್ಮನವರ ಭಾಷಣವನ್ನು ಕೇಳಲು ಬಹಳ ಕಾತುರನಾಗಿದ್ದೇನೆ. ಶ್ರೀಮಾನ್ ದೇವರಾಜ ಅರಸರ ಭಾಷಣವನ್ನೂ ಕೇಳುವುದಕ್ಕೆ ತವಕದಿಂದ ಕಾಯುತ್ತಿದ್ದೇನೆ. ಮೇಲಾಗಿ ಇಂಥ ವಿಷಯುಗಳಲ್ಲಿ ಮಹಿಳೆಯರ ಅಭಿಪ್ರಾಯವನ್ನು ಪಡೆಯುತಕ್ಕದ್ದು ಬಹಳ ಮಂಗಳಕರವಾದದ್ದು. ಆದ್ದರಿಂದ ಇದಿನ್ನೂ ನಾಲ್ಕಾರು ದಿನಗಳು ಚರ್ಚೆಯಾಗಬೇಕಾಗಿದೆ. ಇಂಥೇನೂ ಇದು ಮುಗಿಯತಕ್ಕದ್ದಲ್ಲ. ಹೊರಗಡೆ ಇರತಕ್ಕ ಜನರ ಮನಸ್ಸಿನಲ್ಲಿ ಸೇರಿರತಕ್ಕ ಕಲ್ಮಷ ದೂರವಾಗಬೇಕು. ಮೊದಲದಕ್ಕೆ ಚಿಕಿತ್ಸೆ ಮಾಡಬೇಕಾಗಿದೆ. ಆ ಚಿಕಿತ್ಸೆಯನ್ನು ಮೊಟ್ಟಮೊದಲನೆಯದಾಗಿ ಮುಖ್ಯಮಂತ್ರಿಗಳೇ ಪ್ರಾರಂಭ ಮಾಡಬೇಕು. ನಾವೀದಿವಸ ಬಹಳ ಅದೃಷ್ಟಶಾಲಿ. ನಮ್ಮ ಸಭಾನಾಯಕರು ಸಭೆಯಲ್ಲಿರದ್ದಾರೆ. ರಾಜ್ಯಕ್ಕೆ ಯಾವ ಹೆಸರನ್ನೇ ಇಡಲಿ—ಅದು ಕನ್ನಡ ನಾಡಾದರೂ ಆಗಿರಲಿ ಅಥವಾ ಕರ್ಣಾಟಕ ಆದರೂ ಆಗಿರಲಿ ಆ ಹೆಸರನಲ್ಲಿ ಇಡುವುದಕ್ಕೆ ಮೊದಲು ಜನರ ಮನಸ್ಸಿನಲ್ಲಿರತಕ್ಕ ಕಲ್ಮಷಗಳನ್ನು ತೊಳೆಯುವುದಕ್ಕೆ ಮೊದಲು ಚಿಕಿತ್ಸೆಯನ್ನು ನಡೆಸಬೇಕಾಗಿದೆ. ಜನರ ಮನಸ್ಸಿನಲ್ಲಿ ಏನೇನೋ ಕಲ್ಮಷಗಳಿವೆ. ಆದರೆ ನನ್ನ ಮನಸ್ಸಿನಲ್ಲಿ ಅಷ್ಟು ಕಲ್ಮಷಗಳಿಲ್ಲ. ನನ್ನ ಮನಸ್ಸಿನಲ್ಲಿರತಕ್ಕ ಕಲ್ಮಷವಾದರೋ ರಾಜ್ಯದಲ್ಲಿ ನಡೆಸಿರತಕ್ಕ ಅಭಿವೃದ್ಧಿ ಕಾರ್ಯಗಳಲ್ಲಿ ಎಲ್ಲಾದರೂ ರೀಜನರ್ ಇಂಬಾರೆನ್ಸ್ ಆಗಿದೆಯೇ ಎಂಬುದನ್ನು ಕುರಿತು ದ್ದಾಗಿದೆ. ಹೊರಗಡೆ ಇರತಕ್ಕ ಜನರ ಮನಸ್ಸಿನಲ್ಲಿ ಏವೇನು ಸರಿಯೋ ತಪ್ಪೋ ಅವರ ಮನಸಿನಲ್ಲಿ ಸ್ವಜನ ಪಕ್ಷಪಾತ ಹಳೇ ಮೈಸೂರು ಭಾಗದ ಅಭಿವೃದ್ಧಿಯನ್ನು ಮೊಟಕು ಮಾಡಿ ಇಲ್ಲಿಯ ಹಣವನ್ನು ಹೊಸ ಮೈಸೂರು ಭಾಗದಲ್ಲಿ ಹೆಚ್ಚಿಗೆ ಖರ್ಚು ಮಾಡಿದ್ದಾರೆ ಇತ್ಯಾದಿ ಅನೇಕ ಕಲ್ಮಷಗಳು ಅವರ ಮನಸ್ಸಿನಲ್ಲಿ ಸೇರಿವೆ. ಆ ಕಲ್ಮಷಗಳನ್ನೆಲ್ಲಾ ಮೊದಲು ತೊಳೆದು ಅವರನ್ನು ಪುನೀತರನ್ನಾಗಿ ಮಾಡಬೇಕು. ಆದು ಆಯಿತೆಂದರೆ ಆಗ ನಾನು ಯಾವುದಕ್ಕೂ ಸಿದ್ಧ. ಕನ್ನಡ ರಾಜ್ಯವೆಂದು ಕರೆಯೋಣ ಎಂದರೆ ನಾನು ಅದಕ್ಕೂ ಓಕೆ ಎನ್ನುತ್ತೇನೆ. ಅಥವಾ ಈ ರಾಜ್ಯದ ಹೆಸರನ್ನು ಕರ್ಣಾಟಕ ಎಂದು ಇಡೋಣ ಎಂದರೆ ನಾನು ಅದಕ್ಕೂ ಓಕೆ

(ಶ್ರೀ ಎಚ್. ಎನ್. ನಂಜೇಗೌಡ)

ಎನ್ನುತ್ತೇನೆ. ಹಿಂದೆ ಆ ಮಹಾತ್ಮಾ ಗಾಂಧಿಯವರು ದಂಡೀ ಸತ್ಯಾಗ್ರಹ ಮಾಡುತ್ತಿದ್ದಾಗ ಅವರು ಸತ್ಯಾಗ್ರಹ ಯಾವ ಚೈಮಿನಲ್ಲಿ ಸಾಕು ನಿಲ್ಲಿಸಿ ಎಂದರೆ ಅದು ಅಲ್ಲೇ ಅಷ್ಟಕ್ಕೆ ಹಾಲ್ಟ್ ಆಗುತ್ತಿತ್ತು. ಅದಕ್ಕೆ ಕಾರಣ ಏನೆಂದರೆ ಜನರು ಗಾಂಧೀಪಿಯವರಲ್ಲಿ ಅಂಥ ಒಂದು ನಂಬಿಕೆ ವಿಶ್ವಾಸಗಳನ್ನು ಇಟ್ಟುಕೊಂಡಿದ್ದರು. ಅವರು ತಾವೇ ತಾವಾಗಿ ತಪ್ಪನ್ನು ಮಾಡಿದ್ದರೆ ತಮ್ಮನ್ನು ತಾವೇ ಅವರು ಶಿಕ್ಷಿಸಿಕೊಳ್ಳುತ್ತಿದ್ದರು. ಅವರ ತಪ್ಪಿಗಾಗಿ ಅವರು ಅನೇಕ ದಿವಸ ಉಪವಾಸ ವ್ರತವನ್ನು ಮಾಡಿದ್ದಾರೆ. ಆದರೆ ಇಲ್ಲಿ ನಾನು ಆ ಮಾತ್ಸರ್ಯವನ್ನು ಅಪೇಕ್ಷೆ ಪಡುತ್ತಿಲ್ಲ. ಅವರು ಶಿಕ್ಷೆ ಮಾಡಿಕೊಳ್ಳುವುದು ಬೇಡ. ಅವರು ಜನರ ಮನಸ್ಸಿನಲ್ಲಿ ಹಾಗೂ ನನ್ನ ಮನಸ್ಸಿನಲ್ಲಿ ಹೊಕ್ಕಿರತಕ್ಕ ಕಲ್ಮಷವನ್ನು ತೊಳೆಯುವುದಕ್ಕೆ ಇರತಕ್ಕ ಸತ್ಯಸಂಗತಿಗಳನ್ನು ಕೂಲಂಕಷವಾಗಿ ತಿಳಿಸಲು ಎಂದು ಕೇಳುತ್ತಿದ್ದೇನೆ. ಹಳೇ ಮೈಸೂರು ಭಾಗವಾಗಲಿ—ಹೊಸ ಮೈಸೂರು ಭಾಗವಾಗಲಿ ಅಥವಾ ಆ ಪ್ರದೇಶ ಕಾರವಾರವಾಗಿರಲಿ ಇಲ್ಲವೇ ರಾಯಚೂರಾಗಿರಲಿ ಯಾವ ಒಂದು ಭಾಗಕ್ಕೂ ಅನ್ಯಾಯವಾಗಿಲ್ಲ ಎನ್ನುವುದರ ಬಗ್ಗೆ ಕೂಲಂಕಷ ತಿಳುವಳಿಕೆಗಳನ್ನು ಕೊಡಲಿ. ರಾಜ್ಯದಲ್ಲಿ ಯಾವ ಭಾಗದಲ್ಲೂ ಹಾಗೆ ಇಂಬ್ಯಾರೆನ್ಸ್ ಆಗಿಲ್ಲ ಎಂಬುದನ್ನು ಸರ್ಕಾರದವರು ರುಜುವಾತು ಮಾಡಬೇಕು. ಆದರೆ ಕೆಲವಾರು ದಿನಗಳಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಎವರವಾಗಿ ಅಂಕೀ ಅಂಶಗಳನ್ನು ಶೇಖರಣೆ ಮಾಡುವುದಾಗಿ ಹೇಳುತ್ತಿದ್ದರು. ಅವರು ಕಾರಣಾಂತರಗಳಿಂದ ಯಾವುದೇ ಒಂದು ಭಾಗಕ್ಕೆ ಹೆಚ್ಚು ಹಣವನ್ನು ಖರ್ಚುಮಾಡಲಾಗಿದೆ ಎಂದು ಹೇಳಿದರೆ ಅದಕ್ಕೂ I am not worried. ಸಕಾರಣವಾಗಿ ಕಾವೇರಿ ಜರಾನಯನ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಬಿಡಲಾಯಿತೆಂದು ಹೇಳಿ ಅದಕ್ಕೆ ನ್ಯಾಯವಾದ ಕಾರಣಗಳನ್ನು ಕೊಟ್ಟರೆ ಅದಕ್ಕೂ ನಹಾ ನನಗೆ ಸಂಕಟವಿಲ್ಲ. ಅಂದರೆ ಈ ಎಲ್ಲವೂ ಸಕಾರಣವಾಗಿಯೇ ಆಗಿರಬೇಕು, ಅದು ಮುಖ್ಯ. ನನಗೆ ಈ ವಿಚಾರಗಳಲ್ಲಿ ಅಷ್ಟು ಅಪನಂಬಿಕೆ ಬರುತ್ತಿರಲಿಲ್ಲ. ಆದರೆ ಅದೇನೋ ಇತ್ತೀಚೆಗೆ ಕೆಲವು ಬಾಬುಗಳಲ್ಲಿ ನನಗೆ ಅನುಮಾನ ಹೆಚ್ಚಾಗಿದೆ. ಅದು ಪರಿಹಾರವಾಗಬೇಕು. ನನ್ನ ಅನುಮಾನಕ್ಕೆ ಒಂದು ಕಾರಣ ಏನೆಂದರೆ ಮಾನ್ಯ ಮುಖ್ಯ ಮಂತ್ರಿಗಳೇ ಈ ಬಗ್ಗೆ ಅಂಕೀ ಅಂಶಗಳನ್ನು ಸಂಗ್ರಹಣೆ ಮಾಡುತ್ತಿದ್ದಾರೆ ಅನ್ನುವುದೇ ಆಗಿದೆ. ಕೆಲವಾರು ದಿನಗಳ ಹಿಂದೆ ಪತ್ರಿಕೆಗಳಲ್ಲಿ ಮುಖ್ಯಮಂತ್ರಿಗಳು ಒಂದು ರಿಪೋರ್ಟ್—ವರದಿ ಎಂದು ಬಂದಿತ್ತು ಒಂದು ಹೇಳಿಕೆಯಲ್ಲಿ ವಿದ್ಯುಚ್ಛಕ್ತಿಯ ಸೌಲಭ್ಯವನ್ನು ಕೆಲವು ಪ್ರದೇಶಗಳಿಗೆ ಹೆಚ್ಚಿಗೆ ಕೊಟ್ಟಿದ್ದರೂ ಅದನ್ನು ಮಾರೆಮಾಚಿ ಆ ಭಾಗದಲ್ಲಿ ಹಣ ಕಡಮೆ ಖರ್ಚಾಗಿದೆ ಎಂಬುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಆದರೆ ಇದೇನೂ ಜಾತೀಯತೆ ವಿಚಾರಕ್ಕೆ ಸಂಬಂಧಪಟ್ಟಿದ್ದಲ್ಲ.

6-30 P.M.

ಮಾನ್ಯ ಶ್ರೀ ಎಂ. ವಿ. ಕೃಷ್ಣಪ್ಪನವರು, ಶ್ರೀ ದೇವರಾಜ್ ಅರಸ್ ಅವರು ಮತ್ತು ಶ್ರೀಮತಿ ನಾಗರತ್ನಮ್ಮನವರು ಹೇಳಿದ್ದು ಸರಿಯಾಗಿದೆಯೆಂದು ಹೇಳಿದಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದು ತಪ್ಪು ಇರಬಾರದು. ಆ ಸಂದರ್ಭದಲ್ಲಿ ನಾನು ಬೆಂಗಳೂರಿಗೆ ಬಂದು ಇಲ್ಲ 4 ತಿಂಗಳು ಕಾಲ ಇದ್ದು ಈ ವಿಚಾರಗಳೆಲ್ಲವನ್ನೂ ಮನಗಂಡು. ವಿದ್ಯುಚ್ಛಕ್ತಿಯ ಬಗ್ಗೆ ಕೆಲವಾರು ಸ್ಟೇಟ್ ಮೆಂಟ್‌ಗಳನ್ನು ತಂದಿದ್ದೇನೆ. ಅದು ಚರ್ಚೆಗೆ ಬಂದಾಗ್ಗೆ ತಮ್ಮ ಅವಗಾಹನೆಗೆ ತರುತ್ತೇನೆ. ಮುಖ್ಯ ಮಂತ್ರಿಗಳ ಹೇಳಿಕೆ ಸತ್ಯಕ್ಕೆ ದೂರವಾದುದಾಗಿತ್ತು. ಪೈತ್ರಮರಿ ಮತ್ತು ಸೆಕೆಂಡರಿ ಟ್ರಾನ್ಸ್‌ಮಿಷನ್ ಲೈನ್ಸ್ ಬಿಟ್ಟು ಶರಾವತಿಯಲ್ಲಿ ಇವರು ಏನೇನು ಮಾತಿದ್ದಾರೆಂಬುದನ್ನು ಗಮನಿಸಬೇಕು. ನನ್ನ ಅಂಕಿ ಅಂಶಗಳಿಗೂ ಅವರು ಹೇಳಿದ್ದಕ್ಕೂ ಭಾರಿ ಅಜಗಜಾಂತರವಿಲ್ಲ ಕೇವಲ 20 ಕೋಟಿ ರೂಪಾಯಿಗಳೊಳಗೇ ವ್ಯವಹಾರ. ಅವರಿಗೂ ನನಗೂ 7 ಕೋಟಿ ರೂಪಾಯಿಗಳ ವ್ಯತ್ಯಾಸ ಬಂತು. ಸಬ್‌ಸ್ಟಿಡಿಯರಿ ಟ್ರಾನ್ಸ್‌ಮಿಷನ್ ಲೈನ್ಸ್ ದೊಡ್ಡದೂ ಸೇರಿದರೆ 27 ಕೋಟಿ ರೂಪಾಯಿಗಳ ವ್ಯತ್ಯಾಸ ಎಲೆಕ್ಟ್ರಿಸಿಟಿ ಬೋರ್ಡ್‌ನಿಂದ ಬಂತು ಎಂಬುದಾಗಿ ಹೇಳಬಹುದು. ಸತ್ಯ ಸಂಧತೆಯನ್ನು ಮೀರಿ ಮಾಡಿದ್ದಾರೆ. ಅವರು ನನ್ನನ್ನು ಪ್ರತಿಪಾದಿಸಿ ಹೇಳಿಕೆ ಕೊಟ್ಟಿಲ್ಲ. ಅದು ಪತ್ರಿಕೆಗಳಲ್ಲಿ ಈ ರೀತಿ ಬಂತು. Primary and Secondary transmission lines, subsidiary transmission lines and their bad implications have been reported. ಸರ್ಕಾರ ಕೊಡತಕ್ಕ ಅಂಕಿ ಅಂಶಗಳಮೇಲೆ ನನ್ನ ಕಲ್ಮಶ ತೀರ್ಮಾನವಾಗುವುದಿಲ್ಲ. ನನ್ನ ಅನುಮಾನ ಬಗೆಹರಿಯಬೇಕಾದರೆ, ಅವರಮೇಲೆ ಈ ಅಧಿಕಾರ ವಹಿಸಿದ್ದ ಕಾಲದಲ್ಲಿ ಅವರು ಪಿ. ಡಬ್ಲ್ಯು. ಡಿ. ಮಂತ್ರಿಗಳಾಗಿ ಹೇಳಿದ ಕಾಲದಲ್ಲಿ ಅವರು ಹೇಳಿದ್ದ ಸ್ಟೇಟ್‌ಮೆಂಟ್‌ಮೇಲೆ ಈ ಮುಖ್ಯಮಂತ್ರಿಗಳಾಗಿ ತೀರ್ಪು ಕೊಟ್ಟರೆ, ಅದು ಅಪರಾಧಿಯೇ ತೀರ್ಮಾನ ಕೊಟ್ಟಂತಾಗು

ತ್ತದೆ. ಈ ಸಭಾನಾಯಕರಿಗೆ ಅಪಕೀರ್ತಿ ಬಂದರೆ, ಅದು ನನಗೂ ಬಂದಂತೆಯೇ. ಶ್ರೀಮತಿ ನಾಗರತ್ನಮ್ಮನವರಿಗೂ ಬಂದಂತೆಯೇ. ಆದ್ದರಿಂದ ನನ್ನ ಕಲ್ಮಶ ಪರಿಹಾರವಾಗಬೇಕಾದರೆ ಒಂದು ಜುಡಿಷಿಯಲ್ ಫ್ಯಾಕ್ಟ್ ಫೆ ೈಂಡಿಂಗ್ ಕಮಿಟಿಯನ್ನು ರಚಿಸಬೇಕು. ಒಂದು ನ್ಯಾಯಾಂಗ ಸಮಿತಿಯನ್ನು ನೇಮಿಸಬೇಕು. ಅದಕ್ಕಾಗಿ ಮಾನ್ಯ ಶ್ರೀ ನಾಗಪ್ಪನವರು ರಾಯಚೂರಿಗೆ ಕಡಿಮೆಯಾಯಿತು ಎಂದಾಗಲೀ, ಹಳೇ ಮೈಸೂರಿಗೆ ಕಡಿಮೆಯಾಯಿತೆಂದು ಮಾನ್ಯ ಶ್ರೀ ಪ್ರಭಾಕರ್ ಅವರಾಗಲೀ, ಅಥವಾ ಹುಚ್ಚಮಾಸ್ತಿಗೌಡರಾಗಲೀ ಹೇಳಬಾರದು. ಆದ್ದರಿಂದ ಅಂಕಿ ಅಂಶಗಳನ್ನು ಸಮಗ್ರದೃಷ್ಟಿಯಿಂದ ಸಂಗ್ರಹಮಾಡಿ ಈ ಸಭೆಯಮುಂದೆ ಅವನ್ನು ತಂದು ನನ್ನ ಅನುಮಾನಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದ್ದರೆ ನಂಜೇಗೌಡರು ಹೇಳತಕ್ಕಂಥ ರೀಜನರ್ ಇಂಬ್ಯಾಲೆನ್ಸನ್ನು ಕಂಡುಹಿಡಿಯಬಹುದು. ಇದರ ಜೊತೆಗೆ ಕಾಂಗ್ರೆಸ್ಸಿನ ಒಳಗಡೆ ಇರುವ ಜನಗಳ ಕಲ್ಮಶ ಹೋಗಬೇಕು. ಪೊಲಿಟಿಕಲ್ ಇಂಬ್ಯಾಲೆನ್ಸಸ್ ಹೋಗಬೇಕು. ನಾವು ವಿರೋಧಪಕ್ಷದವರು ಎಂದು ಅವರಲ್ಲಿ ಒಂದು ಭಾವನೆ ಬರಬಾರದು. ಮಾನ್ಯ ಶ್ರೀ ಗಂಗಾಧರ್ ಅವರಿಗೇ ಆಗಲೀ ಮಾನ್ಯ ಶ್ರೀ ನಾಗಪ್ಪನವರಿಗೇ ಆಗಲಿ ಇವರು ಶೆಟ್ಟರು, ಇವರು ಗೌಡರು, ಇವರು ಲಿಂಗಾಯತರು ಎಂಬ ಭೇದಭಾವವಿಲ್ಲ. ವಿರೋಧ ಪಕ್ಷದವರಲ್ಲಿ ನಮಗೆ ಯಾವ ಕಲ್ಮಶವೂ ಇಲ್ಲವೆಂದು ಹೇಳಬಹುದು. ರಾಜ್ಯದ ಕಲ್ಮಷ ಇವೆಲ್ಲವೂ ಆ ಪಕ್ಷದಲ್ಲಿಯೇ ಇರುವುದು. ಇವರ ಮನಸ್ಸಿನಲ್ಲಿ ನಿಷ್ಕಾರುಣಿಕವಾದ, ನಿರಾಳವಾದ ಹಾಗೂ ಸರಳವಾದ ಅಭಿಪ್ರಾಯವನ್ನು ಹಾಕಿಕೊಳ್ಳಬೇಕಾಗಿದೆ.

ಶ್ರೀ ಸದಾಶಿವಪ್ಪ ಪಾಟೀಲ್.—ಅದಕ್ಕೆ ಅವರು ಅಧಿಕಾರ ಬೇಡವೆಂದು ಹೇಳಿದ್ದು.

ಶ್ರೀ ಎಚ್. ಎನ್. ನಂಜೇಗೌಡ.—ಇವರ ಮನೋಭಾವನೆ ಆ ರೀತಿ ಆಗಬೇಕಾಗಿದೆ. ಆಗ ಎಲ್ಲಾ ಜನಗಳಿಗೂ ನಮ್ಮ ಈ ಸಭೆಯಲ್ಲಿ ರಕ್ಷಣೆಯಾಗುತ್ತದೆನ್ನುವ ಅಭಿಪ್ರಾಯ ಬರಬೇಕು. ಮೈನಾರಿಟಿಗಳಿಗೆ ಅನುಮಾನ ಹೋಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ರೋಡ್ ರೋಲರ್ ಇದ್ದಹಾಗೆ ಇರುವುದರಿಂದ ಅವರು ನಮ್ಮನ್ನು ಜಮಾ ಖರ್ಚಿಗೇ ಇಟ್ಟುಕೊಂಡಿಲ್ಲವೆಂಬುದು ನಮ್ಮ ಕಿವಿಗೆ ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ರೋಡ್ ರೋಲರ್ ಎಂದು ಇದ್ದು ಮೈನಾರಿಟಿ ಪಕ್ಷದಲ್ಲಿರುವಂತವವರನ್ನು ಅರಿತುಕೊಳ್ಳುತ್ತಾ ಇಲ್ಲವೆಂದು ಜನಗಳ ಬಾಯಿಗೆ ಹೋಗಿದೆ. ಅಂಥಾದ್ದು ಕೂಡಲೇ ಹೋಗಬೇಕಾದುದು ಭಾರೀ ಪ್ರಾಮುಖ್ಯವಾಗಿದೆ. ಅವರು ಅದಕ್ಕೂ ಕೂಡ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇವತ್ತು ಇದರ ಬಗ್ಗೆ ಒಂದು ಮಹತ್ವವಾದಂಥ ನಿರ್ಣಯವನ್ನು ನಾವು ಕೈಗೊಳ್ಳಬೇಕಾಗಿದೆ. It is like accused delivering the Judgement. There should be judicial fact finding body to probe into regional imbalance.

ಶ್ರೀ ಎಸ್. ಭೀಮಣ್ಣ.—ಈಗ ಮೂರು ಗಂಟೆಗಳ ಕಾಲ ಮಾನ್ಯ ಶ್ರೀ ನಂಜೇಗೌಡರು ಮಾತನಾಡುತ್ತಿದ್ದಾರೆ. ಇರತಕ್ಕ ವಿಷಯವಾಗಿ ಮಾತನಾಡಲು ಅವರು ಬಿಟ್ಟು ಪ್ರತಿಯೊಬ್ಬೊಬ್ಬರನ್ನೂ ಅಸೈನ್ ಮಾಡುತ್ತಿದ್ದಾರೆ. ನಾವ್ಯಾರು ಜನರನ್ನೂ ಸಹ ಟೀಕೆಮಾಡಿದ್ದಾರೆ. ಅವರು ಎಷ್ಟು ಚೈಂ ಹೀಗೆ ಟೀಕೆಮಾಡಿದ್ದಾರೋ ಅಷ್ಟು ಚೈಂ ನಮಗೂ ಕೂಡಬೇಕು.

ಶ್ರೀ ಎಚ್. ಎನ್. ನಂಜೇಗೌಡ.—ನಾನು ಯಾರ ಹೆಸರನ್ನೂ ತೆಗೆದುಕೊಂಡು ಹೇಳುವುದಕ್ಕೆ ಹೋಗಿಲ್ಲ. ಈ ದೇಶಕ್ಕೆ ಹೆಸರು ಇಡಬೇಕಾದರೆ ಎಲ್ಲರ ಹೆಸರನ್ನೂ ತೆಗೆದುಕೊಳ್ಳಬೇಕು.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಪ್ರಕೃತಿಯೂ ಹಾಗೆ ಇದೆ. ತಿರುಳಿನಲ್ಲಿಯೇ ಇರುವುದು ಪ್ರಕೃತಿಯ ಧರ್ಮ. ಬಾಳೆಯ ಮರಗಳಾಗಲೀ, ತೆಂಗಿನಮರಗಳಾಗಲೀ ಬೆಳೆದರೆ, ಅದರಲ್ಲಿರುವ ತಿರುಳೇ ಮುಖ್ಯವಾದುದು. ಆ ರೀತಿ ಮನುಷ್ಯನಿಗೂ ಕೂಡ ಬುರುಡೆಗೇ ಇರುವುದು ಬೆಲೆ. ಆದ್ದರಿಂದ ಇದರ ಬಗ್ಗೆ ಜನಗಳ ಮನೋಭೂಮಿಕೆಯನ್ನು ನಮ್ಮ ರಾಜ್ಯ ಸರ್ಕಾರ ತಿಳಿಯಲು, ಆಗ ಈ ರಥ ನಡೆಸುವುದಕ್ಕೆ ಸಹಾಯವಾಗುತ್ತದೆ. ರಾಜಕೀಯಮಟ್ಟದಲ್ಲಿ ಈ ಕಲ್ಮಶ ಹೋಗಬೇಕು. ಒಕ್ಕಲಿಗರು 8 ಜನರಿದ್ದಾರೆ ಅವರನ್ನು ತರಾಜೆಗೆ ತೆಗೆದುಕೊಳ್ಳಬೇಕೆಂದು ಮಾನ್ಯ ಶ್ರೀ ಲಕ್ಕಪ್ಪನವರು ಹೇಳುತ್ತಾರೆಂದು ಜನ ಮಾತನಾಡುತ್ತಿದ್ದಾರೆ. ನನಗೇನು ತಿಳಿಯುತ್ತದೆಂದರೆ, ಏನೂ ಕೆಲಸವಿಲ್ಲದೇ ಇರುವವರನ್ನು ಮಂತ್ರಿಗಳನ್ನಾಗಿ ಮಾಡಿದಾರೆ. ಅವರಿಂದ ಇಷ್ಟು ಇಂಬ್ಯಾಲೆನ್ಸ್ ಆಗಿದೆಯೆಂದು. ಇವತ್ತು, ಈ ಒಂದು ಇಂಬ್ಯಾಲೆನ್ಸ್ ಹೋಗಿ ಅವರ ಮನಸ್ಸಿನಲ್ಲರತಕ್ಕ ಕಲ್ಮಶ ಹೋಗಬೇಕು. ಅಂಥ ಸಮಯದಲ್ಲಿ ಇಂಥ ನಿರ್ಣಯ ಬಂದರೆ ಬಾರೀ ಒಳ್ಳೆಯದು.

(ಶ್ರೀ ಎಚ್. ಎನ್. ನಂಜೇಗೌಡ)

ಇನ್ನೊಂದು ವಿಚಾರ. ಆಡಳಿತ ಪಕ್ಷದಲ್ಲಿ ಕೆಲವೇ ಭಾಗದ ಜನರು, ಕೆಲವೇ ಜಿಲ್ಲೆಯ ಜನರು ಬಹಳ ಪ್ರಭಾವಯುತ ಮಂತ್ರಿಯ ಖಾತೆಗಳನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ ಅವರೇ ಎಲ್ಲಾ ಪ್ರಭಾವಿತರಾಗಿ ನಮ್ಮನ್ನು ಅರೆಯುತ್ತಿದ್ದಾರೆಂಬುದು ಪ್ರಾಮುಖ್ಯವಾದ ವಿಚಾರ.

ಶ್ರೀ ಜಿ. ವಿ. ಬಸವರಾಜ ಮಾಗಾವಿ (ರೋಕೋಪಯೋಗಿ ಶಾಖೆಯ ಉಪಮಂತ್ರಿಗಳು).— ತಮ್ಮ ಕತೆ ಯಾವಾಗ ಬರುತ್ತದೆ ?

ಶ್ರೀ ಎಚ್. ಎನ್. ನಂಜೇಗೌಡ.– ಕತೆ ನಾನು ಪ್ರಾರಂಭ ಮಾಡುವುದಿಲ್ಲ. ಅದನ್ನು ನಿಮ್ಮ ನಾಯಕರು ಮಾಡಬೇಕಾದ್ದು. ಕತೆ ಪ್ರಾರಂಭವಾಗಬೇಕಾದರೆ, ಕನ್ನಡ ನಾಡು ನಿರ್ಣಯ ಅಂಗೀಕಾರವಾಗಬೇಕಾದರೆ, ಒಂದು ಒಳ್ಳೆಯ ಮನೋಸ್ಥಿತಿ ಜನರಲ್ಲಿ ಬರಬೇಕಾದರೆ, ಈ ಒಂದು ಮನಸ್ಸಿನ ಕಲ್ಮಷ ಏನಿವೆ, ಅದು ಹೋಗಬೇಕಾದರೆ ಅದಕ್ಕೆ ಒಂದು ಜುಡಿಶಿಯಲ್ ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಮಾಡಬೇಕು, ಆಗ ಕತೆ ಪ್ರಾರಂಭವಾಗುತ್ತದೆ. ಇವತ್ತು ಜನರಲ್ಲಿ ಒಂದು ಒಳ್ಳೆಯ ಮನೋಭಾವ ರೂಢಿತವಾಗಬೇಕಾದರೆ, ಈ ಅಧಿಕಾರಿ ವರ್ಗದವರಲ್ಲಿ ಅದು ಪ್ರಾರಂಭವಾಗ ಬೇಕೆಂಬುದನ್ನು ಮರೆಯಬಾರದು. ಒಬ್ಬ ಐ.ಎ.ಎಸ್. ಆಫೀಸರಿಂದ ಹಿಡಿದು ತೋಟಿ ತಳವಾರಿಯ ವರೆಗೂ ಒಂದು ಭಾವೈಕ್ಯತೆಯಾಗಬೇಕು. ಅವರಲ್ಲಿ ಈ ರೀತಿಯಾಗಬೇಕಾದರೆ ಅದು ಯಾವ ರೀತಿ ಯಲ್ಲಿ ಆಗಬೇಕು ? ಅವರಿಗೆ ಅನ್ಯಾಯ, ಪೋಸಗಳು ಬರದಂತೆ ಆಗಬೇಕು. ಒಂದು ದಿವಸ ನಾನು ಒಬ್ಬ ಸದಸ್ಯರೊಡನೆ ಒಂದು ಆಫೀಸರಲ್ಲಿ ಹೋಗಿದ್ದೆ. ಅವರು ಒಬ್ಬ ಸಂಸ್ಥಾನ ಮಟ್ಟದ ಅಧಿಕಾರಿ. ಮಾಗಾವಿಯವರಿಗೆ ಸಂಬಂಧಪಟ್ಟ ಅಧಿಕಾರಿ. ಅವರಮೇಲೆ ಒಂದು ರಿಪೋರ್ಟು ಕೂಡ ಕೊಟ್ಟಿದ್ದೇನೆ. ಇವತ್ತು ಅದಕ್ಕೆ ನಿಮ್ಮಲ್ಲಿ ಪವರ್ ಇದೆಯೋ ಎಂದು ಗೊತ್ತಿಲ್ಲ. ಯಾವ್ಯಾವ ಮಂತ್ರಿಯವರಿಗೆ ಯಾವ್ಯಾವ ಅಧಿಕಾರ ಕೊಟ್ಟಿದ್ದಾರೆಂದು ಗೊತ್ತಿಲ್ಲ. ಆ ಅಧಿಕಾರಿಯು ಅಲ್ಲಿ ನರಿಯಾದ ರೀತಿಯಲ್ಲಿ ನಡೆದುಕೊಳ್ಳಲಿಲ್ಲ, ದುರದೃಷ್ಟವಶಾತ್ ಆ ಮನುಷ್ಯ ಹೊಸ ಮೈಸೂರು ಸಂಸ್ಥಾನದ ಅಧಿಕಾರಿ. ನಾನು ಹೊರಗೆ ಬಂದಾಗ, ಇತರ ಕ್ಲಾಸ್ II, III ಅಧಿಕಾರಿಗಳು ಅಲ್ಲಿ ಇದ್ದರು. ಅವರು ಹೇಳುತ್ತಾರೆ "ಸ್ವಾಮಿ, ಹಳೆಯ ಮೈಸೂರು ಎಂ.ಎಲ್.ಎ.ಗಳನ್ನು ಅವರು ಕಂಡರೆ ಹೀಗೇ ಮಾಡುವುದು, ಯಾರೂ ಬಂದರೂ ಕೂಡ ಅವರು ಹೀಗೆ ಮಾಡುತ್ತಾರೆ" ಎಂದು ಹೇಳಿದರು. ಹೀಗೆ ಇದೆ ಆ ಪ್ರಸಂಗ. ಆದ್ದರಿಂದ ನಾವು ಇವತ್ತು ಇಲ್ಲಿರುವುದು ಕತೆ ಕೇಳುವುದಕ್ಕೆ, ಪ್ರಾರಂಭ ಮಾಡುವುದಕ್ಕೆ ಅಲ್ಲ. ಕೆಲವೇ ಜನ ವಿಧಾನಸಭಾ ಸದಸ್ಯರನ್ನು ಕಾನ್‌ಫಿಡೆನ್ಸ್‌ನಲ್ಲಿ ಇಟ್ಟುಕೊಂಡು ಅವರು ಆಡಳಿತವನ್ನು ನಡೆಸುತ್ತಿದ್ದಾರೆಂಬುದು ಜನಜನಿತವಾಗಿದೆ. ಪುನಃ ಆ ಅಧಿಕಾರಿಯ ವಿಚಾರಕ್ಕೆ ಈಗ ಬಾರ್ತೇನೆ. ಈ ಅಧಿಕಾರಿಗಳಿಗೆ ಹಳೆಯ ಮೈಸೂರು ಎಂದರೆ ಆಗುವುದಿಲ್ಲ. ಅದೇ ರೀತಿ ಹೊಸ ಮೈಸೂರು ಎಂದರೆ, ಇನ್ನಿತರ ಕೆಲವು ಅಧಿಕಾರಿಗಳಿಗೆ ಆಗುವುದಿಲ್ಲ. ಅಧಿಕಾರಿ ವರ್ಗದವರಲ್ಲಿ ಯಾವಾಗ ಇದು ಪ್ರಾರಂಭವಾಯ್ತು ? When there is demoralisation and moral degradation you must know that you cannot punish them. ನಮ್ಮ ಸಮಾಜಕ್ಕೆ ನ್ಯಾಯ ದೊರೆಯಬೇಕಾದರೆ, ಅಧಿಕಾರಿ ವರ್ಗದಲ್ಲಿರತಕ್ಕ ಅಧಿಕಾರಿಗಳಿಂದ ದೊರೆಯಬೇಕು. ಯಾವಾಗ ಈ ಒಂದು ಅಭಿಪ್ರಾಯವನ್ನು ಇಟ್ಟುಕೊಂಡಿರುತ್ತಾರೋ, ಆಗ ನಮ್ಮ ಆಡಳಿತ ಎಲ್ಲಿ ಕಲ್ಮಶಹೀನವಾಗುತ್ತದೆ ? ನಿಮ್ಮ ಮುಖ್ಯ ಮಂತ್ರಿಯವರು ಸತ್ಯ ಹರಿಶ್ಚಂದ್ರರಿರಬಹುದು, ಶ್ರೀ ಮಾಗಾವಿಯವರು ರೋಹಿತಾಶ್ವರಿರಬಹುದು, ಆದರೆ, ಅವರಿಗೆ ಒಳ್ಳೆಯ ಹೆಸರು ಬರಬೇಕಾದರೆ, ಅಧಿಕಾರ ವರ್ಗ ಕೆಲಸ ಮಾಡತಕ್ಕ ರೀತಿ ನೀತಿಗಳನ್ನು ನರಿಮಾಡಬೇಕು. ಯಾವುದಾದರೂ ಒಂದು ಆಫೀಸಿಗೆ ಹೋದರೆ ಜನರ ಮನದಲ್ಲಿ ಯಾವ ಒಂದು ಕೊಳಕು ಇದೆ, ಅದು ಮಾಯವಾಗಬೇಕು. ಅದು ಮಾಯವಾಗಬೇಕಾದರೆ, ಒಳ್ಳೆಯ ಆಡಳಿತ ಬರಬೇಕಾದರೆ, ಇದು ಕಣ್ಣುಮುಚ್ಚಿಕೊಂಡು ಆಡಳಿತ ಮಾಡಿದರೆ ಆಗುವುದಿಲ್ಲ. ಇವತ್ತು ಹಳೆಯ ಮೈಸೂರಿನ ಆಫೀಸರುಗಳಿಗೆ ಹೊಸ ಮೈಸೂರಿನವರನ್ನು ಕಂಡರೆ ಆಗುವುದಿಲ್ಲ, ಹೊಸ ಮೈಸೂರಿನ ಆಫೀಸರುಗಳಿಗೆ ಹಳೆಯ ಮೈಸೂರಿನವರನ್ನು ಕಂಡರೆ ಆಗುವುದಿಲ್ಲ. ನಾನು ನಂಜೇಗೌಡ, ಹಾಸನ ಜಿಲ್ಲೆ ಅಂದರೆ, ಹಳೆಯ ಮೈಸೂರಿನ ಅಧಿಕಾರಿಗೆ, ಸಂತೋಷವಾಗುತ್ತದೆ, "ಬನ್ನಿ ಸ್ವಾಮಿ, ಏನಾದರೂ ಮಾಡೋಣ, ಏನೂ ವರಿ ಮಾಡಬೇಡಿ" ಎನ್ನುತ್ತಾರೆ. ಆದರೆ ಹೊಸ ಮೈಸೂರಿನ ಆಫೀಸರ ಹತ್ತಿರ ಹೋದರೆ "No No, we have to follow certain rules and procedures beyond which we can't go. ಅದು ಹೇಗೆ ಆಗುತ್ತದೆ rules do not permit, how can it be possible ?" ಎಂದು ಹೇಳುತ್ತಾರೆ.

ಇಂಥಾ ಸನ್ನಿವೇಶದಲ್ಲಿ ಈ ಒಂದು ನಿರ್ಣಯ ಈ ಸಭೆಯ ಮುಂದೆ ಬಂದಿದೆ. ಇದನ್ನು ಯಾವ ರೀತಿ ಸ್ವೀಕಾರ ಮಾಡಬೇಕು ಎನ್ನುವ ಪ್ರಶ್ನೆ ಬಂದಿದೆ. ಧಾರವಾಡ ಜಿಲ್ಲೆಗೆ 35 ಲಫ್ಟ್ ಇರಿಗೇಷನ್

ಯೋಜನೆಗಳನ್ನು ಮುಂಜೂರು ಮಾಡಿದರೆ ಪ್ರಾದೇಶಿಕ ಸಮತೋಲನ ಇದೆಯೇ ? ಹೊಳೆನರಸೀ ಪುರಕ್ಕೆ ಒಂದು ಲಫ್ಟ್ ಇರಿಗೇಷನ್ ಯೋಜನೆಯನ್ನು ಮುಂಜೂರು ಮಾಡಿ ಶ್ರೀ ದೇವೇಗೌಡರನ್ನು ಕಾಂಗ್ರೆಸ್ಸಿಗೆ ಸೇರಿಸಿಕೊಂಡಿರಿ. ಈ ರೀತಿ ಮಾಡುವುದಾದರೆ ಭಾವೈಕ್ಯತೆ ಬಂದಿದೆಯೇ ? ಆದ್ದರಿಂದ ಈ ನಿರ್ಣಯವನ್ನು ಸ್ವೀಕಾರ ಮಾಡತಕ್ಕಂಥ ಮನೋಭೂಮಿಕೆ ಕನಸಿನಲ್ಲಿಯಾದರೂ ಕಾಣುತ್ತದೆಯೇ ಎಂದು ನಾನು ಶ್ರೀಮಾನ್ ಮಾಗಾವಿಯವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇದಲ್ಲದೆ ಹಾರಂಗಿ ಯೋಜನೆಗೆ 2½ ಕೋಟಿ ರೂಪಾಯಿಗಳ ಟೆಂಡರನ್ನು ಕಾಲ್‌ಫಾರ್ ಮಾಡಿ ಹಣದ ಅಭಾವ ಎಂದು ಹೇಳಿ ಅದನ್ನು ಕೈಬಿಟ್ಟಿರಿ; ಅದನ್ನು ತಿರಸ್ಕರಿಸಿದಿರಿ. ಅದರಿಂದ 50 ಲಕ್ಷ ರೂಪಾಯಿಗಳು ನಷ್ಟವಾಯಿತು. ಆದರೆ ಇವೊತ್ತು ಅಲಮಟ್ಟಿ ಯೋಜನೆಗೆ 11½ ಕೋಟಿ ರೂಪಾಯಿಗಳ ಕಾಮಗಾರಿಗಳಿಗೆ ಟೆಂಡರನ್ನು ಕರೆದಿದ್ದೀರಿ, ಇದನ್ನು ನೋಡಿದರೆ ನೀವು ಹಳೆಯ ಮೈಸೂರಿಗೆ ಅನ್ಯಾಯ ಮಾಡುತ್ತಿದ್ದೀರಿ ಎನ್ನುವ ಮಾತನ್ನು ಹೇಳಬೇಕಾಗಿದೆ. ಈ ರೀತಿಯಾಗಿ ಕೃಷ್ಣಾ ಬೇಸಿನ್ನಿಗೆ ಹೆಚ್ಚು ಹಣವನ್ನು ಕೊಟ್ಟು ಅಲ್ಲಿ ಅಭಿವೃದ್ಧಿ ಕೆಲಸವನ್ನು ಮಾಡುವುದರಲ್ಲಿ ಮುಖ್ಯ ಮಂತ್ರಿಗಳ ಖುದ್ದು ಜವಾಬ್ದಾರಿ ಇದೆ. ಹಾರಂಗಿ ಯೋಜನೆಗೆ 2½ ಕೋಟಿ ರೂಪಾಯಿಗಳ ಟೆಂಡರನ್ನು ಕಾಲ್‌ಫಾರ್ ಮಾಡಿ ಅದನ್ನು ತಿರಸ್ಕಾರ ಮಾಡಿದ್ದರಿಂದ 50 ಲಕ್ಷ ರೂಪಾಯಿಗಳು ನಷ್ಟವಾಯಿತು. ಹಾರಂಗಿ ಯೋಜನೆಯನ್ನು ಕಾರ್ಯಗತ ಮಾಡದಿದ್ದರೆ ಅಲ್ಲಿನ ಜನಗಳಿಗೆ ದುಃಖ. ಆದ್ದರಿಂದ ಅದನ್ನು ಮಾಡುವುದಕ್ಕೆ ಹೊರಟು ಕಾಂಪಿಟಿಷನ್ ಟೆಂಡರ್ ಕರೆದರೆ ಮತ್ತೆ 50 ಲಕ್ಷ ರೂಪಾಯಿಗಳು ನಷ್ಟವಾಗುತ್ತದೆ. ಈರೀತಿ ಮಾಡುವುದಾದರೆ ಜನತೆಯ ಮನಸ್ಸಿನಲ್ಲಿರತಕ್ಕ ಕಲ್ಮಷ ಹೇಗೆ ಹೋಗುತ್ತದೆ. ಆದ್ದರಿಂದ ರಾಜ್ಯದ ಜನತೆಯ ಮನಸ್ಸಿನಲ್ಲಿರತಕ್ಕ ಕಲ್ಮಷವನ್ನು ತೊಳೆಯುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ಯೋಚನೆ ಮಾಡಬೇಕು. ಇಷ್ಟು ಹೇಳಿ ನಾನು ನನ್ನ ಉಳಿದ ಭಾಷಣವನ್ನು ಮುಂದಿನ ಖಾಸಗೀ ಕಾರ್ಯ ಕಲಾಪದ ದಿವಸ ಮುಂದುವರಿಸುತ್ತೇನೆ.

Calling Attention Notice to a matter of urgent Public Importance *re:* Termination of Services of Teachers in Raichur District.

Mr. SPEAKER.—Let us taken up the next item. There is a Call Attention notice given by Sriyuths M. Nagappa, K. Sangana Gowda and Sri Sadasivappa Patil. Let Sri Sadasivappa Patil call it.

ಶ್ರೀ ಸದಾಶಿವಪ್ಪ ಪಾಟೀಲ್.—ಸ್ಯಾಮಿ ರಾಯಚೂರು ಜಿಲ್ಲೆಯ 106 ಜನ ಪ್ರಾಥಮಿಕ ಶಾಲೆಯ ಶಿಕ್ಷಕರನ್ನು ವಜಾ ಮಾಡಿದಬಗ್ಗೆ ನಾನು ಮಾನ್ಯ ಶಿಕ್ಷಣ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

† Sri N. M. KOTRABASIAH SOGI (Deputy Minister for Education).—Sir, with reference to the Call Attention Notice of Sri Sadashivappa Patil under Rule 63 (1) of Rules of Procedure and Conduct of Business in the Mysore Legislative Assembly, I beg to make the following statement :

The Chairman, (District Education Officer), District Level Recruitment Comm.ttee, Raichur, invited applications for the appointment of Teachers in Primary Schools in his Notification No. E2/251/APT/4/68-69, dated 4th November 1968. A large number of applications from candidates were received. 1,321 candidates were called for interview and the interviews took place during the period from 2nd April 1969 to 7th April 1969. During the interview, handwriting and oral tests were administered. During the oral test, credit was given for previous experience, marks obtained at the qualifying examination, personality and general knowledge. The

(SRI N. M. KOTRABASAIAH SOGI)

District Level Recruitment Committee after the interviews, selected 698 candidates as eligible for appointment. The names of these candidates have been notified in the Official Gazette dated 19th June, 1969.

In the process of selection, 106 teachers who were in service, *and who also appeared for interview* were not selected by the D.L.R.C.C. These candidates were not eligible for regularisation of their services under Rule 3(2) of the Mysore State Civil Services (Recruitment of Local Candidates to Class III Posts) Rules, 1966, as they were not in continuous service as local candidates from a date prior to 31st December, 1964.

Under these circumstances, the termination of service of these 106 local candidates to provide places for candidates selected by the D.L.R.C.C. was inevitable. Understood some of the teachers have taken this matter to the Court and, therefore, it has become sub-judice.

ಶ್ರೀ ಎಂ. ನಾಗಪ್ಪ.—ಸ್ವಾಮಿ ರಾಯಚೂರಿನಲ್ಲಿರತಕ್ಕ ಡಿಸ್ಟ್ರಿಕ್ಟ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿಯವರು ಗೆಜೆಟ್ ನೋಟಿಫಿಕೇಷನ್ ಪಾರ್ಟ್ 8, ತಾ॥ 21-11-68ರಲ್ಲಿ 300 ವೇಕೆನ್ಸಿಯನ್ನು ತೋರಿಸಿದ್ದು, ಅದಕ್ಕೆ ಸಂಬಂಧಪಟ್ಟಹಾಗೆ 698 ಜನಗಳನ್ನು ಸೆಲೆಕ್ಟ್ ಮಾಡಿದ್ದಾರೆ. ಅಮೇಲೆ ಇನ್ನೊಂದು ನೋಟಿಫಿಕೇಷನ್‌ನಲ್ಲಿ ಮೆಟ್ರಿಕ್ಯುಲೇಷನ್ ಪಾಸಾಗಿ ಟ್ರೈನ್ಡ್ ಆದವರಿಗೆ ಪ್ರಿಫರೆನ್ಸ್ ಕೊಡುತ್ತೇವೆ, ಅವರಿಗೆ 65-90 ರೂಪಾಯಿಗಳ ಸಂಬಳ ಕೊಡುತ್ತೇವೆ, ಎಂದು ಹೇಳಿ ಅವರನ್ನು ಸೆಲೆಕ್ಟ್ ಮಾಡುವಾಗ ರಾಸ್ಟ್ ಆರ್ಡರ್ ಆಫ್ ದಿ ರ್ಯಾಂಕಿನಲ್ಲಿ ಫಿಕ್ಸ್ ಮಾಡಬಹುದೇ ? ಮತ್ತು ಅದರಲ್ಲಿ ಜನರರ್ ಕ್ಯಾಂಡಿಡೇಟ್, ರೇಡಿ ಕ್ಯಾಂಡಿಡೇಟ್ ಮತ್ತು ಹರಿಜನ ಕ್ಯಾಂಡಿಡೇಟ್ ಎಂದು ಅವರ ರ್ಯಾಂಕುಗಳನ್ನು ಮೂರು ರ್ಯಾಂಕುಗಳಲ್ಲಿ ಸಪರೇಟಾಗಿ ಫಿಕ್ಸ್ ಮಾಡಿದ್ದಾರೆ. ಅದು ರೂಲ್ಸ್ ಪ್ರಕಾರ ಇಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತು ಕೆಲವು ಸೆಲೆಕ್ಟೆಡ್ ಕ್ಯಾಂಡಿಡೇಟುಗಳ ಹೆಸರುಗಳನ್ನು ಕಿತ್ತುಹಾಕಿ ಹೊಸ ಹೆಸರುಗಳನ್ನು ಸೇರಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತು ನುಬ್ಬಾರೆಡ್ಡಿ ಹಾಗೂ ರಂಗರೆಡ್ಡಿ ಎನ್ನುವರಿಗೆ ಸೆಲೆಕ್ಟ್ ಆಗಿದೆ ಎಂದು ಹೇಳಿ ಅವರಿಗೆ ಅಪಾಯಿಂಟ್‌ಮೆಂಟ್ ಆರ್ಡರ್ ಕೊಟ್ಟು ಮತ್ತೆ ಅವರಿಗೆ ಟರ್ಮಿನೇಷನ್ ನೋಟೀಸ್ ಕೊಟ್ಟಿದ್ದಾರೆ. ಈ ರೀತಿಯಾಗಿ ಈ ಸೆಲೆಕ್ಷನ್‌ನಲ್ಲಿ ಅನೇಕ ತರಹ ಅಕ್ರಮಗಳು ಆಗಿರುವ ಕಾರಣ ಪುನಃ ಇದನ್ನು ಪರಿಶೀಲನೆ ಮಾಡಿ ಹೊಸ ಸೆಲೆಕ್ಷನ್ ಮಾಡುವುದಕ್ಕೆ ಸರ್ಕಾರದವರು ಯೋಚನೆ ಮಾಡುತ್ತೀರಾ ?

SRI N. M. KOTRABASIAH SOGI.—I have given factual information. Since the matter has been seized by the High Court, it is sub-judice. Therefore, I am not prepared to give any further details and commit myself and the Government to any position.

ಶ್ರೀ ಸದಾಶಿವಪ್ಪ ಪಾಟೀಲ್.—ಇಲ್ಲಿ ಮಾನ್ಯ ಸಚಿವರು ಕ್ರೆಡಿಟ್ ವಾಜ್ ಗಿವನ್ ಫಾರ್ ಪ್ರೀವಿಯಸ್ ಎಕ್ಸ್‌ಪೀರಿಯನ್ಸ್ ಎಂದು ಹೇಳಿದ್ದಾರೆ. ಉಪಾಧ್ಯಾಯರು ಸರ್ವೀಸಿನಲ್ಲಿ ಇದ್ದವರು ಇಂಟರ್‌ವ್ಯೂಗೆ ಬಂದಾಗ ಅವರನ್ನು ನೋಡಿ ಅವರು ಇನ್‌ಎಕ್ಸ್‌ಪೀರಿಯನ್ಸ್‌ಡ್ ಎಂದು ಹೇಗೆ ಹೇಳಿದರು ? ಸರ್ವೀಸಿನಲ್ಲಿದ್ದವರಿಗೆ ಎಕ್ಸ್‌ಪೀರಿಯನ್ಸ್ ಇರಲಿಲ್ಲ ಎಂದು ಹೇಗೆ ಹೇಳುತ್ತೀರಿ, ಅವರು ಏತಕ್ಕೆ ಸೆಲೆಕ್ಟ್ ಆಗಲಿಲ್ಲ ! ಈ 4-5 ವರ್ಷ ಸರ್ವೀಸ್ ಆದವರನ್ನು ತೆಗೆದುಹಾಕಿದರೆ ಅವರು ಮುಂದೆ ಬೇರೆ ಕೆಲಸಕ್ಕೆ ಹೋಗುವುದಕ್ಕೆ ವಯಸ್ಸಿನ ಪ್ರಶ್ನೆ ಬರುವುದಿಲ್ಲವೇ ! ಆದ್ದರಿಂದ ಅವರ ಬಗ್ಗೆ ಏನಾದರೂ ಕನ್‌ಸಿದರ್ ಮಾಡುತ್ತೀರಾ ?

Sri N. M. KOTRABASAIAH SOGI.—I have to repeat the samething. Since the matter is seized by the High Court I cannot make any statement.

Sri C. K. RAJAIAH SHETTY (Chicknaikanahalli).—Somebody might have filed a writ petition. But what prevents the Government from punishing the officers ?

Sri N. M. KOTRABASAIAH SOGI.—The writ is filed against the Government.

ಶ್ರೀ ಸದಾಶಿವಪ್ಪ ಪಾಟೀರ್—ಈಗ ಅಲ್ಲರುವ ಡಿ. ಇ.ಒ. ಅವರು ಯಾವ ಏರಿಯಾದವರೇ ಆಗಿರಲಿ, ಅವರು ಇನ್ನು 6 ಅಥವಾ 8 ತಿಂಗಳಲ್ಲಿ ರಿಟೈರ್ ಆಗುತ್ತಾರೆಂದು ತಿಳಿದಿದ್ದೇನೆ. ಅವರು ಹೋಗುವ ಕಾಲಕ್ಕೆ ತಮಗೆ ಬೇಕಾದವರಿಗೆ ಕೆಲಸ ಕೊಡುವುದು, ತಮಗೆ ಬೇಡದವರನ್ನು ಕೆಲಸದಿಂದ ತೆಗೆಯುವುದು ಮಾಡುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಎಂ. ಕೊಟ್ರಬಸಯ್ಯಸೋಗಿ :—ಇದರಲ್ಲ ಪರ್ಸನಲ್ ಮೋಟಿವ್ ಇಲ್ಲ. Any aggreived party may appeal to the Government through proper channel and proper action will be taken.

Mr. DEPUTY SPEAKER :—The House will now adjourn and meet on Monday at 1 P.M.

The House adjourned at Five Minutes past Seven of the Clock to meet again at One of the Clock on Monday, the 25th August 1969.

WD 13462—GPB—600—7-11-1969

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Monday, 25th August 1969

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Disposal of Cart Roads and Bunds of Lakes by Grampanchayat of Angol

25. Sri B. B. SAYANAK (Belgaum).—

Will the Minister for Development be pleased to state:—

(*a*) whether there were some cart roads in the Agricultural lands and Bunds of lakes in the hands of the Grampanchayat of Angol in Belgaum Taluk;

(*b*) whether it is a fact that these cart roads and bunds of lakes were auctioned by the Grampanchayat;

(*c*) if so, the income derived;

(*d*) whether these cart roads and bunds of lakes were under the control of the Revenue Department after the merger of Angol village in Belgaum Municipality or whether these cart roads and bunds of lakes are now under the control of villagers of Angol;

(*e*) if so, the authority that has handed over these cart roads and bunds of lake to the villagers?

Sri P. M. NADGOUDA (Minister for Development).—

(*a*) Only some roads and bunds of tanks were in the hands of the Town Panchayat.

(*b*) The Grass grown on the sides of the roads and tank bund was being auctioned.

(*c*) Rs. 2,706 was derived in 1967.

(*d*) These properties now vest in the Belgaum Municipality.

(*e*) Does not arise.

Sri B. B. SAYANAK.—May I know whether the Minister is aware that only the village limits of Angol is merged in Belgaum City, but not the agricultural lands ?

Sri P. M. NADGOUDA.—From 1967 the City Municipality of Belgaum has extended its limit to Angol Town Panchayat.

Sri B. B. SAYANAK.—What I mean to say is that only the village limits are included in the City Municipality but not the agricultural lands. Am I correct ?

Sri P. M. NADGOUDA.—When the Town Panchayat is included, the roads and bunds are also included.

Sri B. B. SAYANAK.—The Hon. Minister is giving a wrong answer. What I mean is that only the village Panchayat is merged in Belgaum City but not the agricultural lands. He is saying something else.

Sri P. M. NADGOUDA.—I have understood the point. When the village is merged in Belgaum City, the entire jurisdiction of the village will have to be merged.

Training of Harijans in Fishing

75. Sri A. RAMACHANDRA (Sulya).—

Will the Minister of State for Ports and Fisheries be pleased to state:—

the number of Harijans in the State to whom training in fishing has been given so far ?

Sri H. C. LINGA REDDY (Minister of State for Ports and Fisheries).—

89.

ಶ್ರೀ ಎ. ರಾಮಚಂದ್ರ.—89 ಜನ ಹರಿಜನರಿಗೆ ಮೀನು ಹಿಡಿಯುವ ಬಗ್ಗೆ ತರಪೇತಿ ನೀಡಲಾಗಿದೆ ಎಂದು ಹೇಳಿದ್ದೀರಿ. ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಜನರಿಗೆ ಈ ರೀತಿ ತರಪೇತಿ ನೀಡಲಾಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಹರಿಜನರಿಗೆ ತರಪೇತಿ ಕೊಟ್ಟಂತೆ ಉಳಿದವರಿಗೂ ಸಹ ತರಪೇತಿ ಕೊಡಲಾಗಿದೆ.

ಶ್ರೀ ಎ. ರಾಮಚಂದ್ರ.—ಉಳಿದವರಿಗೂ ಸಹ ತರಪೇತಿ ಕೊಡಲಾಗಿದೆ ಎಂದು ಹೇಳಿದರೆ ನನಗೆ ಅರ್ಥವಾಗಲಿಲ್ಲ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಒಟ್ಟು 89 ಜನ ಹರಿಜನರಿಗೆ ಮೀನು ಹಿಡಿಯುವ ಬಗ್ಗೆ ತರಪೇತಿ ನೀಡಲಾಗಿದೆಯೆಂದು ಉತ್ತರದಲ್ಲಿ ಹೇಳಿದೆ. ಒಟ್ಟಿನಲ್ಲಿ ಇನ್‌ಲೆಂಡ್ ಫಿಷರೀಸ್‌ನಲ್ಲಿ 150 ಜನರಿಗೆ ಮತ್ತು ಮೆರೈನ್ ಫಿಷರೀಸ್‌ನಲ್ಲಿ 1,405 ಜನರಿಗೆ ತರಪೇತಿ ನೀಡಲಾಗಿದೆ. ಅಂದರೆ ಒಟ್ಟು 1,555 ಜನರಿಗೆ ತರಪೇತಿ ಕೊಡಲಾಗಿದೆ,

ಶ್ರೀ ಹೆಚ್. ಪುಟ್ಟದಾಸ.—ತರಬೇತಿ ಪಡೆದಿರುವ ಹರಿಜನರಿಗೆ ಅವರು ಆ ವ್ಯತ್ತಿಯನ್ನು ಅವಲಂಬನೆ ಮಾಡಲು ಸರಕಾರ ಕೊಟ್ಟಿರುವ ಸೌಲಭ್ಯಗಳೇನು ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಮೆರಿನ್ ಫಿಷರೀಸ್‌ನಲ್ಲಿ ತರಬೇತಿ ಪಡೆದಿರುವವರು ಮೂರು ನಾಲ್ಕು ಜನರು ಸೇರಿ ಗ್ರೂಪ್ ಮಾಡಿಕೊಂಡು ಬಂದಮೇಲೆ ಅವರಿಗೆ ಬೋಟುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ. ಅವರಿಗೆ ರೋನುಗಳು ಹಾಗೂ ಸಬ್‌ಸಿಡಿ ರೂಪದಲ್ಲಿ ಬೋಟುಗಳನ್ನು ತೆಗೆದುಕೊಳ್ಳುವುದಕ್ಕೆ ಸಹಾಯ ಮಾಡಿ ಆ ನಂತರ ಕಂತುಗಳಲ್ಲಿ ಸಾಲವನ್ನು ಮರುಪಾವತಿ ಮಾಡುವ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ ಸುಮಾರು 150 ಜನರಿಗೆ ಟ್ರೈನಿಂಗು ಕೊಡಲಾಗಿದೆ. ಹಾಗೆ ಟ್ರೈನಿಂಗು ಪಡೆದು ಬಂದ ಮೇಲೆ ಅಂತಹವರನ್ನು ಅಲ್ಲಲ್ಲಿ ಅಪರೇಟರು ಗಳಾಗಿ, ಅಸಿಸ್ಟೆಂಟು ಇಂಡಸ್ಟ್ರಿಯಲ್ ಇನ್‌ಸ್ಪೆಕ್ಟರುಗಳಾಗಿ ಹಾಗೂ ನಾನ್ ಎಸ್.ಎಸ್.ಎಲ್.ಸಿ. ಆಗಿರುವಂತಹವರಿಗೆ ವಾಚ್‌ಮನ್‌ಗಳ ಕೆಲಸಗಳನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ ಮತ್ತು ಇದರಂತೆ ಕೆಲಸಗಳನ್ನು ಮಾಡುತ್ತಿದ್ದಾರೆ.

ಶ್ರೀ ಬಿ. ಎಂ. ಇದಿನಬ್ಬ.—ತರಬೇತಿ ಪಡೆಯಲು ಬರುವ ಹರಿಜನರಿಗೆ ಮಾತ್ರ ತರಬೇತಿ ಕೊಡರಾಗುತ್ತಿದೆ ಎಂದು ಹೇಳಿದಿರಿ. ಆದರೆ ಇದರಂತೆ ಮುನಲ್ಮಾನರು ಹಾಗೂ ಕ್ರಿಶ್ಚಿಯನ್ನರು ತರಬೇತಿಗಾಗಿ ಬಂದರೂ ಅವರಿಗೆ ಅವಕಾಶ ಸಿಗುವುದಿಲ್ಲ ಎಂದು ಕೇಳುತ್ತೇವೆ. ಇದರಿಂದ ಎಲ್ಲರಿಗೂ ಸರಿಯಾದ ಟ್ರೈನಿಂಗು ಕೊಡುವಂತೆ ಎಲ್ಲ ವಿದ್ಯಾರ್ಥಿಗಳನ್ನೂ ತರಬೇತಿಗೆ ಏಕೆ ಸೇರಿಸಿ ಕೊಳ್ಳಬಾರದು?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಮೊದಲು ತರಬೇತಿಗಾಗಿ ಬಹಳ ಕಡಿಮೆ ವಿದ್ಯಾರ್ಥಿಗಳು ಬರುತ್ತಿದ್ದರು. ಈಚೆಗೆ ಮೆಕನೈಸ್ಡ್ ಫಿಷರೀಸ್ ಟ್ರೈನಿಂಗ್ ಪ್ರಾರಂಭ ಮಾಡಿದ ಮೇಲೆ ಇದು ಬಹಳ ಪಾಪ್ಯುಲರ್ ಆಗುತ್ತಿರುವುದರಿಂದ ಹೆಚ್ಚು ಸಂಖ್ಯೆಯಲ್ಲಿ ತರಬೇತಿಗಾಗಿ ಜನ ಬರುತಿದ್ದಾರೆ. ಆದರೆ ಎಲ್ಲರಿಗೂ ತರಬೇತಿ ಕೊಡುವುದಕ್ಕೆ ಆಗುತ್ತಿಲ್ಲ. ಇದಕ್ಕಾಗಿ ಒಂದು ಅಡ್ಮಿಷನ್ ಕಮಿಟಿ ಇದೆ. ಆ ಕಮಿಟಿಯವರು ಎಷ್ಟು ಜನರನ್ನು ಶಿಫಾರನು ಮಾಡುತ್ತಾರೋ ಅವರಿಗೆ ಮಾತ್ರ ತರಬೇತಿ ಕೊಡಲಾಗುತ್ತಿದೆ. ಇದರಂತೆ ಎಷ್ಟು ಜನರಿಗೆ ತರಬೇತಿ ಕೊಡಲು ಸಾಧ್ಯವೋ ಅಷ್ಟು ಜನರಿಗೆ ಮಾತ್ರ ಕೊಡಲು ಸಾಧ್ಯವಾಗುತ್ತಿದೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಮಾನ್ಯ ಮಂತ್ರಿಗಳು ಉತ್ತರದಲ್ಲಿ 89 ಜನ ಹರಿಜನರಿಗೆ ಮಾತ್ರ ಟ್ರೈನಿಂಗು ಕೊಡಲಾಗಿದೆ ಎಂದು ಹೇಳಿದ್ದಾರೆ. ಇಷ್ಟು ಹರಿಜನರಿಗೂ ಟ್ರೈನಿಂಗು ಕೊಟ್ಟ ಮೇಲೆ ಇವರಿಗೆ ಬೇಕಾಗುವ ಮೆಕನೈಸ್ಡ್ ಬೋಟುಗಳನ್ನು ಹಾಗೂ ಇನ್ನಿತರ ಸಲಕರಣೆಗಳನ್ನು ಸರಕಾರದವರು ಕೊಡುವ ವ್ಯವಸ್ಥೆ ಮಾಡಿದ್ದಾರೆಯೇ ! .

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ನಾನಾಗಲೇ ಇವಕ್ಕೆ ಉತ್ತರ ಹೇಳಿದೆ. ಇದರಲ್ಲಿ ಶಿಕ್ಷಣ ಪಡೆದು ತರಬೇತಿ ಪಡೆದು ಬಂದ ಮೇಲೆ ನಾಲ್ಕೈದು ಜನರು ಒಂದು ಗ್ರೂಪ್ ಮಾಡಿಕೊಂಡು ಬರುತ್ತಾರೆ. ಇವರಿಗೆಲ್ಲಾ ಸರಕಾರದಿಂದ ಮೆಕನೈಸ್ಡ್ ಬೋಟನ್ನು ಒದಗಿಸುವ ವ್ಯವಸ್ಥೆ ಮಾಡಿದೆ. ಇನ್‌ಲೆಂಡು ಫಿಶರೀಸ್‌ನಲ್ಲಿ ತರಬೇತಿ ಪಡೆದು ಬಂದವರನ್ನು ಅಲ್ಲಲ್ಲಿ ಅಪರೇಟರುಗಳಾಗಿ ಕೆಲಸಕ್ಕೆ ಸೇರಿಸಲಾಗಿದೆ ಮತ್ತು ನಾನ್ ಎಸ್.ಎಸ್.ಎಲ್.ಸಿ. ಆಗಿರುವವರಿಗೆ ವಾಚ್‌ಮನ್‌ಗಳ ಕೆಲಸ ಕೊಡುವ ವ್ಯವಸ್ಥೆ ಮಾಡರಾಗಿದೆ.

ಶ್ರೀ ಬೋಳಾ ರಘುರಾಮಶೆಟ್ಟಿ.—ಇದರಲ್ಲಿ 89 ಜನ ಹರಿಜನರಿಗೆ ತರಬೇತಿ ಕೊಡಲಾಗಿದೆ ಎಂದು ಇದೆ. ಆದರೆ ಸರಕಾರಕ್ಕೆ ಒಟ್ಟು ಎಷ್ಟು ಜನರು ತರಬೇತಿಗಾಗಿ ಅರ್ಜಿಗಳನ್ನು ಸಲ್ಲಿಸಿದ್ದರು ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ. —ಇದರ ವಿವರಗಳು ನನ್ನಲ್ಲಿಲ್ಲ. ಸಾಮಾನ್ಯವಾಗಿ ಎಲ್ಲರಿಗೂ ತರಬೇತಿ ಕೊಡಬೇಕೆಂದು ಇದೆ. ಆದರೆ ಈಚೆಗೆ ಹೆಚ್ಚು ಹೆಚ್ಚು ಜನರು ತರಬೇತಿಗಾಗಿ ಬರುತ್ತಿದ್ದಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ತರಬೇತಿಗೆ ಬರುವಾಗ ಇಷ್ಟು ಸೀಟುಗಳನ್ನು ಒದಗಿಸಬೇಕು ಎಂದು ಇರುವುದರಲ್ಲಿ ಹರಿಜನರಿಗೆ ಇಷ್ಟೇ ಸೀಟುಗಳನ್ನು ಕೊಡಬೇಕೆಂದು ನಿಗದಿ ಮಾಡಿ ಕೊಡುತ್ತಿಲ್ಲವೇ ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಸಾಮಾನ್ಯವಾಗಿ ಇದನ್ನೆಲ್ಲಾ ಅಡ್ಮಿಷನ್ ಕಮಿಟಿಗೇ ಬಿಡಲಾಗಿದೆ. ಅವರೂ ಕೂಡ ಹರಿಜನರಿಗೆ ಶೇಕಡಾ 18ರಷ್ಟು ಸೀಟುಗಳನ್ನು ಕೊಡಬೇಕು ಎಂದು ಇರುವುದನ್ನು ಗಮನದಲ್ಲಿಟ್ಟುಕೊಂಡು ಹಂಚುತ್ತಾರೆ.

Appointment of Government Pleaders and Government Advocates

250. Sri D. B. KALMANKAR (Aland).—

Will the Minister for Law, Labour and Parliamentary Affairs be pleased to state:—

(*a*) whether any appointments of Government Advocates and Government Pleaders have been made recently in the High Court of Mysore;

(*b*) if so, the number of them that are appointed and under what prescribed rules the appointments were made;

(*c*) of the appointed Advocates and Pleaders, the number of them that are from the Old Mysore area, Bombay Karnataka area, Hyderabad Karnataka area and other integrated area of the State (regionwise information may be given)?

Sri K. PUTTASWAMY (Minister for Law, Labour and Parliamentary Affairs).—

(*a*) Yes.

(*b*) 15.

The appointments have been made under the following Rules:—

(1) The Government Advocate and the Additional Government Advocate (Terms of Appointment and Conditions of Service) Rules, 1969.

ಗಳನ್ನು ಕಾನ್ಸ್‌ಟಿಟ್ಯೂಟ್ ಮಾಡಿದಾಗ ಇದರ ಚೇರ್ಮನ್ನರವರೇ ಇದರ ಆಡಳಿತವನ್ನು ಮಾಡಿಕೊಂಡು ಹೋಗುತ್ತಿದ್ದರು ಮತ್ತು ಕೆಲವು ಕಡೆಗಳಲ್ಲಿ ಇದ್ದ ಕಮಿಟಿಗಳಲ್ಲಿ ಆಯಾ ಜಿಲ್ಲಾಧಿಕಾರಿಗಳೇ ಆಡಳಿತ ನಡೆಸಿಕೊಂಡು ಬರುತ್ತಿದ್ದರು. ಸುಮಾರು ಹತ್ತು ಹನ್ನೆರಡು ವರ್ಷಗಳಿಂದಲೂ ಇದೇ ಪ್ಯಾಟರ್ನ್ ಮುಂದುವರಿದುಕೊಂಡು ಬರುತ್ತಿದೆ, ಇದನ್ನು ದೂರ ಮಾಡಲು ರೈತರ ಹಿತವನ್ನು ರಕ್ಷಣೆ ಮಾಡಬೇಕು ಎನ್ನುವ ಉದ್ದೇಶದಿಂದ ಇಲ್ಲಿ ಅಡ್ಮಿನಿಸ್ಟ್ರೇಟರುಗಳನ್ನು ನೇಮಿಸಿ ಕೊಸ ಕಾಯ್ದೆಯಂತೆ ಎಲೆಕ್ಷನ್‌ಗಳನ್ನು ಮಾಡಬೇಕು ಎಂದು ಇಲ್ಲಿ ಈ ಬರ್ ತಂದಿದೆ. ಈ ಬಿಲ್ಲಿನಲ್ಲಿ ಇರುವ ಸೆಕ್ಷನ್ 10 ರಂತೆ ಸರಕಾರವೇ ಹಿಂದೆ ನಾಮಕರಣ ಮಾಡಿದ್ದರೆ ಆ ಕಮಿಟಿಗಳನ್ನು ಇನ್ನೂ ಎರಡು ವರ್ಷಗಳ ಕಾಲ ಇಲ್ಲವೇ ಮೂರು ವರ್ಷಗಳ ಕಾಲ ಮುಂದೂಡುವಂತೆ ಮಾಡ ಬಹುದಾಗಿತ್ತು. ಆದರೆ ಹೀಗೆ ಮಾಡಿದರೆ ಪ್ರಜಾನತಾತ್ಮಕವಾಗುವುದಿಲ್ಲ ಎಂದು ಸರಕಾರ ತಿಳಿದುಕೊಂಡು ಇದಕ್ಕಾಗಿ ಒಂದು ಆರ್ಡನೆನ್ಸ್ ಮಾಡಿ ಆ ನಂತರ ಅದನ್ನು ಸರಿ ಮಾಡಲು ಇಂತಹ ಒಂದು ಬಿಲ್ಲನ್ನು ತರಲಾಗಿದೆ ಮತ್ತು ಇದನ್ನು ಮಾನ್ಯ ಸಭೆಯವರು ಒಪ್ಪಬೇಕೆಂದು ಕೇಳುತ್ತಿದ್ದೇನೆ. ಕೆಲವು ಸದಸ್ಯರು ಇದರ ಬಗ್ಗೆ ಬಹಳ ತೀಕ್ಷ್ಣವಾದ ಟೀಕೆಗಳನ್ನು ಕೂಡ ಮಾಡಿದರು. ಸರಕಾರದವರು ಇದಕ್ಕಾಗಿ ಅಡ್ಮಿನಿಸ್ಟ್ರೇಟರುಗಳನ್ನು ನೇಮಕ ಮಾಡಿ ಅವರೇ ಮುಂದೆ ಚುನಾವಣೆಗಳನ್ನು ಮಾಡಬೇಕೆಂದು ಇದರಲ್ಲಿ ಮಾಡಲಾಗಿದೆ. ಇಂತಹ ಒಂದು ಹೊಸ ಕಾಯ್ದೆಯನ್ನು ಮಾಡುತ್ತಿರುವುದು ಇದರಲ್ಲಿರುವ ಎರಡು ಮುಖ್ಯ ಕಲಮುಗಳಿಗಾಗಿ ಎರಡು ಕಲಮುಗಳು ಎಂದರೆ ಕಲಮು 10 ಮತ್ತು 11 ಕಲಮುಗಳು. 10 ನೇ ಕಲಮಿನ ಪ್ರಕಾರ ನಾಮಕರಣ ಮಾಡುವುದು, 11 ನೇ ಕಲಮಿನ ಪ್ರಕಾರ ಎಲೆಕ್ಷನ್‌ಗಳನ್ನು ನಡೆಸುವುದು. 10 ನೇ ಕಲಮಿನಂತೆ ಮಾರ್ಕೆಟ್ಟು ಕಮಿಟಿಗಳಿಗೆ ಅಡ್ಮಿನಿಸ್ಟ್ರೇಟರುಗಳು ಎಂದು ನೇಮಕ ಮಾಡಿ ಅವರ ಮೂಲಕ ಆಡಳಿತ ನಡೆಸಬೇಕು ಎಂದು ಮಾಡಲಾಗಿದೆ.

ಇದರಲ್ಲಿ ಇನ್ನೂ ಒಂದು ವಿಚಾರ ಇದೆ. ಅದು ಸೆಕ್ಷನ್ 4 ಮತ್ತು 6 ರಲ್ಲಿ ಹೇಳಿರುವಂತೆ ಇದರಲ್ಲಿರುವ ಚೀಫ್ ಮಾರ್ಕೆಟಿಂಗು ಆಫೀಸರು ಮಾರ್ಕೆಟ್ ಏರಿಯಾ ಯಾವುದು ಮತ್ತು ಯಾರ್ಡ್ ಯಾವುದು ಎನ್ನುವುದನ್ನು ನೋಟಿಫಿಕೇಷನ್ ಮೂಲಕ ತಿಳಿಸಬೇಕೆಂದು ಇದರಲ್ಲಿ ಮಾಡಲಾಗಿದೆ. ಮತ್ತು ಹೈ ಕೋರ್ಟಿನವರು ಇದರ ಬಗ್ಗೆ ಸಂಶಯ ಬಂತು ಎಂದು ಸೂಚನೆ ಕೊಟ್ಟಾಗ ಇದರಲ್ಲಿ ವ್ಯಾಲಿಡೇಷನ್ ಕೊಡುವುದರ ಸಲುವಾಗಿ ಸೆಕ್ಷನ್ 154 (ಎ) ಎಂದು ಇದರಲ್ಲಿ ಮಾಡಲಾಗಿದೆ. ಇದರಂತೆ ಕಾನ್‌ಸ್ಟಿಟ್ಯೂಷನರ್ ಆಗಿ ಕಮಿಟಿಗಳಿಗೆ ಯಾವ ರೀತಿಯಾದ ಅಧಿಕಾರಗಳು ಇರಬೇಕೆಂದು ಹೇಳಲಾಗಿದೆ. ಮತ್ತು ಇಲ್ಲಿರುವ ಅಧಿಕಾರಿಗಳೇ ಮಾರ್ಕೆಟ್ ಕಮಿಟಿ ಏರಿಯಾ ಯಾವುದು ಮತ್ತು ಯಾರ್ಡ್ ಯಾವುದು ಎನ್ನುವುದನ್ನು ಹೊಸದಾಗಿ ಕಮಿಟಿಗಳನ್ನು ಮಾಡಿ ಅದರಲ್ಲಿರುವ ಬೈಲಾಗಳ ಪ್ರಕಾರ ವಿವರಗಳನ್ನು ಕೊಡಲಾಗುತ್ತದೆ ಮತ್ತು ಸರಕಾರದವರ ಜುರಿಸ್‌ಡಿಕ್ಷನ್ ಹೇಗೆ ಇರಬೇಕು ಎನ್ನುವುದಕ್ಕೆ ಮುಖ್ಯವಾಗಿ ಇದರಲ್ಲಿ ಎರಡು ಮಾತುಗಳನ್ನು ಹೇಳಲಾಗಿದೆ. ಇದರಲ್ಲಿ ಅಡ್ಮಿನಿಸ್ಟ್ರೇಟರ್ಸ್‌ಗಳು ಎಂದು ಇರಬೇಕು ಅವರೇ ಮುಂದೆ ಎಲೆಕ್ಷನ್ ಮಾಡಬೇಕು ಎಂದು ಮಾಡಿದೆ. ಮುಂದೆ ಸೆಕ್ಷನ್ 4 ರಲ್ಲಿ ಹೇಳಿರುವಂತೆ ನೋಟಿಫಿಕೇಷನ್ ಹೊರಡಿಸಬೇಕು. ಇದು ಒಂದು ಮಹತ್ವವಾದ ವಿಚಾರ. ಇದನ್ನು ಅನುಸರಿಸಿ ನೋಟಿಫಿಕೇಷನ್ ಹೊರಡಿಸಿ ಅದರಂತೆ ವ್ಯಾಲಿಡೇಷನ್ ಮಾಡಬೇಕೆಂದು ಇಲ್ಲಿ ಬಿಲ್ ತರಲಾಗಿದೆ. ಈ ಬಿಲ್ಲಿನಲ್ಲಿ ಮೂರು ಮುಖ್ಯವಾದ ಅಂಶಗಳಿವೆ. ಒಂದನೇದು ಸಿಟಿ ಮುನಿಸಿಪಲ್ ಏರಿಯಾ ಹಾಗೂ ಪಂಚಾಯತಿಗಳ ಏರಿಯಾ, ಮಾರ್ಕೆಟಿಂಗು ಯಾರ್ಡ್ ಯಾವುದನ್ನು ಮಾಡಬೇಕು ಎಂದು ಹೇಳಿದೆ. ಎರಡನೇದು ಇದರಲ್ಲಿ ಯಾವ ರೀತಿ ಬದಲಾವಣೆ ಮಾಡಬೇಕು ಅದು ಹೇಗಿರಬೇಕು' ಎಂದು ಹೇಳಿದೆ. ಮೂರನೆಯದಾಗಿ ಡೆಪ್ಯೂಟಿ ಕಮೀಷನರ್ಸ್ ತಮ್ಮ ಹೆಡ್‌ಕ್ವಾರ್ಟರ್ಸ್‌ನಲ್ಲಿ ಅಡ್ಮಿನಿಸ್ಟ್ರೇಟರಾಗಿ ಇರಬೇಕು, ಇದೇ ರೀತಿ ಅಸಿಸ್ಟೆಂಟ್ ಕಮಿಷನರ್ಸ್, ತಾಸೀಲ್ದಾರ್ಸ್ ಇವರುಗಳೂ ತಮ್ಮ ತಮ್ಮ ಹೆಡ್ ಕ್ವಾರ್ಟರ್ಸ್‌ನಲ್ಲಿ ಅಡ್ಮಿನಿಸ್ಟ್ರೇಟರಾಗಿರಬೇಕು ಎಂದು ಮಾಡಿದ್ದೇವೆ. ಅವರಿಗೆ ಹೆಚ್ಚು ಕೆಲಸ ಇದ್ದ ಕಡೆ ಇನ್ನೊಬ್ಬ ಸ್ಪೆಷಲ್ ಆಫೀಸರ್‌ನ್ನು ಅಪಾಯಿಂಟ್ ಮಾಡುವ ಅಧಿಕಾರ ಇಟ್ಟುಕೊಂಡಿದ್ದೇವೆ. ಈ ರೀತಿಯಾಗಿ ಆರ್ಡಿನೆನ್ಸ್ ಮಾಡಿದ್ದೇವೆ. ಅದುದರಿಂದ ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಇದರಲ್ಲಿ ಯಾವ ತರಹ ಹಕ್ಕನ್ನೂ ಮೊಟಕು ಮಾಡಬೇಕು ಎನ್ನುವ ಉದ್ದೇಶ ಇಟ್ಟುಕೊಂಡಿಲ್ಲ. ನಾವು ಏನು ಅಡ್ಮಿನಿಸ್ಟ್ರೇಟರನ್ನು ಅಪಾಯಿಂಟ್ ಮಾಡುತ್ತೇವೋ ಅವರು ಅಲ್ಲಿ ಒಂದು ವರ್ಷ ಕಮಿಟಿ ಮಾಡಿದ ಮೇಲೆ ಬಿಟ್ಟು ಬರುತ್ತಾರೆ. ಆದುದರಿಂದ ಶೀಘ್ರದಲ್ಲೇ ಎಲೆಕ್ಷನ್ ಮಾಡಬೇಕೆಂದು ಈ ಬಿಲ್ಲನ್ನು ತಂದಿರುವುದರಿಂದ ಮಾನ್ಯ ಸದಸ್ಯರು ಇದನ್ನು ಒಪ್ಪಿಕೊಳ್ಳಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಈ ಅಮೆಂಜ್‌ಮೆಂಟ್ (6) ಮತ್ತು ಅಮೆಂಡ್‌ಮೆಂಟ್ (10) ಇದರ ಕ್ಲಾರಿಫಿಕೇಷನ್ ಕೊಟ್ಟ ನಂತರ ತಮ್ಮ ಅಭಿಪ್ರಾಯ ನೋಡಿಕೊಂಡು ಈ ಸಭೆಯ ಅಭಿಪ್ರಾಯಕೊಡಲು ಸಾಧ್ಯವಾಗುತ್ತದೆ. ಅಮೆಂಡ್‌ಮೆಂಟ್ 6ರಲ್ಲಿ ಏನು ಇದೆಯೋ ಅಮೆಂಡ್‌ಮೆಂಟ್ 10ರಲ್ಲೂ ಅದೇ ಇದೆ. ಆದುದರಿಂದ ಅಮೆಂಡ್‌ಮೆಂಟ್ 10 ಅದೇಸಾಕಾಗಿತ್ತು. ಅಮೆಂಡ್‌ಮೆಂಟ್ 6 ಅನಾವಶ್ಯಕ. ಈ ಅಮೆಂಡ್‌ಮೆಂಟ್ 10 ಹೈಕೋರ್ಟಿನವರು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಅದನ್ನು ನೋಡಬೇಕು.

ಶ್ರೀ ಪಿ. ಎಂ. ನಾಡಗೌಡ,—Marulasiddaiah and Others VS State of Mysore. ಈ ಜಡ್ಜ್‌ಮೆಂಟ್ ನೋಡಿದರೆ ಈ ಅಮೆಂಡ್‌ಮೆಂಟ್ ತರುವುದು ಈ ಒಂದು ಸೆಕ್ಷನ್ ಸಾಕಾಗುವುದಿಲ್ಲ. ಅದ್ದರಿಂದ ಎರಡು ಸೆಕ್ಷನ್‌ಗಳಿಗೂ ಅಮೆಂಡ್‌ಮೆಂಟ್ ತಂದಿದ್ದೇವೆ.

ಶ್ರೀ ಎಂ. ನಾಗಪ್ಪ.—ಸನ್ಮಾನ್ಯ ಉಪಾಧ್ಯಕ್ಷರೇ, ಈಗ ಅಭಿವೃದ್ಧಿಯ ಖಾತೆ ಮಂತ್ರಿಗಳು ತಂದಿರತಕ್ಕ ಈ ಬಿಲ್ಲನ್ನು ಕೂಲಂಕುಷವಾಗಿ ಯೋಚಿಸಿ ನೋಡಬೇಕಾಗಿದೆ. ಇದರಲ್ಲಿ ಸತ್ಯಾಂಶಗಳು ಎಷ್ಟಿದೆ? ಇದನ್ನು ಒಪ್ಪಬೇಕೇ, ಒಪ್ಪಕೂಡದೇ ಎನ್ನುವುದನ್ನೂ ಯೋಚಿಸಬೇಕಾಗಿದೆ. ಸ್ವಾಮಿ, ಮೈಸೂರು ರಾಜ್ಯದ ವ್ಯವಸಾಯೋತ್ಪನ್ನ ಪಾರಾಟವನ್ನು (ಕ್ರಮಗೊಳಿಸುವುದಕ್ಕೆ ಸಂಬಂಧಿಸಿದ) (ತಿದ್ದುಪಡಿಯ) ವಿಧೇಯ, 1969 ಈ ಬಿಲ್ಲನ್ನು ನಮ್ಮ ಮುಂದೆ ಇಡಲಾಗಿದೆ. ಈ ಬಿಲ್ಲಿನಲ್ಲಿರುವ ಕಲಂಗಳನ್ನು ನೋಡುವುದಕ್ಕೆ ಮುಂಚಿತವಾಗಿ ನಮ್ಮ ರಾಜ್ಯಪಾಲರು ಮಾಡಿದ ಆರ್ಡಿನನ್ಸನ್ನು ಮೊದಲು ವಿಚಾರ ಮಾಡಬೇಕಾಗುತ್ತದೆ. ಅನಂತರ ಈ ಮಸೂದೆಯ ಕೆಲವು ಕಲಂಗಳ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದು ಮಾಡಿದ್ದೇನೆ.

ಮೊಟ್ಟಮೊದಲನೆಯದಾಗಿ ಮಾನ್ಯ ಮಂತ್ರಿಗಳು ಹೇಳಿದರು ಇದು ರೈತರ ಹಿತಸಾಧನೆಗೆಂದು ಮಾಡಿದಂಥ ಕಾಯಿದೆ ಎಂದು. ಅವರ ಈ ಅಭಿಪ್ರಾಯ ಸರಿಯಲ್ಲ. ನಾನಾದರೂ ಹೇಳುತ್ತೇನೆ, ಈ ರೆಗ್ಯುಲೇಷನ್ಸ್ ಏನು ಇದೆಯೋ ಅದು ರೈತರ ಹಿತಸಾಧನೆಗೆ ಎಂದು ಕಾಯಿದೆ ಮಾಡಿದ್ದೀರಾ! ಅಥವಾ ವರ್ತಕರಿಗೆ ಲಾಭವಾಗಬೇಕು ಎನ್ನುವ ಉದ್ದೇಶದಿಂದ ಈ ಕಾಯಿದೆ ಮಾಡಿದ್ದೀರಾ? ಇದು 2—3 ಅಂಶಗಳಿಂದ ಕೂಡಿದೆ ಎಂದು ನಾನು ಹೇಳುತ್ತೇನೆ. ಈ ಮಾನ್ಯ ಸಭೆಯಲ್ಲಿ ಕಾಯಿದೆ ಆದದ್ದು 1966ನೇ ಇಸವಿಯಲ್ಲಿ ಜಾರಿಗೆ ಕೊಟ್ಟದ್ದು 1968ನೇ ಇಸವಿಯಲ್ಲಿ. ಇದನ್ನು ಜಾರಿಗೆ ಕೊಡಲು 2 ವರ್ಷ ತಡ ಮಾಡಿದ್ದುದರಿಂದ ಕಾರಣವನ್ನು ಸ್ಪಷ್ಟಪಡಿಸಬೇಕು. ನನ್ನ ಎರಡೂವರೆ ವರ್ಷದ ಅನುಭವ ಹೇಳುವುದಾದರೆ ಸರ್ಕಾರದಲ್ಲಿ ಮಾಡುವಂಥ ಕಾಯಿದೆಗಳು ಹೈಕೋರ್ಟಿಗೆ ಹೋಗುತ್ತದೆ. ಕಾಯಿದೆ ರದ್ದುಗೊಳಿಸಿದ ಮೇಲೆ ಅದನ್ನು ತಿದ್ದುಪಡಿ ಮಾಡಿ ಈ ಸಭೆಗೆ ಬರತಕ್ಕದ್ದು ಎಂದರೆ ಸರ್ಕಾರದವರು ಅದರಲ್ಲಿರತಕ್ಕಂಥ, ನಿಯಮಗಳನ್ನು ಸರಿಯಾಗಿ ತಂದಿಲ್ಲ ಅಥವಾ ಆ ವಿಧೇಯಕ ಜನಗಳಿಗೆ ಉಪಯೋಗಕ್ಕೆ ಬರದಂತೆ ಮಾಡಿದ್ದಾರೆ ಎಂದು ಹೇಳುತ್ತೇನೆ. ಏತಕ್ಕೆಂದರೆ ಈ ಸಂಬಂಧವಾಗಿ ಹಿಂದೆ ಎಷ್ಟು ಅರ್ಜಿಗಳು ಬಂದುವು, ಏತಕ್ಕೆ ಬಂದುವು ಎನ್ನುವುದನ್ನು ಗಮನಿಸಬೇಕು. ಆದ್ದರಿಂದ ರೈತರ ಹಿತಸಾಧನೆಗೆ ಎಂದು ಹೇಳಿ ಈ ಕಾಯಿದೆ ಪಾಸು ಮಾಡಿದರೆ ಸರಿಯಲ್ಲ ಎಂದು ನನ್ನ ಅಭಿಪ್ರಾಯ. ಮಾರಳುಸಿದ್ದಯ್ಯ ಅಂಡ್ ಅದರ್ಸ್ ವರ್ಸಸ್ ಸ್ಟೇಟ್ ಆಫ್ ಮೈಸೂರು ಈ ಜಡ್ಜ್‌ಮೆಂಟ್ ಆರ್ಡರನಲ್ಲಿ ಏನು ತಿಳಿಸಿದ್ದಾರೆ? ನೀವು ಏನು ಅಭಿಪ್ರಾಯ ಇಟ್ಟುಕೊಂಡಿದ್ದೀರಿ ತಿಳಿಸಿ. ವಿರೋಧಪಕ್ಷದಲ್ಲಿರುವಂಥವರೂ ಕೂಡ ರೈತರ ಹಿತಸಾಧನೆಗಳಿಗೆ ಇದ್ದಾರೆ ಎಂದು ಅರಿತ ಕೊಳ್ಳಬೇಕು. ನೀವು ನಿಷ್ಪಕ್ಷಪಾತವಾಗಿ ರೈತರ ಹಿತಸಾಧನೆಗಳನ್ನು ಮಾಡಬೇಕು ಎನ್ನುವ ಅಭಿಪ್ರಾಯ ಹೊಂದಿದ್ದರೆ, ರೈತರ ಹಿತಾಸಕ್ತಿ ಆಗುವ ಕಾಯಿದೆ ಆಗಿದ್ದರೆ ಅದನ್ನು ಸ್ವಾಗತಿಸಬಹುದು. ಬಹಳ ವರ್ಷದಿಂದಲೂ ಕಮಿಟಿಗಳಲ್ಲಿ ಅದೇ ಸದಸ್ಯರು, ಅದೇ ಅಧ್ಯಕ್ಷರು ಇದ್ದಾರೆ. 1966ನೇ ಇಸವಿಯಲ್ಲಿ ಮಾಡಿದಂಥ ಕಾಯಿದೆಯನ್ನು ಆಗಲೇ ಜಾರಿಗೆ ತಂದಿದ್ದರೆ ಈ ಪರಿಸ್ಥಿತಿ ಇರುತ್ತಿತ್ತೇ? ಇದರಿಂದ ತಾವು ಅವರಿಗೆ ರಕ್ಷಣೆ ಕೊಟ್ಟಿದ್ದೀರಿ ಎನ್ನುವುದು ಗೊತ್ತಾಗುತ್ತದೆ. ತಾವು ಒಂದು ಮಾರ್ಕೆಟ್‌ಯಾರ್ಡನ್ನು ಗೊತ್ತು ಮಾಡಿದಿರಿ. ಹೈಕೋರ್ಟಿನವರು ಅದು ಮಾರ್ಕೆಟ್‌ಯಾರ್ಡ್ ಆಗುವುದಿಲ್ಲ ಎಂದರು. ಆಮೇಲೆ ಮಾರ್ಕೆಟ್ ಏರಿಯಾ ಯಾವುದು ಎಂದು ಸ್ಪೆಸಿಫೈ ಮಾಡಿದಿರಿ. ಆ ಏರಿಯಾ ಮಾರ್ಕೆಟ್ ಏರಿಯಾಕ್ಕೆ ಬರುವುದಿಲ್ಲ ಎಂದು ಹೇಳಿದರು. ಈ ರೀತಿ ಹೈಕೋರ್ಟಿನವರು ಎರಡು ಸಾರಿ ಮಾಡಿದ್ದು ಸರ್ಕಾರದ ಗಮನದಲ್ಲಿದೆ. 1966ನೇ ಇಸವಿಯಿಂದ 1968ನೇ ಡಿಸೆಂಬರ್‌ವರೆಗೂ ಚೀಪ್ ಮಾರ್ಕೆಟಿಂಗ್ ಏರಿಯಾ ಯಾವುದು ಇರಬೇಕೆಂದು ಹುಣಸಿಳ್ಳಿದ ನೋಟಿಫಿಕೇಷನ್ ಮಾಡಿದಿರಿ. ಪುನರಪಿ 1968ನೇ ಡಿಸೆಂಬರ್‌ನಲ್ಲಿ ಇದಕ್ಕೆ ತಿದ್ದುಪಡಿ ಮಾಡಿದಿರಿ. ರೈತರ ಹಿತಸಾಧನೆಗೆಂದು ಹೇಳಿ ಇದುವರೆಗೂ ಮಾರ್ಕೆಟಿಂಗ್ ಫೀಸ್ ಕಲೆಕ್ಟ್ ಮಾಡಿದಿರಿ. ಹೀಗೆ 1966ರಿಂದ 1969ರವರೆಗೂ ಕಲೆಕ್ಟ್ ಮಾಡಿದಂಥ ಫೀಸ್ ಆಗಲಿ ಕಮಿಷನ್ ಆಗಲಿ ಅದು ಇಲ್‌ಲೀಗಲ್, ಕಾಯಿದೆ ಬದ್ಧವಾಗಿಲ್ಲ, ಈ ಮಾತನ್ನು ತಾವು ಒಪ್ಪಿಕೊಳ್ಳು

(ಶ್ರೀ ಎಂ. ನಾಗಪ್ಪ)

ಜೇಕು. ಇಂತಹ ಒಂದು ಪರಿಸ್ಥಿತಿಯನ್ನು ಇದುವರೆಗೂ ನಡೆಸಿಕೊಂಡು ಬಂದಿದ್ದೀರಿ. ಇದು ರೈತರ ಹಿತಸಾಧನೆ ಆಗತಕ್ಕಂಥ ಮಸೂದೆ ಎಂದು ಹೇಳುವುದಕ್ಕೆ, ಹೇಗೆ ಸಾಧ್ಯವಾಗುತ್ತದೆ? ರೈತರ ಹಿತಸಾಧನೆ ಆಗತಕ್ಕಂಥ ಮಸೂದೆ ಎಂದು ಹೇಳುವ ಹಾಗಿದ್ದರೆ 2 ರೂಪಾಯಿ ತೆಗೆದುಕೊಳ್ಳುವುದನ್ನು ವಿರೋಧ ಮಾಡಬೇಕಾಗಿತ್ತು. ಆದುದರಿಂದ ಈಗ ತಂದಿರುವ ತಿದ್ದುಪಡಿ ನೋಡಿದರೆ ಅನಂತೋಷವಾಗುತ್ತದೆ. ಇದರಲ್ಲಿ ಒಂದೇ ಒಂದು ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ದಯವಿಟ್ಟು ತಾವು ಒರಿಜನಲ್ ಆಕ್ಟ್ 130ರಲ್ಲಿ ಏನು ಇದೆ ಎನ್ನುವುದನ್ನು ನೋಡಿ. ಅದು ಈ ರೀತಿ ಇದೆ—

> 130: Administrator to exercise powers and perform duties of market committees not validly constituted or in the working of which a deadlock is created: (1) Notwithstanding anything contained in this Act, or the rules, if at any time it shall appear to the State Government, that on account of a decision or order of a competent court, a market committee has not been validly constituted under this Act or that it is disabled from functioning or that the number of seats required to be filled by election under sub-section (2) of section 39 is not filled, or on any other account, the Government may by notification, cause all or any other powers and duties of the market committee and its chairman to be exercised and performed by such officer in such manner and for such period and subject to such conditions as it may, by notification, direct.
>
> (2) All the powers and the duties of the market committee exercised and performed *bona fide* till the date of the notification referred to in sub-section (1), by the persons who constituted such market committee shall be deemed to have been validly exercised and performed by the said persons; and no acts done by the said persons shall be deemed to be invalid or called in question on the ground merely that they were not member of a validly constituted market committee."

ಸ್ವಾಮಿ ತಾವು 130ನೇ ಸೆಕ್ಷನ್ ಅನ್ನು ಅವಲೋಕಿಸಿದರೆ ಮತ್ತು ರಾಜ್ಯಪಾಲರು ಹೊರಡಿಸಿರುವ ಆರ್ಡಿನೆನ್ಸ್‌ನಲ್ಲಿನ ಕ್ಲಾಜ್ 11 ಅಂದರೆ 154 ಎ ಸೆಕ್ಷನ್ ಅನ್ನು ಓದಿದರೆ ತಮಗೇ ಇದರಲ್ಲಿರುವ ವ್ಯತ್ಯಾಸ ಗೊತ್ತಾಗುತ್ತದೆ. ಹಿಂದೆ ಮಾಡಿದಂಥ ಕಮಿಟಿಗಳನ್ನು 19—7—69ಕ್ಕೆ ಮುಕ್ತಾಯ ಗೊಳಿಸುತ್ತೇವೆ; ಅದಾದನಂತರ ಇಂಥಿಂಥ ಆಡಳಿತಾಧಿಕಾರಿಗಳನ್ನು ನೇಮಕ ಮಾಡುತ್ತೇವೆ ಎನ್ನುವ ಮಾತನ್ನು ಆರ್ಡಿನೆನ್ಸ್ ಕ್ಲಾಜ್ 11ರಲ್ಲಿ ಹೇಳಿದ್ದಾರೆ. ಮೂಲ ಕಾಯಿದೆಯಲ್ಲಿರುವ 130ನೇ ಸೆಕ್ಷನ್ನಿಗೂ, ಆಮೇಲೆ ರಾಜ್ಯಪಾಲರು ಹೊರಡಿಸಿದಂಥ ಆರ್ಡಿನೆನ್ಸ್‌ನಲ್ಲಿರುವ 154ಎ ಎರಡನ್ನೂ ನೋಡಿದರೆ Redundant clauses are being introduced in one Act. ಸೆಕ್ಷನ್ 130ರ ಪ್ರಕಾರ ಸರ್ಕಾರಕ್ಕೆ ಒಂದು ಅಧಿಕಾರವಿದೆ. ಕೋರ್ಟ್ ಆರ್ಡರ್ ಪ್ರಕಾರವಾಗಲೀ, ಅಥವಾ ಯಾವುದೇ ಕಾರಣದಿಂದಾಗಲೀ ಇರತಕ್ಕ ಮಾರ್ಕೆಟ್ ಕಮಿಟಿಗಳನ್ನು ಮಾರ್ಪಾಡು ಮಾಡಬೇಕಾದ ಪರಿಸ್ಥಿತಿ ಉದ್ಭವಿಸಿದರೆ ಅದಕ್ಕೆ 130ನೇ ಸೆಕ್ಷನ್ ಪ್ರಕಾರ ಬೇಕಾದಷ್ಟು ಕ್ರಮ ತೆಗೆದು ಕೊಳ್ಳಬಹುದಾಗಿದೆ.

4-00 P.M.

Sri P. M. NADGOUDA.—Section 130 can be availed against particular committees. The provisions made under the Ordinance of the amending Bill is against all the committees. We cannot avail of the original provision in respect of all committees.

ಶ್ರೀ ಎಂ. ನಾಗಪ್ಪ.—130ನೇ ಸೆಕ್ಷನ್ ಒಂಬೇ ಕಮಿಟಿಗೆ ಮಾತ್ರ ಅನ್ವಯಿಸುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. The Market Committee has not been validly constituted under this Act. ಕೋರ್ಟಿನ ಒಂದು ನಿರ್ದೇಶನದ ಪ್ರಕಾರ ಎಂದು ಇದೆಯೇ ಹೊರತು ಒಂದೇ ಕಮಿಟಿ ಎಂದು ಇಲ್ಲ. ಎಲ್ಲ ಕಮಿಟಿಗಳೂ ಇಲ್ಲೀಗಲ್ ಎಂದು ಹೇಳತಕ್ಕ ಅಧಿಕಾರವನ್ನು ಕೊಟ್ಟಿದೆ. ನಾನು ಹೇಳತಕ್ಕ ಮಾತು ಏನೆಂದರೆ, ನನಗೆ ತಿಳಿದ ಮಟ್ಟಿಗೆ ನಮ್ಮ ರಾಜ್ಯದ ಹೈಕೋರ್ಟ್ ಸದ್ಯದಲ್ಲಿರುವ ಕಾಯುದೆಯ ಪ್ರಕಾರ ಇರತಕ್ಕ ಸಮಿತಿಗಳು ಇಲ್ಲೀಗಲ್ ಎಂದು ಹೇಳಲಿಲ್ಲ. ಹೈಕೋರ್ಟಿನ ತೀರ್ಪಿನಲ್ಲಿರುವ ಅದಕ್ಕೆ ಸಂಬಂಧಪಟ್ಟ ಪ್ಯಾರಾ ಓದಿ ತೋರಿಸಿರಿ. The present committees are validly constituted. They will remain and continue to work until a fresh committee is constituted under section 10 of the Act.

ಶ್ರೀ ಪಿ. ಎಂ. ನಾಡಗೌಡ.—ಸೆಕ್ಷನ್ 102ರ ಪ್ರಕಾರ ಸರ್ಕಾರ ಎಲ್ಲ ಕಮಿಟಿಗಳಿಗೆ ನಾಮಕರಣ ಮಾಡುವ ಅಧಿಕಾರವಿದೆ.

> "On no account they can be continued under the new Act and the Government should take steps to nominate them. It is a categorical direction from the Court. In defference to the decision of the High Court, the Government is forced to take it.

ಎಂದು ಹೇಳಿದ್ದಾರೆ.

ಶ್ರೀ ಎಂ. ನಾಗಪ್ಪ.—ಸನ್ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಏನು ಹೇಳುತ್ತಿದ್ದೆ ಅದನ್ನು ಮಾನ್ಯ ಮಂತ್ರಿಗಳು ಸಮರ್ಥಿಸಿದರು ಎಂದು ನಾನು ಭಾವಿಸಿದ್ದೇನೆ. ನಾನು ಹೇಳತಕ್ಕ ಮಾತಿದಾದರೂ ಏನೆಂದರೆ, ಹೈಕೋರ್ಟ್ ಕಾ ಟಗಾರಿಕರ್ ಆಗಿ, ಸ್ಪೆಸಿಫಿಕ್ ಆಗಿ ಚುನಾವಣೆಗಳನ್ನು ಮಾಡುವುದಕ್ಕೆ ಮುಂಚಿತವಾಗಿ ನಡುಗಾಲದ ಕಮಿಟಿಯನ್ನು ನೇಮಕ ಮಾಡಬೇಕು ಎನ್ನುವ ಆದೇಶವನ್ನು ಕೊಟ್ಟಿದೆ. ಸರ್ಕಾರದಲ್ಲಿ ಪಾಸ್ತವಿಕವಾಗಿ ಪ್ರಜಾಸತ್ತೆಯ ಬೆಳಕನ್ನು ರೈತರಲ್ಲಿ ಬೀರಬೇಕಾಗಿತ್ತು, ಎನ್ನುವ ಉದ್ದೇಶವಿದ್ದರೆ ಇಂಥ ತಿದ್ದುಪಡಿಯನ್ನು ಮಾಡಬೇಕಾದ ಪ್ರಸಂಗ ಏರಿಲಲ್ಲ. ಈಗಾಗಲೇ ಮಾನ್ಯ ಕೆ. ಎಚ್. ಪಾಟೀಲರು ಹೇಳಿದಂತೆ ಸೆಕ್ಷನ್ 10ನ್ನು ರಿಪೀಲ್ ಮಾಡಿದ್ದರೆ, ಅದಕ್ಕೆ ಬೇಕಾದಂಥ ತಿದ್ದುಪಡಿಯನ್ನು ಮಾಡಿದ್ದರೆ ಮಾತ್ರ ಚೆನ್ನಾಗಿತ್ತು. 130ನೇ ಸೆಕ್ಷನ್ ಪ್ರಕಾರ, ಯಾವುದೋ ಒಂದು ಕಮಿಟಿ ಇದ್ದರೆ-ಮಾತ್ರ ಆ ಕಮಿಟಿಯನ್ನು ಮುಂದುವರಿಸಿ, ಸರ್ಕಾರ ಹಾಕಬೇಕಾದ ಆಡಳಿತಾಧಿಕಾರಿಯನ್ನು ನೇಮಕ ಮಾಡಿಕೊಂಡು ಆಡಳಿತವನ್ನು ನಡೆಸಬಹುದಾದ ಪರಿಸ್ಥಿತಿ ಇತ್ತು. ಆದರೆ ಟ್ರಾನ್ಸಿಟರಿ ಪ್ರಾವಿಜನ್ಸ್ ಎಂದು ಏನು ಹೊಸ ಸೆಕ್ಷನ್ ಸೇರಿಸುವುದಕ್ಕಾಗಿ ಸಭೆಯ ಮುಂದೆ ತಂದಿದ್ದಾರೆ ಅದು ಸರಿಯಾದುದಲ್ಲ, ಪ್ರಜಾಸತ್ತೆಗೆ ಸಂಪೂರ್ಣವಾಗಿ ವಿರೋಧಾಭಾಸವನ್ನುಂಟುಮಾಡತಕ್ಕ ಕ್ಲಾಜ್ ಎಂದು ನಾನಾದರೂ ಭಾವಿಸಿದ್ದೇನೆ. ಆರ್ಡಿನೆನ್ಸ್ ಕ್ಲಾಜ್ 154, (ಸಿ) (1) ಎಕ್ಸ್‌ಪ್ಲನೇಷನ್ ನೋಡಿದರೆ ಅದರಲ್ಲಿ ಸ್ಪಷ್ಟವಿದೆ. ಅವನ್ನು ಸಭೆಯ ಗಮನಕ್ಕೆ ಮತ್ತು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅದರಲ್ಲಿ ಸ್ವಲ್ಪ ಮಾರ್ಪಾಡು ಮಾಡಿ ಈಗ ತಂದಂಥ ವಿಧೇಯಕದಲ್ಲಿ ಬೇರೆ ರೀತಿಯಲ್ಲಿ ರೂಪಿಸಿ ಯಾರಾದರೂ ಅಧಿಕಾರಿ ಆಗಬಹುದು ಎಂದು ಹೇಳಿದ್ದಾರೆ. ಎಷ್ಟರಮಟ್ಟಿಗೆ ಅದು ಸಮಂಜಸವಾಗಿದೆ ಎನ್ನುವ ಮಾತನ್ನು ನಾನು ವಿಧೇಯಕದ ಮೇಲೆ ಮಾತನಾಡುವಾಗ ಹೇಳುತ್ತೇನೆ. ತಿದ್ದುಪಡಿ ವಿಧೇಯಕದಲ್ಲಿ ಹೇಳಿರುವುದನ್ನು ನೋಡಿದರೆ ಸಣ್ಣ ಮಾರ್ಕೆಟ್ ಕಮಿಟಿಗಳಿಗೆ ದೊಡ್ಡ ಅಧಿಕಾರಿ, ದೊಡ್ಡ ಮಾರ್ಕೆಟ್ ಕಮಿಟಿಗಳಿಗೆ ಸಣ್ಣ ಅಧಿಕಾರಿ, ಈ ರೀತಿ ಹಾಕಬಹುದು ಎಂದಾಗುತ್ತದೆ. ಸಬ್ ಕ್ಲಾಜ್ (ಸಿ) ನಲ್ಲಿ 1, 2, 3 ಎಂದು ಎಕ್ಸ್‌ಪ್ಲನೇಷನ್ ಕೊಟ್ಟಿದ್ದಾರೆ. ಜಿಲ್ಲಾ ಸ್ಥಳದಲ್ಲಿರುವ ಮಾರ್ಕೆಟಿಂಗ್ ಕಮಿಯಲ್ಲಿ ಜಿಲ್ಲಾಧಿಕಾರಿಗಳು ಅದಕ್ಕೆ ಅಧ್ಯಕ್ಷರು ಅಥವಾ ಅಡ್ಮಿನಿಸ್ಟ್ರೇಟರ್ ಆಗುತ್ತಾರೆಂದು ಹೇಳಿದ್ದಾರೆ. ರೆವೆನ್ಯೂ ಸಬ್ ಡಿವಿಜನ್ನಲ್ಲಿ ಹೆಡ್‌ಕ್ವಾರ್ಟರ್ಸ್‌ನಲ್ಲಿ ಅಸಿಸ್ಟೆಂಟ್ ಕಮೀಷನರಿದ್ದರೆ ಮಾರ್ಕೆಟ್‌ಯಾರ್ಡಿಗೆ ಅವರೇ ಅಧಿಕಾರಿಯಾಗುತ್ತಾರೆಂದು ಆರ್ಡಿನೆನ್ಸ್‌ನಲ್ಲಿ ಇದೆ. ತಾಲ್ಲೂಕಿನಲ್ಲಿ ತಾಸಿಲ್ದಾರರು ಅಧಿಕಾರಿಯಾಗುತ್ತಾರೆ ಎಂದು ಇದೆ. 11ನೆಯ ಕ್ಲಾಜಿನ 1,2 ಮತ್ತು 3ನೆಯ ಎಕ್ಸ್‌ಪ್ಲನೇಷನ್‌ಗಳಲ್ಲಿ ಇದನ್ನು ಸೂಚಿಸಲಾಗಿದೆ. ಇದರಿಂದ ಬಹಳ ಕಷ್ಟವಾಗುತ್ತದೆ. ಉದಾಹರಣೆಗೆ ನಮ್ಮ ರಾಯಚೂರು ಜಿಲ್ಲೆಯಲ್ಲಿ ರಾಯಚೂರು ಟೌನಿನಲ್ಲಿ ಡಿ ಸಿ ಅಧಿಕಾರಿಯಾಗುವನು. ಆದರೆ ಕೊಪ್ಪಳ್ ಮತ್ತು ಗಂಗಾವತಿ ವಿಚಾರ ನೋಡಿ. ಕೊಪ್ಪಳ್‌ನಲ್ಲಿ ಮಾರ್ಕೆಟ್ ಕಮಿಟಿ ಬೆಳವಣಿಗೆ ಎಷ್ಟು ಮಟ್ಟಿಗೆ ಆಗಿದೆಯೆಂಬುದನ್ನು

(ಶ್ರೀ ಎಂ. ನಾಗಪ್ಪ)

ನೋಡಿ. ಈ ಎರಡೂ ನೋಡಿದರೆ ಕೊಪ್ಪಳ್ ಸಣ್ಣದು, ಅದಕ್ಕೆ ಅಸಿಸ್ಟೆಂಟ್ ಕಮೀಷನರು ಆಡ್ಮಿನಿಸ್ಟ್ರೇಟರಾಗುವರು. ಆದರೆ ಗಂಗಾವತಿ ಮಾರ್ಕೆಟ್ ಕಮಿಟಿ ವಿಚಾರ ತೆಗೆದುಕೊಂಡರೆ ಅದು ರಾಯಚೂರಿನ ಮಾರ್ಕೆಟ್ ಕಮಿಟಿಯೊಡನೆ ಕಂಪೀಟ್ ಮಾಡುವ ಸ್ಥೇಜಿನಲ್ಲಿದೆ. ಅಂಥ ಶಕ್ತಿ ಇರುವ ಕಡೆಗೆ ನಿಮ್ಮ ಆರ್ಡಿನೆನ್ಸ್ ಪ್ರಕಾರ ತಾಸಿಲ್ದಾರರು ಅಧಿಕಾರಿಯಾಗುವರು. ಅದುದರಿಂದ ಯೋಚನೆ ಮಾಡಬೇಕು. ತಾಸಿಲ್ದಾರರು ಬೇಡ ಎಂದು ಹೊಸದಾಗಿ ತಿದ್ದುಪಡಿ ತಂದಿದ್ದಾರೆಂದು ನಾನು ಭಾವಿಸುತ್ತೇನೆ. ರೆವಿನ್ಯೂ ಡಿವಿಜನ್‌ನಲ್ಲಿ, ಸಬ್ ಡಿವಿಜನ್‌ನಲ್ಲಿ, ಅಸಿಸ್ಟೆಂಟ್ ಕಮೀಷನರ್ ಆಪಲೇಟ್ ಅಥಾರಿಟಿ ಎಂದು ಹೇಳುವರು. ಹಾಗೆ ಹೇಳಿ ಅಸಿಸ್ಟೆಂಟ್ ಕಮೀಷನರಿಗೆ ಸಣ್ಣ ಮಾರ್ಕೆಟ್ ಅಧಿಕಾರ ಕೊಡುತ್ತಾರೆ. ಈ ದೃಷ್ಟಿಯಿಂದ ನೋಡಿದರೆ ಬಹಳ ಅನಾಮಲಸ್ ಆಗುವುದು. ವಿಧೇಯಕದಲ್ಲಿ ತಿದ್ದುಪಡಿ ಮಾಡಿರುವುದಾಗಿ ಹೇಳುತ್ತಾರೆ. ವಿಧೇಯಕ ಬಂದಾಗ ಅದನ್ನು ನೋಡುತ್ತೇನೆ. ಆದರೆ ಇಷ್ಟಾದರೂ ಗಮನಿಸಿದ್ದೀರಿ, ಸಂತೋಷ.

ಎರಡನೆಯದಾಗಿ ಈ ಆರ್ಡಿನೆನ್ಸ್ ಹೊರಡಿಸಬೇಕಾದ ಪ್ರಮೇಯವೇನಿತ್ತು? ಇದು ಮುಖ್ಯವಾದ ವಿಷಯ. ಇದನ್ನು 18ನೇ ಜುಲೈ 1969 ರಲ್ಲಿ ಹೊರಡಿಸಲಾಗಿದೆ, ಇಲ್ಲಿ 14ನೇ ಆಗಸ್ಟ್ 1969 ರಲ್ಲಿ ಈ ಸಭೆ ಸೇರಿದೆ, ಸೇರಿ ಒಂದು ತಿಂಗಳು ಕೂಡ ಆಗಿಲ್ಲ. ಹಿಂದಿನ ಸಭೆಯನ್ನು ಅಸೆಂಬ್ಲಿ ಮತ್ತು ಕೌನ್ಸಿಲುಗಳನ್ನು 10ನೇ ಏಪ್ರಿಲ್ 1969 ರಲ್ಲಿ ಮುಂದೂಡಲಾಗಿದೆ. ನನಗೆ ಗೊತ್ತಿರುವ ಹಾಗೆ ಹೈಕೋರ್ಟ್ ಜಡ್ಜ್‌ಮೆಂಟ್ ಪಾರ್ಟ್ 19 ಕ್ಕೆ ಮುಂಚೆ ಫೆಬ್ರವರಿ 3 ಅಥವಾ 4ರಲ್ಲಿ ಆಗಿರಬೇಕು. ಅದಾದಮೇಲೆ ಸುಮಾರು 40 ದಿವಸಗಳ ಕಾಲ ಈ ಸಭೆ ನಡೆಯುತ್ತಿತ್ತು. ಆಗ ಈ ಸಭೆಯ ಮುಂದೆ ಇಂಥ ಮಸೂದೆಯನ್ನು ತರಲು ಏನು ಅನಾನುಕೂಲವಿತ್ತು ಎಂಬುದನ್ನು ಸ್ಪಷ್ಟಪಡಿಸಬೇಕು. ಅದಾದನಂತರ ರಾಷ್ಟ್ರಪತಿಯವರ ಅಜ್ಞೆಯಾದ 26 ದಿವಸಗಳಲ್ಲಿ ಈ ಸಭೆ ಮತ್ತೆ ಸೇರಿದೆ ಹಾಗಿರುವಾಗ 213 ನೆಯ ಆರ್ಟಿಕಲ್ ಪ್ರಕಾರ ಆರ್ಡಿನೆನ್ಸ್ ಹೊರಡಿಸಬೇಕಾದ ಅವಶ್ಯಕತೆಯೇನಿತ್ತು ಎಂದು ನಾನು ಪ್ರಶ್ನೆಮಾಡುತ್ತೇನೆ. ಈ ಸಭೆ ಸೇರುವುದಕ್ಕೆ ಮುಂಚೆ ಹೈಕೋರ್ಟ್ ಜಡ್ಜ್‌ಮೆಂಟ್ ಆಗಿತ್ತು, ಅನಂತರ ಸುಮ್ಮನಿದ್ದಿರಿ. ಮತ್ತೆ 14 ನೆಯ ತಾರೀಖು ಈ ಸಭೆ ಸೇರಿದೆ. ಆದರೆ ಸೂಕ್ತ ರೀತಿಯಲ್ಲಿ ಕ್ರಮ ತೆಗೆದು ಕೊಳ್ಳದೆ ತಾವು ರೈತರಿಗೆ ಅಹಿತವನ್ನುಂಟುಮಾಡಿದ್ದೀರಿ. ಅದನ್ನು ಗಮನಕ್ಕೆ ತರುತ್ತೇನೆ. ಹೈದರಾಬಾದು ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಆಗಿರುವ ಎರಡು ಹೈಕೋರ್ಟ್ ಜಡ್ಜ್‌ಮೆಂಟುಗಳನ್ನು ಗಮನಿಸಿ ಕಾನೂನನ್ನು ಮಾಡಿದ್ದಾರೆ. ಶ್ರೀ ಎ. ಆರ್. ಸೋಮನಾಥ ಐಯ್ಯರ್‌ರವರು ಮತ್ತು ಹೆಗ್ಗಡೆಯವರು ಮಾರ್ಕೆಟ್ ಯಾರ್ಡ್ ಅಂದರೇನು ಎಂಬುದನ್ನು ತಿಳಿಸಿದ್ದಾರೆ. 3ನೇ ಕ್ಲಾಸಿನಲ್ಲಿ ಸೆಕ್ಷನ್ 6 ಅಮೆಂಡ್ ಮಾಡುತ್ತಾ (2 ಎ) ಸೇರಿಸಿದ್ದಾರೆ, ಅದನ್ನು ನೋಡಬೇಕು.

Mr. Chairman [Sri B. P. Kadam] in the Chair

Original ಆಕ್ಟಿನಲ್ಲಿ ಎರಡನೆಯ ಕ್ಲಾಜನ್ನು ಓದಿದರೆ ಮಾರ್ಕೆಟ್ ಯಾರ್ಡ್ ಎಂದರೇನು ಎಂಬುದು ಗೊತ್ತಾಗುವುದು. ಆಗಲೇ ಹೇಳಿದಹಾಗೆ ಹೈದರಾಬಾದು ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಎರಡು ಜಡ್ಜ್‌ಮೆಂಟ್ ಹೈಕೋರ್ಟ್ ಕೊಟ್ಟಿದೆ. ಆದರೆ ಒಂದೇ ಸ್ಥಳದಲ್ಲಿ ಒಂದು ಗ್ರಾಮದ ಅಥವ ಪಟ್ಟಣದ ಪರಿಮಿತಿಯಲ್ಲಿರುವ ಒಂದು ಸ್ಥಳವನ್ನು ಮಾರ್ಕೆಟ್ ಎಂದು ಹೇಳಬಹುದೆಂದಿದೆ. ಒಂದು ಮಾರ್ಕೆಟ್ ಪರಿಮಿತಿಯಲ್ಲಿರದೆ ಎರಡು ಗ್ರಾಮಗಳ ನಡುವೆ ಅಥವ ಮೂರು ಗ್ರಾಮಗಳ ನಡುವೆ ಬರುವುದನ್ನೂ ಬೇಕಾದಾಗ ಮಾರ್ಕೆಟ್ ಸ್ಥಾಪಿಸಲು ಅವಕಾಶವಿರುವಂತೆ ತಿದ್ದುಪಡಿಮಾಡಲಾಗಿದೆ. ಇದರಲ್ಲಾಗುವ ಅನ್ಯಾಯವನ್ನು ಹೇಳುತ್ತೇನೆ. ಇದಕ್ಕೆ ರೆಟ್ರಾಸ್ಪೆಕ್ಟಿವ್ ಎಫೆಕ್ಟ್ ಇವೆ. ಏಕೆ ಹೀಗೆ ಮಾಡುವುದು ಎಂದು ಕೇಳುತ್ತೇನೆ. 25ನೇ ಫೆಬ್ರವರಿ 1969ರಲ್ಲಿ ಒಂದು ಸರ್ಕುಲರ್ ನೋಟಿಫಿಕೇಷನ್ ಹೊರಟಿರುವುದನ್ನು ಸ್ವಲ್ಪ ನೋಡಬೇಕು,

"Notification No. M. C. 39139 RM 1/68-6) dated 25th February 1969.

Schedule A

The locality locally known as "Main Bazaar" within the Town Municipal limits of Gangavathi bounded—

On the East by—Residential houses of Islampur, Durgammanahalla, Sri Mallikarjuna Matha, Sri Channamallikarjuna Rice Mill and Sri Gayatri Rice Mills, Bus Stand."

ಇದರಲ್ಲಿ ಇಸ್ಲಾಂಪುರ ಅನ್ನುವುದು ಸೇರಿಲ್ಲ. ಈ ದೃಷ್ಟಿಯಿಂದ ತಾವು ಈ ತಿದ್ದುಪಡಿಯನ್ನು ತರತಕ್ಕ ಉದ್ದೇಶವಾದರೂ ಏನಿದೆ ಎಂಬುದನ್ನು ನೋಡಿದರೆ 25ನೇ ಫೆಬ್ರುವರಿ 1969ಕ್ಕೆ ಚೀಫ್ ಮಾರ್ಕೆಟಿಂಗ್ ಆಫೀಸರು ಹೊರಡಿಸಿದಂತಹ ಒಂದು ನೋಟಿಫಿಕೇಷನ್‌ನ್ನು ರೆಗ್ಯುಲರೈಸ್ ಮಾಡಬೇಕೆಂಬ ಉದ್ದೇಶದಿಂದ ತಾವು ಇದನ್ನು ತಂದಿದ್ದೀರಿ. ಈ ತಿದ್ದುಪಡಿ ಪ್ರಕಾರ ನಾನು ಅಧ್ಯಕ್ಷರ ಗಮನಕ್ಕೆ ತರುವುದೇನೆಂದರೆ ಇದಕ್ಕಿಂತ ಮುಂಚೆ ನಾನು ಈ ಸಭೆಯಲ್ಲಿ ಈ ಬಿಲ್ಲಿನ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಹೇಳಿದ್ದೆ, ಏನೆಂದರೆ ರೆಸ್ಟ್ರಿಕ್ಷನ್ ಆಫ್ ಟ್ರೇಡ್ ಅಂದರೆ ಏನು ಎಂಬುದನ್ನು ಗಮನಿಸಬೇಕು, ಆ ಮಾತು ಈ ಸಭೆಯಲ್ಲಿ ಬಂದಿತು. ಈಗ ಅದು ಯಾವ ಆರ್ಟಿಕಲ್ ಪ್ರಕಾರ ಅಪ್ಲೈ ಆಗುತ್ತದೆ ಎಂಬುದನ್ನು ಹೇಳುತ್ತೇನೆ. ಕ್ಲಾಸ್ 2 (ಎ) ನೋಡಿದರೆ : ಅದು ಈ ರೀತಿ ಇದೆ.

Section 2A is the main section which is going to create a certain market for certain villages or for certain towns.

ತಾವು ಮಾಡುವುದು; ಒಂದು ಏರಿಯಾದಲ್ಲಿರತಕ್ಕ ಒಂದು ಗ್ರಾಮವೇ ಅಲ್ಲ, ಆ ಏರಿಯಾದಲ್ಲಿ ಬರತಕ್ಕ ಒಂದು ಅಥವಾ ಹೆಚ್ಚಿನ ಗ್ರಾಮದಲ್ಲಿ ಬರತಕ್ಕ ಮಾರ್ಕೆಟ್ ಕಮಿಟಿಯನ್ನು ಖಾಯಂ ಮಾಡಬೇಕೆನ್ನತಕ್ಕ ಒಂದು ನಿಯಮವನ್ನು ಇದರಲ್ಲಿ ಸೇರಿಸುತ್ತಾ ಇದ್ದೀರಿ. ತಮ್ಮ ಕ್ಲಾಸ್ 4 ಮತ್ತು 6ರ ಪ್ರಕಾರ ನೋಟಿಫಿಕೇಷನ್ ಮಾಡುವುದಕ್ಕೆ ಮುಂಚೆ ಅಲ್ಲಿರತಕ್ಕ ರೈತರು, ಅಲ್ಲಿರತಕ್ಕ ವ್ಯಾಪಾರಸ್ಥರು ಮತ್ತು ಇತರ ಜನರೂ ಸಹಿತ ಆದಕ್ಕೆ ವಿರೋಧ ಮಾಡತಕ್ಕ ಹಕ್ಕು ಉಂಟು, ಅಂತಹ ಒಂದು ಹಕ್ಕನ್ನು ಇಲ್ಲ ಮೊಟಕು ಮಾಡಿದ್ದೀರಿ. ನಾನು ಒಂದು ಉದಾಹರಣೆ ಕೊಡ್ತೇನೆ, ಅದರಂತೆ ಮಾರ್ಕೆಟ್ ಕಮಿಟಿಯಲ್ಲಿ ಅನೇಕ ಗ್ರಾಮಗಳು ಮತ್ತು ಆ ಗ್ರಾಮದ ಅನೇಕ ಭಾಗಗಳನ್ನು ಅದರಲ್ಲಿ ಸೇರಿಸಿದ್ದೀರಿ. ರೆಸ್ಟ್ರಿಕ್ಷನ್ ಆಫ್ ಟ್ರೇಡ್ ಅಂದರೇನು ? ರೈಸೆನ್ಸ್ ಕೊಡುವುದು, ಪರ್ಮಿಟ್ ಕೊಡುವುದು. ರೈತರು ಮತ್ತು ಅಲ್ಲಿರತಕ್ಕ ದುಕಾನು ನಡೆಸತಕ್ಕವರು ಆ ಗ್ರಾಮಗಳಲ್ಲಿ ಅಥವಾ ಹಳ್ಳಿಗಳಲ್ಲಿ ಅಥವಾ ಪಟ್ಟಣಗಳಲ್ಲಿ ಅಲ್ಲೇ ವ್ಯಾಪಾರ ಮಾಡಬೇಕು, ಬೇರೆ ಕಡೆ ಮಾಡಕೂಡದು ಎಂಬ ಒಂದು ಅಧಿಕಾರವನ್ನು ಆಜ್ಞೆಯನ್ನು ಈ ಆರ್ಡಿನೆನ್ಸ್ ಪ್ರಕಾರ ಹೊರಡಿಸಿದ್ದೀರಿ. ಅಂದ ಮೇಲೆ 2 (ಎ) ಹೊರಡಿಸಬೇಕಾದರೆ. It is the fundamental right of the Government to form a market committee in a certain market area. 2 (ಎ) ಪ್ರಕಾರ ಈ ಮಾರ್ಕೆಟಿಂಗ್ ಏರಿಯಾ ನಿರ್ಣಯ ಮಾಡುವುದು. ಒಂದು ಅಥವಾ ಎರಡು ಗ್ರಾಮಗಳನ್ನು ಸೇರಿಸಿ ಎಂದರೆ ಆ ಗ್ರಾಮಗಳಲ್ಲಿರತಕ್ಕ ಜನ ಅಥವಾ ಅಲ್ಲಿರತಕ್ಕ ವ್ಯಾಪಾರಸ್ಥರು, ರೈತರು ತಮ್ಮ ಮಾಲುಗಳನ್ನು ಬೇರೆಯವರ ಹತ್ತಿರ ಮಾರಾಟ ಮಾಡಕೂಡದು. ಡಿಕ್ಲೇರ್ ಮಾಡಿದಂಥಹ ಏರಿಯಾದಲ್ಲಿ ಮಾತ್ರ ಅವರು ತಮ್ಮ ಮಾಲುಗಳನ್ನು ಮಾರಾಟ ಮಾಡಬೇಕು ಎಂದು ಹೇಳಿ ಒಂದು ಶಾಸನವನ್ನು ತಂದಿದ್ದೀರಿ. ತಮ್ಮ ಮೂಲಕ ಮಾನ್ಯ ಸಭೆಯ ಗಮನವನ್ನು ಸೆಳೆಯಬಯಸುತ್ತೇನೆ. ತಾವು ದಯವಿಟ್ಟು ಆರ್ಟಿಕಲ್ 304ನ್ನು ನೋಡಬೇಕು.

Article 304(b) says :

"impose such reasonable restrictions on the freedom of trade, commerce or intercourse with or within that State as may be required in the public interest.

Provided that no Bill or amendment for the purposes of clause (b) shall be introduced or moved in the Legislature of a State without the previous sanction of the President."

(ಶ್ರೀ ಎಂ. ನಾಗಪ್ಪ)

As per clause 2, a condition is there, namely, if any merchant is carryine on business within a particular area wherein a market Committee is deemed to be formed under section 2A, it will be deemed to be a committee constituted under this amendment. Therefore, definitely it puts a restriction on trade. ನಾನು ಖಚಿತವಾಗಿ ಈ ನಥೆಯ ಗಮನಕ್ಕೂ ಮಾನ್ಯ ಅಧ್ಯಕ್ಷರ ಗಮನಕ್ಕೂ ಮತ್ತು ತಮ್ಮ ಪತಿಯಿಂದ ಮಾನ್ಯ ಮಂತ್ರಿಗಳ ಗಮನಕ್ಕೂ ಈ ವಿಷಯವನ್ನು ಸ್ಪಷ್ಟವಾಗಿ ತರುತ್ತೇನೆ. ದಯವಿಟ್ಟು ತಾವು ಇದನ್ನು ಪ್ರೆಸ್ಟೀಜ್ ಅಂತ ತಿಳಿದುಕೊಳ್ಳಕೂಡದು, ಏಕೆಂದರೆ ನಾಳೆ ಏನಾದರೂ ಇದರಿಂದ ನಷ್ಟವಾಯಿತು ಎಂದರೆ ನಿಮಗೆ ಯಾರಿಗೂ ಆಗುವುದಿಲ್ಲ, ಸರ್ಕಾರಕ್ಕೂ ಅಲ್ಲ, ರಾ ಡಿಪಾರ್ಟ್‌ಮೆಂಟಿನಲ್ಲಿ ಕುಳಿತು ಅಡ್ವೈಸ್ ಮಾಡುವವರಿಗೂ ಅಲ್ಲ ಮತ್ತು ಸರ್ಕಾರದಲ್ಲಿರತಕ್ಕ ನಿಮಗೆ ಅಡ್ವೈಸ್ ಮಾಡತಕ್ಕ ಸೆಕ್ರೆಟರಿಗಳಿಗೂ ಅಲ್ಲ.

ಶ್ರೀ ಪಿ. ಎಂ. ನಾಡಗೌಡ.—ಸೆಕ್ಷನ್ 2(ಎ) ತಂದಿರುವುದು ರೀಪಿರ್ಡ್ ಎನ್‌ಆಕ್ಟ್‌ಮೆಂಟ್ ನಲುವಾಗಿ. ಅಲ್ಲಿ ಏನು ಒಂದು ಸೆಕ್ಷನ್ ಕೊಟ್ಟಿದ್ದಾರೆ ಅದು ಫೈನಲ್ ಅಲ್ಲ ಅಂತ ಸೆಕ್ಷನ್ 6ರ ಕೆಳಗೆ ಚೀಫ್ ಮಾರ್ಕೆಟಿಂಗ್ ಆಫೀಸರು ಇದ್ದಾರೆ, ನೋಟೀನು ಕೊಟ್ಟು ಎಲ್ಲಾ ಮಾಡಿ ಮಾರ್ಕೆಟಿಂಗ್ ಕಮಿಟಿ ಮಾಡುತ್ತಾರೆ.

ಶ್ರೀ ಎಂ. ನಾಗಪ್ಪ.—ಸನ್‌ಮಾನ್ಯ ಅಧ್ಯಕ್ಷರೇ, ನಾನಾದರೂ ತಿಳಿದುಕೊಂಡಿದ್ದೇನೆ. ಮೊದಲು ಇದ್ದ ಸೆಕ್ಷನ್ 2ರ ಪ್ರಕಾರ ಒಂದು ಪಟ್ಟಣದಲ್ಲಿರತಕ್ಕ ಒಂದು ಭಾಗವನ್ನು, ಒಂದು ಏರಿಯಾವನ್ನು, ಒಂದು ಪ್ಲೇನನ್ನು ತಾವು ಡಿಫೈನ್ ಮಾಡಿದ್ದೀರಿ. 2(ಎ) ನಿರ್ದಿಷ್ಟವಾಗಿ ಇದೆ. ಇದರ ಪ್ರಕಾರ ರಾಯಚೂರು ಮತ್ತು ಅದರ ಪಕ್ಕದಲ್ಲಿರತಕ್ಕ ಕೆಲವು ಹಳ್ಳಿಗಳನ್ನು ಅದಕ್ಕೆ ಸೇರಿಸಿದರೆ ಅಂತಹ ಭಾಗವನ್ನು ಮಾರ್ಕೆಟಿಂಗ್ ಏರಿಯಾ ಅಂತ ಕ್ಲಾಸ್ 2ರ ಪ್ರಕಾರ ಮಾಡಲಕ್ಕೆ ಬರುತ್ತಾ ಇರಲಲ್ಲ. ಕ್ಲಾಸ್ 2(ಎ) ಪ್ರಕಾರ ಆ ಲಿಮಿಟ್ಸ್ ಮೀರಿ ಮಾರ್ಕೆಟಿಂಗ್ ಕಮಿಟಿ ಮಾಡಲಕ್ಕೆ ಬರುತ್ತದೆ ಎಂಬ ನಿಯಮವನ್ನು ತಾವು ಈ ನೋಟಿಫಿಕೇಷನ್ ಪ್ರಕಾರ ಮಾಡಬಹುದು. ಅದಕ್ಕೆ ಒಂದು ಉದಾಹರಣೆ ಹೇಳಿದೆ, ಗಂಗಾವತಿಯಲ್ಲಿ ನೋಟಿಫಿಕೇಷನ್ ಮಾಡಿದ್ದೀರಿ, ಸೆಕ್ಷನ್ 2ರ ಪ್ರಕಾರ ಆ ರೀತಿ ಮಾಡುವುದಕ್ಕೆ ಬರುತ್ತಾ ಇರಲಲ್ಲ. ಇನ್ನೊಂದು ಹಳ್ಳಿ ಭಾಗ ಸೇರಿಸತಕ್ಕ ಅಧಿಕಾರ ಸೆಕ್ಷನ್ 6(2) ಪ್ರಕಾರ ಇರಲಲ್ಲ, ಈಗ ಆ ಅಧಿಕಾರ ತಿದ್ದುಪಡಿ ಮಸೂದೆಯಿಂದ ತೆಗೆದು ಕೊಂಡು ಅದನ್ನು ವ್ಯಾಲಿಡೇಟ್ ಮಾಡುತ್ತಾ ಇದ್ದೀರಿ. ಇದರಲ್ಲಿರತಕ್ಕ ರಿಸ್ಟ್ರಿಕ್ಷನ್ ಅಂದರೆ ಈಗ ರಾಯಚೂರು ಇದೆ, ಅದರ ಪಕ್ಕದಲ್ಲಿ ರಾಂಪುರ ಇದೆ. ತಾವು ಹೇಳತಕ್ಕ ಪ್ರಕಾರ ಅದನ್ನು ರಾಯಚೂರು ಅಂಡ್ ರಾಂಪುರ ಮಾರ್ಕೆಟ್ ಯಾರ್ಡ್ ಅಂತ ಓದಬೇಕಾಗುತ್ತದೆ. ಆ ರೀತಿ ಆಗುವುದಾದರೆ ರಾಂಪುರದಲ್ಲಿ ವ್ಯಾಪಾರ ಮಾಡುವಂತಹ ಎಲ್ಲಾ ರೈತರು, ದುಕಾನ್‌ದಾರರೂ ತಮ್ಮ ಅಂಗಡಿಗಳನ್ನು ಆ ಮಾರ್ಕೆಟ್ ಏರಿಯಾಕ್ಕೇ ಸಾಗಿಸಬೇಕಾಗುತ್ತದೆ, ಸಾಗಿಸದಿದ್ದರೆ ಅದು ಇಲ್ಲೀಗರ್ ಆಗುತ್ತದೆ.

They are liable for punishment under this Act. It is definitely a restriction on the trade of the villagers who have been included in the market areas.

ಆದ್ದರಿಂದ ನಾನು ಹೇಳುವುದೇನೆಂದರೆ ತಾವು ಪ್ರೆಸ್ಟೀಜ್ ಮೇರೆ ನಿಂತುಕೊಳ್ಳಬೇಡಿ. ಈಗಾಗಲೇ ಮಾರ್ಕೆಟ್ ಯಾರ್ಡ್ ಬಗ್ಗೆ ಎರಡು ಹೈಕೋರ್ಟಿನ ತೀರ್ಮಾನಗಳು ಇವೆ. ಇವತ್ತು ಕಾಯಿದೆ ಮಾಡುತ್ತಾ ಇದ್ದೀರಿ, ಬಹಳ ಸಂತೋಷ. ನಮಂಜಸವಾದ ಉತ್ತರ ಕೊಡುತ್ತೀರಿ ಅಥವಾ ಮೇಜರಾರಿಟಿ ಮೇಲೆ ಕೈ ಎತ್ತಿಸುತ್ತೀರಿ, ಈ ಮಸೂದೆಯನ್ನು ಪಾಸ್ ಮಾಡಿಸುತ್ತೀರಿ, ಮತ್ತ ನಿಮ್ಮ ಮುಖಕ್ಕೆ ಮಸಿ ಹತ್ತುತ್ತದೆ. ಇದರಿಂದ ರೈತರ ಹಿತವನ್ನು, ಜನತೆಯ ಹಿತವನ್ನು ಎಷ್ಟುಮಟ್ಟಿಗೆ ಸಾಧಿಸಿದಂತಾಗುತ್ತದೆ ಎಂದು ಮಾತನ್ನು ಸರ್ಕಾರ ಯೋಜನೆ ಮಾಡಬೇಕು.

4-30 P.M.

ಅದಕ್ಕಾಗಿ ನಾನು ಹೇಳುತ್ತಿರುವುದು—ಆರ್ಟಿಕರ್ 304(ಬಿ) ಪ್ರಕಾರ ಆರ್ಡಿನೆನ್ಸ್ ಒಂದನ್ನು ಹೊರಡಿಸುವುದಕ್ಕೆ ನಮ್ಮ ರಾಷ್ಟ್ರಾಧ್ಯಕ್ಷರಿಂದ ಅಪ್ಪಣೆ ಪಡೆಯಬೇಕು. ಹಾಗೆ ಅಪ್ಪಣೆಯನ್ನು ಪಡೆಯದೆ ಇದರ ಬಗ್ಗೆ ಹೀಗೊಂದು ಆರ್ಡಿನೆನ್ಸ್‌ನ್ನು ಹೊರಡಿಸುವುದಕ್ಕೆ ಬರುವುದಿಲ್ಲ. ಇಂಥ ಒಂದು ಮಸೂದೆ

ಯನ್ನು ಇಲ್ಲಿ ಚರ್ಚೆ ಮಾಡುವುದಕ್ಕೂ ಸಹಾ ಈ ಮಾನ್ಯ ಸಭೆಗೆ ಅಧಿಕಾರವಿಲ್ಲ. ಯಾವ ಒಂದು ಮಸೂದೆಯನ್ನು ಇಲ್ಲ ಚರ್ಚೆಮಾಡುವುದಕ್ಕೆ ಈ ಸಭೆಗೆ ಅಧಿಕಾರವಿಲ್ಲವೋ ಅಂಥ ಮಸೂದೆಗೆ ಅಂಗೀಕಾರ ಮುದ್ರೆಯನ್ನು ಒತ್ತುವುದಕ್ಕೆ ಮಾನ್ಯ ರಾಜ್ಯಪಾಲರಿಗೂ ಅಧಿಕಾರವಿಲ್ಲ. ಆರ್ಟಿಕರ್ 304(ಬ) ಪ್ರಕಾರ ಗವರ್ನರುಗಳಿಗೆ ಅಂಥ ಮಸೂದೆಗೆ ಅಂಗೀಕಾರ ಕೊಡುವುದಕ್ಕೆ ಅಧಿಕಾರವಿಲ್ಲ.

Art 213(1).

"If at any time, except when the Legislative Assembly of a State is in session or where there is a Legislative Council in a State, except when both Houses of the Legislature are in session, the Governor is satisfied that circumstances exist which render it necessary for him to take immediate action, he may promulgate such Ordinances as the circumstances appear to him to require :

Provided that the Governor shall not, without instructions from the President, promulgate any such Ordinance if—

(a) a Bill containing the same provisions would under this Constitution have required the previous sanction of the president for the introduction thereof into the Legislature."

ಅದಕ್ಕಾಗೇ ನಾನು ಇದರ ಬಗ್ಗೆ ಹೇಳುವುದೇನೆಂದರೆ—ಆರ್ಟಿಕರ್ 304(ಬ) ಪ್ರಕಾರ ಎಲ್ಲಿ ವ್ಯಾಪಾರ ಅಥವಾ ಒಂದು ಟ್ರೇಡಿಗೆ ಅಡಚಣೆಯುಂಟಾಗುತ್ತದೋ ಅಂಥ ಸಂದರ್ಭದಲ್ಲಿ ಒಂದು ಮಸೂದೆಯನ್ನು ಅದಕ್ಕೆ ಸಂಬಂಧಪಟ್ಟಹಾಗೆ ಈ ಸಭೆಯಲ್ಲಿ ಮಂಡಿಸುವುದಕ್ಕೆ ಅವಕಾಶವಿಲ್ಲ, ಅದನ್ನು ಚರ್ಚೆಮಾಡುವುದಕ್ಕೆ ಈ ಮಾನ್ಯ ಸಭೆಗೆ ಅಧಿಕಾರವೂ ಇಲ್ಲ, ಪಾಸ್ ಮಾಡುವುದಕ್ಕೆ ಮೊದಲೇ ಸಾಧ್ಯವಿಲ್ಲ ಎಂಬುದನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ. ಇದೇ ಸಂದರ್ಭದಲ್ಲಿ ನಾನು ಮಾನ್ಯ ಸಭೆಯ ಗಮನಕ್ಕೆ ಇದೇ ವಿಚಾರದಲ್ಲಿ ಕೊಟ್ಟಿರತಕ್ಕ ಒಂದು ಹೈಕೋರ್ಟಿನ ರೂಲಿಂಗನ್ನು ಎ.ಐ.ಆರ್. 1964 ಕೇರಳ, ಪುಟ 92 ತರಲಿಚ್ಛಿಸುತ್ತೇನೆ.

"Section 3 of Act 5 of 1950 is void and inoperative for lack of Presidential sanction under the proviso to art. 304(b) of the Constitution. The proviso to clause (b) of art. 304 states that no Bill or amendment for the purposes of clause (b) shall be introduced or moved in the Legislature of a State without the previous sanction of the President. The mere fact that the Bill was originally introduced in the Legislative Assembly on a date prior to the date of the Constitution, will not save section 3 of the Act from the operation of the proviso to clause (b) of article 304, as it was only subsequent to the coming into force of the Constitution that the Bill in its final from as redrafted by the Select Committee was introduced and moved in the State Legislature. Even though under clause (3) of Article 246 of the Constitution the Legislature of the State was competent to enact the impugned section, its validity would depend upon the further question whether or not any other Constitutional limitation has been transgressed in enacting the section. Article 304 modifies and controls the power conferred by clause (3) of article 246. These two articles have to be read and construed to gether for the purpose of determining the validity of the impugned section of the Act. The

(ಶ್ರೀ ಎಂ. ನಾಗಪ್ಪ)

proviso to clause (b) of Art. 304 expressly prohibits the introduction and the moving of a Bill without previous sanction of the President. The direction is mandatory and contravention of the proviso is, therefore, fatal to the validity and the legality of the section. Section 3 of the Act has, therefore, to be declared illegal."

ಇದರಲ್ಲಿ ನೆಡೆದಿರತಕ್ಕ ವಿದ್ಯಮಾನಗಳೇನೆಂದರೆ—ಇದರ ? ಅಡಕವಾಗಿರತಕ್ಕ ಫ್ಯಾಕ್ಟ್ಸ ಏನೆಂದರೆ ಅಡತ್ ಅಂಗಡಿಯ ವ್ಯಾಪಾರಗಾರನು ರೈಸೆನ್ಸ್ ಇಲ್ಲದೆ ವ್ಯಾಪಾರಮಾಡುತ್ತಿದ್ದ. ಅತನ ಬಗ್ಗೆ ಕ್ರಮ ಕೈಗೊಳ್ಳಲು ಆ ಸರ್ಕಾರ ಆಕ್ಟ್‌ನ್ನು ಅಮೆಂಡ್ ಮಾಡಿ ಅನಂತರ ಆ ವ್ಯಕ್ತಿಯ ಮೇರೆ ಒಂದು ಕೇಸನ್ನು ಹಾಕಿದರು. ಆ ಕೇಸು ಹೈಕೋರ್ಟ್ ಮುಂದೆ ವಿಚಾರಣೆಗೆ ಬಂದು ಅಲ್ಲ ಡಿಸ್ ಮಿಸ್ ಆಯಿತು. ಆ ಅಡತ್ ಷಾಪ್ ಈ ಆಕ್ಟಿನ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ಹೇಳಿದ್ದಾರೆ.

The Bill that has been latterly moved cannot save the Adat shop-keeper to file a suit.

ಆದ್ದರಿಂದ ಸರ್ಕಾರದವರು ಇದನ್ನು ಅಷ್ಟು ಹಗುರವಾಗಿ ಭಾವಿಸಬಾರದು. ಇಲ್ಲಿ ಮಾಡತಕ್ಕ ಕಾನೂನುಗಳೇನಿವೆ ಅವುಗಳ ಬಗ್ಗೆ ಯಾರಾದರೂ ನಾಳೆ ಹೈಕೋರ್ಟಿಗೆ ಒಂದು ರಿಟ್ ಹಾಕಿದರೆ ಅವು ಎಂದೂ ಫೈರಾಗಬಾರದು. ಅಂಥ ಬಂದೋಬಸ್ತಾದ ಆಕ್ಟ್‌ಗಳನ್ನು ನಾವಿಲ್ಲಿ ಪಾಸಮಾಡ ಬೇಕು.

ಶ್ರೀ ಬಿ. ಎಲ್. ಗೌಡ (ಸಹಕಾರ ಶಾಖೆಯ ಉಪಮಂತ್ರಿಗಳು).—ಇದರ ಮೇರೆ ರಿಟ್ ಹೋಗಿದ್ದವರೆಲ್ಲರೂ ಕೇಸನ್ನು ಕಳೆದುಕೊಂಡು ಹಿಂದಿರುಗಿದ್ದು ತಮಗೆಲ್ಲರಿಗೂ ಗೊತ್ತೇ ಇದೆ.

ಶ್ರೀ ಕೆ. ಎಚ್. ಪಾಟೀಲ್.—ಎಲ್ಲ ರಿಟ್ಟುಗಳು ಫೈಲಾದವು ಎಂದು ತಾವು ಹೇಳಬಾರದು. ವಿಚಾರಣೆ ಆಗದಿರತಕ್ಕ ರಿಟ್ಟುಗಳು ಇನ್ನೂ ಎಷ್ಟೋ ಇವೆ. ಹಾಗಿರುವಾಗ ಎಲ್ಲವೂ ಫೈಲಾದವು ಎಂದು ಹೇಳುವುದು ಸರಿಯಾದ್ದಲ್ಲ.

ಶ್ರೀ ಎಂ. ನಾಗಪ್ಪ.—ಅಧ್ಯಕ್ಷರೇ ನಾನು ಹೇಳುವುದಿಷ್ಟೆ. ಸರ್ಕಾರದವರು ಈ ದಿವಸ ತರತಕ್ಕ ಯಾವುದೇ ಒಂದು ನಿರ್ಣಯ ಅಥವಾ ಖಾಯಿದೆ ಬಗ್ಗೆ ಸಾರ್ವಜನಿಕರಿಗೆ ಬಹಳ ಸಂಶಯ ವುಂಟಾಗಿದೆ. ಆದ್ದರಿಂದ ಸರ್ಕಾರದವರು ಈ ಒಂದು ಖಾಯಿದೆಯನ್ನು ಕೇವಲ ರೈತರ ಹಿತದೃಷ್ಟಿ ಯಿಂದಲೇ ಮಾಡಿದೆ ಎಂದು ಹೇಳಿದರೂ ಜನರು ಇದರ ಬಗ್ಗೆ ನೂರಾರು ರಿಟ್ಟುಗಳನ್ನು ಕೋರ್ಟಿಗೆ ಹಾಕೇ ಹಾಕುತ್ತಾರೆ. ಬರೀ ಇಲ್ಲಿಯ ಹೈಕೋರ್ಟು ಒಂದರಲ್ಲಿ ನಮ್ಮ ಶಾಸನ ಸಭೆಯ ಖಾಯಿದೆಗಳು ಊರ್ಜಿತವಾದರೆ ಸಾಲದು. ಅವು ಸುಪ್ರೀಂ ಕೋರ್ಟಿನಲ್ಲೂ ಊರ್ಜಿತವಾಗಬೇಕು. ನನಗೆ ಈ ಮಸೂದೆಯ ಬಗ್ಗೆ ಒಂದು ದೊಡ್ಡ ಸಂಶಯ ಬಂದಿದೆ. ಇದು ಜ್ಯೋಡಿಗೆ ಅಡ್ಡಿಆಪಚಣೆ ಉಂಟುಮಾಡತಕ್ಕ ಒಂದು ಮಸೂದೆಯಾಗಿದೆ ಎಂಬ ಅನುಮಾನ ನನಗೆ ತುಂಬಾ ಉಂಟಾಗಿದೆ. ಆದುದರಿಂದ ಸರ್ಕಾರದವರು ಈ ವಿಚಾರದಲ್ಲಿ ಸಭೆಗೆ ಸಮಾಧಾನಮಾಡುವುದಕ್ಕೆ ಮೊದಲು ಅವರು ತಮ್ಮ ಲಾ ಇರಾಖೆಯ ತಜ್ಞರನ್ನು ಕರೆಸಿ ಈ ವಿಚಾರದಲ್ಲಿ ಅವರು ಮೊದಲು ಅನುಮಾನವನ್ನು ಪರಿತ್ಯಾಗಮಾಡಿಕೊಳ್ಳಬೇಕೆಂದು ವಿಂತಿಮಾಡಿಕೊಳ್ಳುತ್ತೇನೆ. ಸರ್ಕಾರದವರು ಮೊದಲು ಇದರಲ್ಲಿ ಅಂಥ ಲಕೂನಾ ಯಾವುದೂ ಇಲ್ಲವೆಂಬುದನ್ನು ಖಾತ್ರಿಮಾಡಿಕೊಳ್ಳಬೇಕು. ಅನಂತರ ಅವರು ಸಭೆಗೆ ಖಾತರಿ ಕೊಡಬಹುದು. ಅಡ್ವಕೇಟ್ ಜನರಲ್‌ರವರನ್ನು ಕನ್‌ಸಲ್ಟ್‌ಮಾಡಿ ಎಂದು ಸರೆಹೆ ಮಾಡುತ್ತೇನೆ. ಇಂಥ ಕಾನೂನುಗಳನ್ನು ಮಾಡಿದರೆ ಸರ್ಕಾರಕ್ಕೂ ನಷ್ಟವಿಲ್ಲ. ವ್ಯಾಪಾರ ಮಾಡತಕ್ಕ ಜನರಿಗೂ ನಷ್ಟವಿಲ್ಲ. ಆದರೆ ಯಾರಿಗೆ ನಷ್ಟ ಎಂದರೆ ಸಾಮಾನುಗಳನ್ನು ಮಾರಾಟ ಮಾಡತಕ್ಕ ರೈತನಿಗೆ ಬಹಳ ನಷ್ಟವಾಗುತ್ತದೆ. ಇಂಥ ಮಸೂದೆಗಳಿಂದ ಜನರ ನಂಬಿಕೆಯನ್ನು ಸರ್ಕಾರ ಕಳೆದುಕೊಳ್ಳಬೇಕಾಗುವುದು. ಇದರಿಂದ ಬಹಳ ಅನ್ಯಾಯ ರೈತರಿಗಾಗುತ್ತದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ರೈತರ ಅಭಿವೃದ್ಧಿಯ ಬಗ್ಗೆ ತರತಕ್ಕ ಮಸೂದೆಗಳ ಬಗ್ಗೆ ಹೀಗೆ ಪದೇ ಪದೇ ತಿದ್ದುಪಡಿಗಳನ್ನು ಮಾಡುವುದು ಅವರಿಗೆ ಬಹಳ ಹಾನಿಯನ್ನುಂಟುಮಾಡುತ್ತದೆ. ಆದ್ದರಿಂದ ಈ ಅನುಮಾನಗಳನ್ನೂ ಪರಿಹರಿಸಿಕೊಂಡ ನಂತರ ಇದನ್ನು ಚರ್ಚೆಗೆ ತಂದರೆ ಒಳ್ಳೆಯ ದೆಂದು ಹೇಳುತ್ತೇನೆ. ಈಗತಾನೆ ಮಾನ್ಯ ಮಂತ್ರಿಗಳು ಒಂದು ವಿಷಯವನ್ನು ಸಭೆಯ ಗಮನಕ್ಕೆ ತಂದರು. ಅದು ಏನೆಂದರೆ ಹೈಕೋರ್ಟಿನವರು ತಮ್ಮ ತೀರ್ಮಾನದಲ್ಲಿ ಏನೋ ಒಂದು ಆಬ್‌ಸರ್ವೇ

ಷನ್ ಮಾಡಿದ್ದರು ಅದನ್ನು ದೂರಮಾಡುವುದಕ್ಕಾಗಿ ಆಕ್ಟನ್ನು ತಿದ್ದುಪಡಿಮಾಡರಾಯಿತು ಎಂದು. ಆ ನಂತರ ಇಲ್ಲ ಸೆಕ್ಷನ್ 154ಕ್ಕೆ ತಂದಿರುವ ತಿದ್ದುಪಡಿಯಲ್ಲಿ ಏನು ಕೇಳಿದ್ದಾರೆಂಬುದನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ.

The explanation clause says :—

(i) The deputy Commissioner, in respect of a market committee of a market area, the market yard of which is situated in the head quarters of the district.

ಅಂದರೆ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ನಲ್ಲಿರತಕ್ಕ ಮಾರ್ಕೆಟ್ ಯಾರ್ಡ್ ಅಥವಾ ಮಾರ್ಕೆಟ್ ಕಮಿಟಿಗೆ ತಾವು ಅಡ್ಮಿನಿಸ್ಟ್ರೇಟರನ್ನು ಹಾಕುತ್ತೀರಿ ಎಂದು ಇದೆ.

(ii) The Assistant Commissioner of the revenue sub-division, in respect of a market committee of a market area, the market yard of which is situated in the head quarters of the revenue sub-division other than the head quarters of the district ;

(iii) the Tahsildar of the taluk..... "

Gangavathi is a sub-divisional head-quarter ಅಲ್ಲಿ ಮಾರ್ಕೆಟ್ ಕಮಿಟಿ ಎಷ್ಟು ಬೆಳವಣಿಗೆಯಾಗಿದೆ ? ಅದರೆ ಮಾರ್ಕೆಟ್ ಕಮಿಟಿಯನ್ನು ಬದರಾಯಿಸುವ ಶಕ್ತಿ ಆ ಕಮಿಟಿಗೆ ಬರಲಲ್ಲ.

ಶ್ರೀ ಬಿ. ಎಲ್. ಗೌಡ.—ಮಾನ್ಯ ಶ್ರೀ ನಾಗಪ್ಪನವರು 154 ನೇ ಸೆಕ್ಷನ್ನಿಗೆ ಇನ್ನೊಂದು ಪ್ರಾವಿಷನ್ ಹಾಕಿ ಎಂದು ಹೇಳಿದರು. ಆದ್ದರಿಂದ ತಹಸೀಲ್ದಾರರಿಗಿಂತ ಹೆಚ್ಚಿಗೆ ಅಂತಸ್ತು ಇರುವಂಥ ನೌಕರರನ್ನು ನೇಮಕಮಾಡಬಹುದು ಎಂಬುದಾಗಿ ಅಮೆಂಡಿಂಗ್ ಬಿಲ್‌ನಲ್ಲಿ ಪ್ರೊವೈಡ್ ಮಾಡಿದ್ದೇವೆ.

Sri M. NAGAPPA.—Sub-clause (2) says :—

" Notwithstanding anything contained in sub-section (1), the State Government may, at any time after the 19th day of July, 1969, by Notification, appoint, from time to time,.....

The explanation creates again a difficulty in the minds of the people.

Sub- lause (2) is not properly worded. ಈ ಎಕ್ಸ್‌ಪ್ಲನೇಷನ್ ಕ್ಲಾರಿಫೈ ಮಾಡುವುದಕ್ಕೆ ಇದೆಯೆಂದು ತಿಳಿದುಬರುವುದಿಲ್ಲ. ಇದು ವ್ಯಾನ್‌ಡೇಟರಿ ಇದ್ದಹಾಗೆ ಇದೆ. ಅದು ಅಷ್ಟು ಸ್ಪಷ್ಟವಾಗಿಲ್ಲ. ಯಾವ ದೃಷ್ಟಿಯಿಂದ ತಿದ್ದುಪಡಿಮಾಡಬೇಕೆಂಬುದನ್ನು ದಯವಿಟ್ಟು ನೋಡಬೇಕು. ಬಾಕಿಯೆರ್ಲಾ ಕಾನ್‌ಸಿಕ್ವೆನಿಯರ್ ಅಮೆಂಡ್‌ಮೆಂಟ್ಸ್ ಇರುವ ಕಾರಣ ನಾನು ಹೆಚ್ಚಿಗೆ ವಿರೋಧಮಾಡುವುದಿಲ್ಲ. ಸೆಕ್ಷನ್ 10ನ್ನು ಅಮೆಂಡ್‌ಮೆಂಟ್ ಮಾಡಿದರೆ ದೋಷಗಳು ದೂರವಾಗುತ್ತಿತ್ತು. ಅದರ ಬಗ್ಗೆ ತಮ್ಮ ಉತ್ತರದಲ್ಲಿ ತಿಳಿಸಬೇಕೆಂದು ಕೇಳಿಕೊಂಡು, ಅಧ್ಯಕ್ಷರು ನನಗೆ ಇಷ್ಟು ಸಮಯ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri K. H. PATIL (Hubli).—Sir before commencing, I would like to know whether we should talk on all the three motions together or on the dis-approval Motion of my friend Sri Nagappa.

Mr. CHAIRMAN.—Hon. Members may speak on all these motions together.

ಶ್ರೀ ಕೆ. ಎಚ್. ಪಾಟೀಲ್.—ನನ್ಮಾನ್ಯ ಸಭಾಧ್ಯಕ್ಷರೇ, ಇವತ್ತಿನದಿವಸ ನಮ್ಮ ಎದುರಿಗೆ ಮೂರು ಸೂಚನೆಗಳಿವೆ. ಮೊದಲನೆಯದು ಆರ್ಟಿಕಲ್ 213ರನ್ವಯ ಕೈಕೊಂಡ ಕ್ರಮ ಅನ್ಯಾಯವಾದುದು. ಅದರ ಪ್ರಕಾರ ಹೊರಡಿಸಲಾದ ಆರ್ಡಿನೆನ್ಸ್ ಕ್ರಮಬದ್ಧವಾಗಿಲ್ಲ, ಯೋಗ್ಯವಾದುದಲ್ಲ ಸಾಧು ವಾದುದಲ್ಲವೆಂದು ಅವನ್ನು ಡಿಸ್‌ಅಪ್ರೂವ್ ಮಾಡುವುದಕ್ಕೋಸ್ಕರ ನನ್ನ ಮಾನ್ಯ ಸ್ನೇಹಿತರಾದಂಥ

(ಶ್ರೀ ಕೆ. ಎಚ್. ಪಾಟೀಲ್)

ಶ್ರೀಮಾನ್ ನಾಗಪ್ಪನವರು ಕಳುಹಿಸಿದಂಥ ಒಂದು ರೆಸಲ್ಯೂಷನ್. ಆನಂತರ ಆ ಆರ್ಡಿನೆನ್ಸನ್ನು ರಿಪ್ಲೇಸ್ ಮಾಡಿದಂಥ ಬಿಲ್ಲನ್ನು ಈ ಸಭೆಯ ಮುಂದೆ ಮುಂಡಿಸಿದಾಗ ನಾನೂ ಮತ್ತು ನನ್ನ ಹಿರಿಯ ನಾಯಕರಾದ ಶ್ರೀಮಾನ್ ಸಿದ್ದವೀರಪ್ಪನವರು ಇದನ್ನು ಸಾರ್ವಜನಿಕರ ಅಭಿಪ್ರಾಯಕ್ಕೆ ಅವಗಾಹನೆಗೆ ಕಳುಹಿಸಬೇಕೆಂದು ಮಾಡಿರುವ ಸೂಚನೆ ಮತ್ತು ಮೂರನೆಯದು ಆರ್ಡಿನೆನ್ಸನ್ನು ರೀಪ್ಲೇಸ್ ಮಾಡಲು ತಂದಿರುವ ಮಸೂದೆ. ಆದರೆ ಈಗ ಈ ಮೂರು ಸೂಚನೆಗಳನ್ನು ಒಟ್ಟಿಗೆ ವಿಚಾರಮಾಡುವುದು ಬಹಳ ಸಂದಿಗ್ಧವಾದ ಪರಿಸ್ಥಿತಿ. ನಿಜವಾಗಿಯೂ ಇದರಲ್ಲಿರುವ ತಾರತಮ್ಯಗಳನ್ನು ಪರಿಶೀಲನೆಮಾಡುವುದಾದರೆ, ನ್ಯಾಯಾನ್ಯಾಯಗಳನ್ನು ತೂಗಿ ನೋಡುವುದಾದರೆ ಕಾಯಿದೆ ಕಾನೂನುಗಳನ್ನು ಸಮನಾಗಿ ವಿಂಗಡಣೆ ಮಾಡಿ ನಮ್ಮ ಮನಸ್ಸನ್ನು ಪರಿಶೀಲಿಸುವುದಾದರೆ ಈ ಆರ್ಡಿನೆನ್ಸನ್ನು ಡಿಸ್‌ಅಪ್ರೂವ್ ಮಾಡತಕ್ಕ ಮಾನ್ಯ ಶ್ರೀ ನಾಗಪ್ಪನವರ ತಿದ್ದುಪಡಿಯನ್ನು ಮೊಟ್ಟಮೊದಲು ವಿಚಾರಮಾಡಬೇಕು. ವಿಚಾರಣೆ ನಂತರ ಈ ಸಭೆ ಶ್ರೀ ನಾಗಪ್ಪನವರ ಸೂಚನೆಯನ್ನು ಎತ್ತಿ ಹಿಡಿದಿದ್ದರೆ ಬಹುಭಾಗದ ಚರ್ಚೆ ನಿಂತುಹೋಗುತ್ತಿತ್ತು. ಮಾನ್ಯ ಶ್ರೀ ನಾಗಪ್ಪನವರ ಮೋಷನ್ ಪಾಸಾಗಿಬಿಟ್ಟರೆ ನಿಮ್ಮ ಆರ್ಡಿನೆನ್ಸ್ ಫೇಲ್ ಆಗುತ್ತದೆ. ನಮ್ಮ ಸರಕಾರ ಕಳಚಿಹೋಗುತ್ತದೆಂಬ ಭಯ ನಮ್ಮ ಈ ಮೈನೂರು ಸರ್ಕಾರದವರಿಗೆ ಇದ್ದಂತೆ ನನಗೆ ಭಾಸವಾಗುತ್ತದೆ. ಇದನ್ನು ವಿಚಾರಮಾಡದೆ ಈ ಮೂರನ್ನೂ ಸಮ್ಮಿಳನ ಮಾಡಿರುವುದು, ನೋಡಿದರೆ ತಮ್ಮ ತಪ್ಪುಗಳ ತಿದ್ದುಪಡಿ ಉದ್ದೇಶದಿಂದ ಈ ಸಭೆಗೆ ಇವು ಈ ರೀತಿ ಬರುತ್ತಿವೆಯೆಂದು ನಾನು ಭಾವಿಸುತ್ತೇನೆ. ಈ ಆರ್ಡಿನನ್ಸ್ ಹೊರಡಿಸುವ ಸಂದರ್ಭ ಏನು ಬಂತು ಎನ್ನುವ ಮಾತನ್ನು ನನ್ನ ಸ್ನೇಹಿತರಾದಂಥ ಮಾನ್ಯ ಶ್ರೀ ನಾಗಪ್ಪನವರು ಬಹಳ ವಿಶದವಾಗಿ ವರ್ಣಿಸಿದ್ದಾರೆ. 213ನೇ ಆರ್ಟಿಕಲ್ ಪ್ರಕಾರ ಆರ್ಡಿನನ್ಸ್ ಹೊರಡಿಸಬೇಕಾದರೆ ಮೊಟ್ಟಮೊದಲನೆಯದಾಗಿ ರಾಜ್ಯಪಾಲರಿಗೆ ಸರ್ಕಾರದವರು ಸಮರ್ಪಕವಾದಂಥ ಕಾರಣಗಳನ್ನು ಕೊಡಬೇಕು, ಆದರೆ ಸಮರ್ಪಕವಾದಂಥ ಕಾರಣವನ್ನು ರಾಜ್ಯಪಾಲರಿಗೆ ಕೊಡುವುದಕ್ಕೆ ಸರ್ಕಾರ ಅಸಮರ್ಥವಾಗಿದೆ. ರಾಜ್ಯಪಾಲರನ್ನು ವಂಚಿಸಿ ಸರ್ಕಾರ ಜಯಶೀಲರಾಗಿದ್ದಾರೆಂದು ನನಗೆ ಸ್ಪಷ್ಟವಾಗಿ ಕಂಡುಬರುತ್ತದೆ. ನಂತರ ಈ ಆರ್ಡಿನನ್ಸ್‌ನ್ನು ಯಾವಾಗ ಹೊರಡಿಸಿದ್ದು ಎಂಬ ಮಾತು ಈಗಾಗಲೇ ಈ ಸಭೆಯಲ್ಲಿ ಬಂದಿರುವುದರಿಂದ, ತಾರೀಕುಗಳ ಅಂತರ ತೆಗೆದುಕೊಂಡರೆ ಹೈಕೋರ್ಟ್ ನಿರ್ಣಯದ ನಂತರ ಕೆಲವಾರು ತಿಂಗಳುಗಳಿಂದ ಸುಮ್ಮನೆ ಇದ್ದ ಸರ್ಕಾರ ಈಗ್ಗೆ ಕೆಲವಾರು ದಿವಸಗಳಲ್ಲಿ ಈ ಸಭೆ ಸೇರುತ್ತದೆಂದು ತಿಳಿದು ಇಷ್ಟೊಂದು ಅವಸರದಿಂದ, ತರಾತುರಿಯಿಂದ ರಾಜ್ಯಪಾಲರಿಗೆ ಶಿಫಾರಸ್ಸುಮಾಡಿ ಅವರ ಸಹಿ ಪಡೆಯುವ ಕಾರಣವೇನಿತ್ತು ? ಆರ್ಡಿನನ್ಸ್ ಯಾವಾಗಲೂ ಬಹಳ ವಿಶೇಷ ಸಂದರ್ಭದಲ್ಲಿ ಉಪಯೋಗ ಮಾಡಲು ಸರ್ಕಾರಕ್ಕೆ ಇರುವ ಅಸ್ತ್ರವೆಂದು ಕಾಣುತ್ತದೆ. ಅದನ್ನು ದಿನಂಪ್ರತಿ ವ್ಯವಹಾರಕ್ಕೆ ಉಪಯೋಗ ಮಾಡುವುದು ಸರಿಯಲ್ಲ. ನಿಜವಾಗಿ ಈ ಸಭೆಯಿಂದ ಟೀಕೆಮಾಡಿಸಿಕೊಳ್ಳಲಿಕ್ಕೆ ಯೋಗ್ಯವಲ್ಲವೆನ್ನುವ ಹಕ್ಕನ್ನು ಪಡೆದಿರತಕ್ಕ ರಾಜ್ಯಪಾಲರು ನಿಮ್ಮ ವಿಚಾರಶೀಲತ್ವದಿಂದ ದೂರವಿರುವ ವರ್ತನೆಯಿಂದ ಟೀಕೆಗೊಳಗಾಬೇಕಾಗುತ್ತದೆ. ಅದಕ್ಕೆ ಸರ್ಕಾರ ಹೊಣೆ. ಉಳಿದ ಮಾತುಗಳನ್ನು ಬಿಡೋಣ.

Sri V.N. PATIL (Humnabad).—Sir, with the permission of the Chair, I rise to a Point of Order. Of course, it will be a lighter side of the picture. According to the Indian tradition, clean shave is taken when something bad happens. The Hon. Deputy Minister for Home is sitting with a black cap and with a clean shave. I want to know whether he has changed his white cap to a black cap ? And whether it was on the death of the Syndicate or on account of the defeat of Sri Sanjeeva Reddy ? I request that the Deputy Home Minister may please make a statement.

Mr. CHAIRMAN.—That is entirely a personal matter concerning the Hon. Deputy Minister for Home. That can never be a Point of Order here.

ಶ್ರೀ ಕೆ. ಎಚ್. ಪಾಟೀಲ್.—ಸ್ವಾಮಿ, ಸರ್ಕಾರದವರೇ ಈ ಸದನಕ್ಕೆ ಕೊಟ್ಟಿರುವಂತಹ ಅಶ್ವಾಸನೆಗಳನ್ನು ಸದಾ ಕಾಲ ನಡೆಸಿಕೊಂಡು ಹೋಗುವುದು, ಸಾರ್ವಜನ್ಯದಿಂದ ಕೂಡಿದಂತಹ ಸರ್ಕಾರಕ್ಕೆ

ಒಳ್ಳೆಯದು. ಪ್ರಜಾಪ್ರಭುತ್ವದ ವಿಷಯವಾಗಿ ಬಹಳ ಪ್ರಗತಿಪರವಾಗಿ ಮಾತನಾಡುತ್ತಿದ್ದ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಅಂದಿನ ದಿವನ ಸಹಕಾರಿ ಮಂತ್ರಿಯಾಗಿದ್ದಾಗ ಹೇಳಿದಂತಹ ಮಾತನ್ನು ಜ್ಞಾಪಿಸಿಕೊಳ್ಳಬಹುದು. ಅವರು ಸಹಕಾರಿ ಮಂತ್ರಿ ಪದವಿಯನ್ನೇ ತಗೆಯುವ ಮಟ್ಟಕ್ಕೆ ನಾವು ಹೋಗಬಹುದು ಎಂದು ಹೇಳಿದ್ದರು. ನಂತರ ಅದೇ ಮಂತ್ರಿ ಪದವಿಗೆ ಶ್ರೀಮಾನ್ ನಾಡಗೌಡರನ್ನು ತಂದು ಇಟ್ಟರು. ಆ ಕಾಲಕ್ಕೆ ಮಾನ್ಯ ಪುಟ್ಟಸ್ವಾಮಿಯವರು ಈ ಬಿಲ್ಲನ್ನು ಇಟ್ಟು ಅವರು ಹೇಳಿದಂತಹ ಮಾತು ಈ ರೀತಿ ಇದೆ.

> "The provisions now recommended by the Committee are of a substantive nature relating to the trade and commerce and the Committee felt that it was necessary for the proper working of the marketing committee and they were in the public interest and therefore sanction of the President under proviso to article 304 (b) of the Constitution of India for moving the Bill was found necessary and it has been now obtained."

ಸ್ವಾಮಿ, ಮಂತ್ರಿವರ್ಯರ ಮಾತು ಅಂದರೆ, ರಸ್ತೆಯಲ್ಲಿ ಆಡುವಂತಹ, ಬೇಜವಾಬ್ದಾರಿ ಮನುಷ್ಯನು ಮಾತನಾಡತಕ್ಕ ಮಾತಲ್ಲವೆಂದು ನಾನು ತಿಳಿದುಕೊಂಡಿದ್ದೇನೆ "was found Necessary" ಎಂದು ಹೇಳಿದ್ದಾರೆ. ಕಾಯ್ದೆ ಪ್ರಶ್ನೆಯ ಪರಿಶೀಲನೆ ಮಾಡಿ, ತಮ್ಮ ಅಭಿಪ್ರಾಯಕ್ಕೆ ಬಂದು, ಆ ಅಭಿಪ್ರಾಯದ ಪ್ರಕಾರ ರಾಜ್ಯಪಾಲರಿಗೆ ಕಳುಹಿಸಿದರು. ಅನಂತರ ಪ್ರೆಸಿಡೆಂಟರಿಗೆ ಹೋಯ್ತು ಮೊನ್ನೆ ಮೊನ್ನೆ ಮಾನ್ಯ ಪಿ. ಎಂ. ನಾಡಗೌಡರು ಮಾತನಾಡುತ್ತಾ ಅಂದು ಸರ್ಕಾರ ತಪ್ಪುಮಾಡಿದೆ. ಇವತ್ತು ನಾನು ಏಕೆ ತಪ್ಪು ಮಾಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

> "Received the assent of the President on the 19th day of August 1966."

ಎನ್ನುವಂತಹ ಮಾತನ್ನು ಈ ಕಾಯಿದೆಯಲ್ಲಿ ನಮೂದಿಸಿದೆ. ಅಂದರೆ ಅಂದು ಸರ್ಕಾರಕ್ಕೂ ಬೇಕು, ರಾಜ್ಯಪಾಲರಿಗೂ ಬೇಕು ಎಂದು ಪ್ರೆಸಿಡೆಂಟರು ಅಸೆಂಟ್ ಕೊಟ್ಟರು. ಇವತ್ತಿನ ದಿವನ ಪ್ರೆಸಿಡೆಂಟ್ ಅಸೆಂಟ್ ಜರೂರು ಇಲ್ಲವೆಂದು ಏಕೆ ಸರ್ಕಾರದಿಂದ ಹೇಳುತ್ತಿದ್ದಾರೆ ? ಈ ಸಂದರ್ಭದಲ್ಲಿ ನಾವು ಈ ಕಾಯಿದೆಯಲ್ಲಿರತಕ್ಕ ಅನೇಕ ಕಲಮುಗಳನ್ನು ಪರಿಶೀಲಸೋಣ. ಮೊದಲನೇದಾಗಿ 6ನೇ ಕಲಂ ಮಾರ್ಕೆಟ್ ಯಾರ್ಡ್ಸ್, ಮಾರ್ಕೆಟ್ ಸಬ್ ಯಾರ್ಡ್ಸ್ ; ಸಬ್ ಮಾರ್ಕೆಟ್ಸ್, ಮತ್ತು ಸಬ್ ಮಾರ್ಕೆಟ್ ಯಾರ್ಡ್ ಎನ್ನುವುದರ ಬಗ್ಗೆ ಇದೆ. ಸೆಕ್ಷನ್ 8ರಲ್ಲಿ 'ಕಂಪ್ರೊಲ್ ಆಫ್ ಮಾರ್ಕೆಟಿಂಗ್ ಆಫ್ ಅಗ್ರಿಕಲ್ಚರಲ್ ಪ್ರೊಡ್ಯೂಸ' ಇದೆ. 9 ರಲ್ಲಿ ಎಸ್ಟೇಬ್ಲಿಶ್‌ಮೆಂಟ್ ಆಫ್ ಮಾರ್ಕೆಟ್ ಕಮಿಟಿ ಅಂಡ್ ಇಟ್ಸ್ ಇನ್‌ಕಾರ್ಪರೇಶನ್ಸ್ ಎಂದು ಇದೆ. ಸೆಕ್ಷನ್ 63 ರಲ್ಲಿ ಪವರ್ಸ್ ಅಂಡ್ ಡ್ಯೂಟೀಸ್ ಆಫ್ ದಿ ಕಮಿಟಿ ಇದೆ. ಇನ್ನು ಏನು ಪವರ್ಸ್ ಇವೆಯೆಂಬುದನ್ನು ನೋಡೋಣ. 65 ರಲ್ಲಿ ಲೆವಿ ಆಫ್ ಮಾರ್ಕೆಟ್ ಫೀ ಎಂದು ಇದೆ. 66 ಪವರ್ಸ್ ಟು ಆರ್ಡರ್ ಪ್ರೊಡಕ್ಷನ್ ಆಫ್ ಅಕೌಂಟ್ಸ್, ಇನ್‌ಸ್ಪೆಕ್ಷನ್ ಅಂಡ್ ಸೀಜರ್. 62 ಪವರ್ ಟು ಸ್ವಾಪ್ ವೆಹಿಕಲ್ಸ್. ಇದನ್ನು ಏಕೆ ಹೇಳುತ್ತಿದ್ದೇ ನೆಂದರೆ, ಎಷ್ಟುಮಟ್ಟಿಗೆ ರಿಸ್ಟ್ರಿಕ್ಷನ್ಸ್ ಇಂಪೋಸ್ ಮಾಡುತ್ತಿದ್ದಾರೆಂಬುದನ್ನು ಸೂಕ್ಷ್ಮವಾಗಿ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. 70 ರಲ್ಲಿ ಕಂಪೆನ್‌ಸೇಶನ್ ಆಫ್ ಫೈನಾನ್ಸ್. ಆ ಮೇಲೆ ಪ್ರೊಹಿಬಿಶನ್ ಆಫ್ ಸರ್ಟನ್ ಸೆಕ್ಷನ್ಸ್ ಎನ್ನುವಂತಹ ಮಾತು 79 ರಲ್ಲಿದೆ. ಅದೇ ರೀತಿ 88 ರಲ್ಲಿ ಪ್ರೊವಿಶನ್ ಆಫ್ ಸರ್ಟನ್ ಸೆಕ್ಷನ್ಸ್ ಎನ್ನುವಂತಹ ಮಾತು 79 ರಲ್ಲಿದೆ. ಅದೇ ರೀತಿ 88 ರಲ್ಲಿ ಟ್ರೇಡರ್ಸ್ ಸೆಕ್ಯೂರಿಟಿ ಆಕ್ಟ್, 86 ಸೆಕ್ಯೂರಿಟಿ ಆಫ್ ಕಮಿಶನ್ ಏಜೆಂಟ್, 87 ರಲ್ಲಿ ಡಿಪಾಸಿಟ್ ಆಫ್ ಕ್ಯಾಶ್ ಸಕ್ಯೂರಿಟಿ ಇನ್ ದಿ ಬ್ಯಾಂಕ್. ಬ್ಯಾಂಕಿನಲ್ಲಿ ಇಷ್ಟು ಹಣ ಇಡಲೇಬೇಕೆಂದು ರಿಸ್ಟ್ರಿಕ್ಷನ್ ಹಾಕುತ್ತಿದ್ದಾರೆ. ಈ ಎಲ್ಲಾ ಕಾಲಮುಗಳನ್ನು ಸೇರಿಸಿ ಈವತ್ತಿನ ದಿವನ ಈ ಕಾಯಿದೆಗೆ ಅಮೆಂಡ್‌ಮೆಂಟ್ ತಂದಿದ್ದಾರೆ. ಇದರೊಳಗೆ ಪ್ರಾಮುಖ್ಯವಾದ ಸೆಕ್ಷನ್ ಯಾವುದು ? ಕಾಯಿದೆಯನ್ನು ನಡೆಸಿಕೊಂಡು ಹೋಗಬೇಕಾದರೆ ಮಾರ್ಕೆಟ್ ಕಮಿಟಿ ಬೇಕು. ಅದು ಎಸ್ಟಾಬ್ಲಿಷ್ ಆಗದೆ ಇದು ಯಾವುದೂ ನಡೆಯುವ ಹಾಗೆ ಇಲ್ಲ. ಸೆಕ್ಷನ್ 63 ರಲ್ಲಿ ಪವರ್ಸ್ ಅಂಡ್ ಡ್ಯೂಟೀಸ್ ಆಫ್ ದಿ ಮಾರ್ಕೆಟ್ ಕಮಿಟಿ ಎಂದು ಇದೆ. ಈ ಸೆಕ್ಷನನ್ನು ಬಿಟ್ಟು ಮತ್ತು ಯಾವುದಾದರೂ ಸೆಕ್ಷನೊಳಗೆ ರಿಸ್ಟ್ರಿಕ್ಷನ್ ಮಾಡುವ ಅಧಿಕಾರ ಯಾರಿಗಾದರೂ ಇದೆಯೇ, ಇಲ್ಲವೇ ?

> "To implement the provisions of this Act, rules and the bye-laws thereunder in the market area."

(ಶ್ರೀ ಕೆ. ಎಚ್. ಪಾಟೀರ್)

ಇಂಥ ಮಾರ್ಕೆಟ್ ಕಮಿಟಿ ಕಾನ್ಸ್‌ಟ್ಯೂಟ್ ಮಾಡುವುದಕ್ಕೆ ಹೊರಟಿದ್ದಾರೆ. ತಾವು ಇವತ್ತು ಯಾವ ಅಧಿಕಾರ ಕೊಟ್ಟಿದ್ದೀರಿ, ಮಾರ್ಕೆಟ್ ಕಮಿಟಿ ಕಾನ್ಸ್‌ಟ್ಯೂಟ್ ಮಾಡಿದ್ದೀರಿ, ಇದು ನಿಜವಾಗಿಯೂ ನೇರವಾದ ರಿಸ್ಟ್ರಿಕ್ಷನ್ ಆಗುತ್ತದೆ. ಮಾನ್ಯ ನಾಗಪ್ಪನವರು ಒಂದು ನೋಟಿಫಿಕೇಶನ್ ತೆಗೆದುಕೊಂಡು ಬಂದು ಹೇಳಿದರು. ಇವತ್ತಿನ ದಿವಸ ಪ್ರತಿಯೊಂದು ನೋಟಿಫಿಕೇಶನ್ಸ್ ಕೂಡ ಹಾಗೆ ಇದೆ. ಅಲ್ಲಿ ಮಾರ್ಕೆಟ್ ಯಾರ್ಡ್ ಎಸ್ಟೆಬ್ಲಿಷ್ ಮಾಡುತ್ತಾರೆ, ಮಾರ್ಕೆಟ್ ಯಾರ್ಡ್ ಹೊರಗಡೆ ವ್ಯವಹಾರ ಮಾಡುತ್ತಾರೆ. ನೀವು ಹೇಳಬಹುದು, ನಾವು ರೆಗ್ಯುಲೇಶನ್ ಮಾಡುತ್ತೇವೆ ಎಂದು. ಒಬ್ಬ ಡ್ರೈವರನು ರೈಸನ್ಸ್ ಫೀಕೊಟ್ಟರೆ ಅವನು ಬೇಕಾದಲ್ಲಿ ಬೇಕಾದ ವಾಹನ ಹೊಡೆಯಬಲ್ಲನು. ಅವನಿಗೆ ಇದೇ ಸ್ಥಳದಲ್ಲಿ ಹೊಡೆಯ ಬೇಕೆಂಬ ನಿರ್ಬಂಧವಿಲ್ಲ. ಅವನು ಫೀ ಕೊಟ್ಟರೆ ಬೇಕಾದಲ್ಲಿ ಓಡಬಹುದು. ನಿಮ್ಮದು ಹಾಗೆ ಅಲ್ಲ. ಇವತ್ತು ಅಂಗಡಿಗಳಲ್ಲಿ ಪುಸ್ತಕಗಳನ್ನು ಹೇಗೆ ಇಡಬೇಕು, ಎಂದು ರಿಸ್ಟ್ರಿಕ್ಷನ್ಸ್ ಇಂಪೋಸ್ ಮಾಡುವವರು ನೀವು. ನೀವು ಹೇಳಬಹುದು, ಬೇರೆ ವ್ಯಾಪಾರಸ್ಥರಿಗೂ ರೆಗ್ಯುಲೇಟ್ ಮಾಡುತ್ತೇವೆ, ರೈತನು ಕೂಡ ತನ್ನ ಮನಸ್ಸಿಗೆ ಬಂದಂತೆ ಮಾರಲಾಗುವುದಿಲ್ಲ ಎಂದು ಮಾರ್ಕೆಟ್ ಕಮಿಟಿಯ ಕ್ರಮಗಳನ್ನು ಅನುಸರಿಸಿ ಮಾರ ಬೇಕಾಗುತ್ತದೆ. ಇದರಿಂದ ನೀವು ಇಡೀ ಮೈಸೂರು ಜನತೆಯ ಮೇಲೆ ಗುರುತರವಾದಂತಹ ರಿಸ್ಟ್ರಿಕ್ಷನ್ಸ್ ಹೇರಿ, ಅದು ಯಾವ ರೀತಿಯಿಂದ ರೈತನ ಹಿತದೃಷ್ಟಿಯಿಂದ ಪ್ರಾಸಾಗಬೇಕೋ ಹಾಗೆ ಮಾಡದೆ ಅದಕ್ಕೆ ತದ್ವಿರುದ್ಧವಾಗಿ ಪಾಸ್ ಮಾಡಿಕೊಳ್ಳುತ್ತೀರಿ. ಇವತ್ತು ನಿಮಗೆ ಥೈರ್ಯವಿಲ್ಲ. ಇವತ್ತು ನೀವು ಜನನಾಯಕರ ಶಿಷ್ಯ ಎಂದು ಈ ಕೆಲಸವನ್ನು ಮಾಡುತ್ತಿದ್ದೀರಿ. ನೀವು ಎರಡು ಕೋಟಿ ಜನತೆಯ ಮೇಲೆ ಹೇರಿದಂತಹ ಅಕ್ರಮ ಕಾಯಿದೆಯು ಬಹಳ ಅಕ್ರಮತರವಾದ್ದಾಗಿದೆ. ಹೀಗೆ ಮಾಡುತ್ತಿರುವ ಸರ್ಕಾರವನ್ನು ಡಿಸ್‌ಮಿಸ್ ಮಾಡುವುದೇ ಲೇಸು. ಇವತ್ತು ಇಂಥ ಕಾಯಿದೆಗಳ ಮೇಲೆ ಬಡವರ ರಿಟ್‌ಗಳು ಬಂದಾಗ ಅವರಿಗೆ ವಕೀಲರಿಗೆ ರೊಕ್ಕ ಕೊಡಲು ಇಲ್ಲದೆ ಅವು ಯೋಗ್ಯ ರೀತಿಯಿಂದ ಮುಂದನೆಯಾಗದೆ ಹೋಗಬಹುದು. ನೀವು ಇವತ್ತು ಎರಡು, ಎರಡೂವರೆ ಸಾವಿರ ರೂಪಾಯಿಗಳನ್ನು ಪ್ರತಿ ದಿವಸ ಸರ್ಕಾರಿ ಪರವಾದ ವಕೀಲರಿಗೆ ಕೊಡುತ್ತಿದ್ದೀರಿ. ಇದು ಯಾರ ಹಣ ನೀವು ಒಂದು ನಾಟಕವನ್ನು ಮಾಡುತ್ತಿದ್ದೀರಿ.

5-00 P.M.

ಇವೊತ್ತು ಈ ಕಾನೂನಿನ ಸಂಬಂಧದಲ್ಲಿ ವಿವಾದಗಳು ಬಂದು ಯಾವ ಮನುಷ್ಯನಿಗೆ ಹೊಟ್ಟೆ ಉರಿಯುತ್ತದೆಯೋ ಅವನು ಕೋರ್ಟಿಗೆ ಹೋಗಿ ತನ್ನ ಪರವಾಗಿ ಅಲ್ಲಿ ಆರ್ಗ್ಯೂ ಮಾಡುವುದಕ್ಕೆ ಒಂದು ದಿವಸಕ್ಕೆ 2½ ಸಾವಿರ ರೂಪಾಯಿಗಳನ್ನು ಕೊಟ್ಟು ದೊಡ್ಡ ದೊಡ್ಡ ಅನುಭವಿಕ ವಕೀಲರನ್ನು ತರುವುದಕ್ಕೆ ಸಾಧ್ಯವಿಲ್ಲ. ಈಗ ನಾವು ಈ ಕಾಯಿದೆಯನ್ನು ಇಲ್ಲಿ ತೆದಿದ್ದರೆ ನೀವು ನಮ್ಮನ್ನು ಬೈಯುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ ಎಂದು ಶ್ರೀಮಾನ್ ನಾಡಗೌಡರು ಹೇಳಿದ್ದಾರೆ. ಇದರಿಂದಲೇ ಇವರ ಮನಸ್ಸಿನ ಇಂಗಿತ ವ್ಯಕ್ತವಾಗುತ್ತದೆ. ಮಾರುಕಟ್ಟೆ ಸಮಿತಿಗಳಿಗೆ ಸರಕಾಲದಲ್ಲಿ ಚುನಾವಣೆಯನ್ನು ನಡೆಸದೆ ಸರ್ಕಾರದವರು ತಮಗೆ ಬೇಕಾದವರಿಗೆ ಕೆಲವರಿಗೆ ರಾಜಕೀಯ ಸಹಕಾರವನ್ನು ನೀಡಲು ಮಾರುಕಟ್ಟೆ ಸಮಿತಿಗಳಿಗೆ ತಮಗೆ ಬೇಕಾದವರನ್ನು ನಾಮಕರಣ ಮಾಡುವ ಪದ್ಧತಿಯನ್ನು ಇಟ್ಟುಕೊಂಡಿದ್ದರು. ಈಗಿನ ಹೊಸ ವ್ಯವಸ್ಥೆಯಿಂದ ಈ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆಯನ್ನು ಮಾಡುವ ಅಧಿಕಾರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ, ಅಸಿಸ್ಟೆಂಟ್ ಕಮೀಷನರಿಗೆ ಇದೆ. ಪ್ರತಿಯೊಂದು ಮಾರುಕಟ್ಟೆಯ ಅಡಳಿತಕ್ಕೆ ಸಂಬಂಧಪಟ್ಟಹಾಗೆ ವ್ಯವಹಾರವನ್ನು ಮಾಡಲು ಚೀಫ್ ಮಾರ್ಕೆಟಿಂಗ್ ಅಫೀಸರ ಕೈಯ್ಯಲ್ಲಿ ಅಧಿಕಾರವನ್ನು ಕೊಟ್ಟಿದ್ದಾರೆ. ನಿಜವಾಗಿಯೂ ನಾನು ಕಳಕಳಿಯಿಂದ ಬಿನ್ನಹ ಮಾಡಿಕೊಳ್ಳುತ್ತೇನೆ. ಈ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆಯನ್ನು ಮಾಡದೆ ಇರುವ ತಪ್ಪು ನಮ್ಮದು, ನಮಗೆ ಬಹಳ ಕೆಲಸ ಇತ್ತು ಎಂದು ಸರ್ಕಾರದವರು ಇಲ್ಲಿ ಹೇಳಬಹುದಾಗಿತ್ತು. ಆ ಮಾತುಗಳನ್ನು ಹೇಳದೆ ತಪ್ಪು ಮಾತುಗಳನ್ನು ಇಲ್ಲಿ ಹೇಳಿ ತಾವು ಮಾಡಿದಂತಹ ಕಾರ್ಯವನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೊರಟಿರುವುದು ನಿಜವಾಗಿಯೂ ಸಮರ್ಪಕವಾದುದಲ್ಲ. ಚುನಾವಣಾ ಮತದಾರರ ಪಟ್ಟಿಯನ್ನು ತಯಾರು ಮಾಡಿ ಚುನಾವಣೆಯನ್ನು ಮಾಡದಿದ್ದರೆ ತಪ್ಪಾಗುತ್ತದೆ ಎಂದು ಅನೇಕ ಕಮಿಟಿಗಳವರು ಹೇಳಿದ್ದಾರೆ. ಅದೇರೀತಿ ಹೈಕೋರ್ಟಿನವರು ಡೈರೆಕ್ಷನ್ ಸಹ ಕೊಟ್ಟಿದ್ದಾರೆ. ಆ ರೀತಿ ಅವರು ಡೈರೆಕ್ಷನ್ ಕೊಟ್ಟ ಮೇಲೂ ಕೂಡ ವ್ಯಾಪಾರಸ್ಥರು ಮತ್ತು ವಕ್ಕಲಿಗರ ನಡುವೆ ವಿವಾದಗಳು ಏಳುವುದಕ್ಕೆ ಅವಕಾಶವನ್ನು ಕೊಡದೆ ಅದನ್ನು ನಿರ್ಬಂಧಿಸಿ

ಬೇಕಾಗಿತ್ತು. ಆ ರೀತಿ ಮಾಡದೆ ಅವರು ಸರ್ಕಾರದ ಮೇಲೆ ರಿಟ್ ಹಾಕುವುದಕ್ಕೆ ಅವಕಾಶ ಮಾಡಿಕೊಟ್ಟಿರುವಂಥಾದ್ದು ನನಗೆ ತಿಳಿಯದ ಪ್ರಸಂಗ. ಇದು ಸರ್ಕಾರದ ಹೊಣೆಗೇಡಿತನವನ್ನು ತೋರಿಸುತ್ತದೆ. ಇದಕ್ಕೆ ನಿಮ್ಮ ನಾಯಕರಾದ ಶ್ರೀಮಾನ್ ನಿಜಲಿಂಗಪ್ಪನವರನ್ನು ಸಮಾಧಾನ ಪಡಿಸಲು ಕೈಕೊಳ್ಳುವ ನಿಮ್ಮ ವರ್ತನೆ ಕಾರಣವೇ? ಸರ್ಕಾರದವರು ಇಷ್ಟೆಂದು ಹೊಣೆಗೇಡಿತನ ದಿಂದ ವರ್ತಿಸಿ ಈ ಮಾರುಕಟ್ಟೆ ಸಮಿತಿಗಳ ಚುನಾವಣೆಯನ್ನು ಸಕಾಲದಲ್ಲಿ ಮಾಡದೆ ಪ್ರಜಾ ಪ್ರಭುತ್ವವನ್ನು ಕೊರೆ ಮಾಡುತ್ತಿದ್ದಾರೆ. ಈ ಮಾರ್ಕೆಟ್ ಸಮಿತಿಗಳ ಅಧಿಕಾರವನ್ನೆಲ್ಲಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು, ಅಸಿಸ್ಟೆಂಟ್ ಕಮೀಷನರು ಮತ್ತು ತಹಶೀಲ್ದಾರರ ಕೈಯಲ್ಲಿ ಇದೆ. ಅವರು ಎಲ್ಲರಿಗೂ ಒಂದೇ ರೀತಿಯಲ್ಲಿ ನಿರಿಸಮಾನವಾಗಿ ನಡೆದುಕೊಳ್ಳುತ್ತಾರೆಯೇ? ಇವೊತ್ತು ಈ ರಾಜ್ಯ ಸರ್ಕಾರದವರು ಎಂದರೆ ಈ ರಾಜ್ಯ ಸರ್ಕಾರವನ್ನು ನಡೆಸುತ್ತಾ ಇರತಕ್ಕಂಥ ಕಾಂಗ್ರೆಸ್ಸಿನವರು ತಮ್ಮ ಹಿಂದೆ ಮುಂದೆ ಓಡಾಡತಕ್ಕಂಥ ಕೆಲವರ ಚಾಡಿ ಮಾತುಗಳನ್ನು ಕೇಳಿ ಅದರಂತೆ ನಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇವೊತ್ತು ನೀವು 2 ಕೋಟಿ ಜನತೆಯಿಂದ ಆರಿಸಿ ಬಂದಿರತಕ್ಕ ಜನತಾಪ್ರತಿನಿಧಿಗಳಾಗಿರುತ್ತೀರಿ. ಆದ್ದರಿಂದ ನೀವು ಅದನ್ನು ಅರಿತುಕೊಂಡು ಜನತೆಯ ಅಭಿಪ್ರಾಯದಂತೆ ಕೆಲಸ ಮಾಡಬೇಕು. ಶ್ರೀಮಾನ್ ಹನುಮಂತಯ್ಯನವರು ಈ ಮನೆಯ ಎದುರಿಗೆ ಒಂದು ತಕ್ಕಡಿಯನ್ನು ಹಾಕಿಸಿದ್ದಾರೆ. ಆ ನ್ಯಾಯ ತಕ್ಕಡಿಯಂತೆ ನಡೆಯುವವರು ಇಂದು ಸರ್ಕಾರದಲ್ಲಿ ಯಾರು ಇದ್ದಾರೆ? ಆ ನ್ಯಾಯ ತಕ್ಕಡಿಗೆ ಕುಂದು ಬರುವ ರೀತಿಯಲ್ಲಿ ನೀವು ನಡೆದುಕೊಳ್ಳುತ್ತಿದ್ದೀರಿ, ಇದು ನಿಜವಾಗಿಯೂ ಸರಿಯಲ್ಲ. ಈ ಕಾನೂನಿಗೆ ಸಂಬಂಧಪಟ್ಟಹಾಗೆ ಹೈಕೋರ್ಟಿನವರು ಕೊಟ್ಟಂತಹ ಜಜ್ಮೆಂಟ್ ಕಾಪಿಯನ್ನು ಕೊಡಿಸಿಕೊಡಬೇಕೆಂದು ನಾವು ಅಧ್ಯಕ್ಷರನ್ನು ಕೇಳಿಕೊಂಡಿದ್ದೆವು. ಅದನ್ನು ಕೊಟ್ಟಿದ್ದರೆ ಅದರಲ್ಲಿ ಹೈಕೋರ್ಟಿನವರು ತಪ್ಪು ಮಾಡಿದ್ದಾರೆಯೇ, ನಾವು ತಪ್ಪು ಮಾಡಿದ್ದೇವೆಯೇ, ಅಥವಾ ವಕೀಲರು ತಪ್ಪು ಮಾಡಿದ್ದಾರೆಯೇ ಎಂಬುದನ್ನು ನೋಡಬಹುದಾಗಿತ್ತು. ಆದರೆ ಅಧ್ಯಕ್ಷರು ಆ ಜಡ್ಜ್‌ಮೆಂಟ್ ಕಾಪಿಯನ್ನು ನಮಗೆ ಕೊಡಿಸಲಿಲ್ಲ. ಈ ಕಾನೂನಿಗೆ ಸಂಬಂಧಪಟ್ಟ ಹಾಗೆ ಹೈಕೋರ್ಟ್ ಎದುರಿಗೆ ಅಡ್ವಕೇಟ್ ಜನರಲ್ ಅವರು ಒಂದು ಮಾತನ್ನು ಇಟ್ಟಿದ್ದಾರೆ. ಅದನ್ನು ನಾನು ತಮ್ಮ ನಜರಿಗೆ ತರುತ್ತೇನೆ. ಅದು ಈ ರೀತಿ ಇದೆ. The Judges on this point have interpreted on the arguments advanced by the Advocate General. It is as follows :

> "The argument placed before us by Mr. Advocate General that in all cases where there is an old Market Committee the Constitution of a first Market Committee under Section 10 is wholly unnecessary, is in our opinion, unacceptable. The new Act contemplates the establishment of a Market Committee in a particular way, it is of significance to observe that Section 11 speaks of a second and subsequent market Committees. Although that is what the marginal note says, we should not altogether overlook the description which that marginal note gives, and what is clear from the language of Section 11 is that the elected market Committee which comes into being under it is the second market Committee and the first Market Committee which is its predecessor is no other than the nominated marketed Committee to which Section 10 refers."

ಈ ಪ್ರಕಾರವಾಗಿ ಹೈಕೋರ್ಟಿನವರ ಎದುರಿಗೆ ಸರ್ಕಾರದವರು ತಮ್ಮ ವಾದವನ್ನು ಮಂಡಿಸುವಾಗ ಹೈಕೋರ್ಟಿನವರು ಅದನ್ನು ಒಪ್ಪಲಿಲ್ಲ. ಹೈಕೋರ್ಟಿನವರು ಕೊಟ್ಟಂಥ ಜಡ್ಜ್‌ಮೆಂಟ್ ಅನ್ನು ನಾವು ವಿಚಾರ ಮಾಡೋಣ ಎಂದು ಹೇಳುವುದಾದರೆ ಆ ಜಡ್ಜ್‌ಮೆಂಟ್ ಕಾಪಿ ಈಗ ನಮ್ಮಲ್ಲಿ ಇಲ್ಲ. ಈ ಮಾರುಕಟ್ಟೆಯ ಸಮಿತಿಗಳಿಗೆ ಸರ್ಕಾರದವರು ನಾಮನಿರ್ದೇಶನ ಮಾಡುವ ಪದ್ಧತಿಯನ್ನು ಏನು ಅನುಸರಿಸುತ್ತಿದ್ದರು ಅದು ಕ್ರಮಬದ್ಧವಾಗಿಲ್ಲ ಸರಿಯಾಗಿಲ್ಲ ಎಂದು ಹೈಕೋರ್ಟಿನವರು ಹೇಳಿದ್ದಾರೆ. ಅದು ಹೋಗಲಿ, ಒಂದು ವೇಳೆ ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟಿಗೆ ಹೋಗಲು ಸರ್ಕಾರದ ಬಳಿ ಹಣ ಇಲ್ಲದಿದ್ದರೆ, ಹೈಕೋರ್ಟಿನ ತೀರ್ಪನ್ನು ಒಪ್ಪಿಕೊಳ್ಳಬೇಕಾಗಿತ್ತು. ಆದರೆ ಆರ್ಡಿನನ್ಸ್ ಹೊರಡಿಸಿ, ಈಗ ಸಭೆಯ ಮುಂದೆ ಮಸೂದೆಯನ್ನು ಮಂಡಿಸಿರುವುದು ನ್ಯಾಯವಲ್ಲ. ಈ ಮಾತನ್ನು ಕಾಂಗ್ರೆಸ್ ಪಕ್ಷದ ಸದಸ್ಯರುಗಳೇ ಹೇಳುತ್ತಿದ್ದಾರೆ. ರಾಷ್ಟ್ರಾಧ್ಯಕ್ಷರ

(ಶ್ರೀ ಕೆ. ಎಚ್. ಪಾಟೀರ್)

ಚುನಾವಣೆಯ ನಂತರ ಕಾಂಗ್ರೆಸ್ ಪಾರ್ಟಿಯೊಳಗೇ ಜಗಳ ನಡೆದಿದೆ. ಸರ್ಕಾರದವರು ಮಾಡಿರುವಂತಹ ಶಿಫಾರಸ್‌ಗಳು ಏನಿವೆ ಅವನ್ನು ಹೈಕೋರ್ಟಿನವರು ತಳ್ಳಿಹಾಕಿದ ಮೇಲೆ, ಮತ್ತೆ ರಾಜ್ಯಪಾಲರನ್ನು ನಂಬಿಸಿ ಆರ್ಡಿನೆನ್ಸ್ ಹೊರಡಿಸಿದಿರಿ. ಅಂದರೆ ಈ ಮಂತ್ರಿಮಂಡಲದವರು ರಾಜ್ಯಪಾಲರಿಗೂ ಕೂಡ ಮೋಸ ಮಾಡಿದ್ದಾರೆ. ಹೈಕೋರ್ಟಿನ ತೀರ್ಪಿನ ನಂತರ ಈ ಬಗ್ಗೆ ರಾ—ಸೆಕ್ರೆಟರಿಯವರೊಡನೆ ವಿಚಾರ ಮಾಡಬಹುದಿತ್ತು, ಆದರೆ ಆ ರೀತಿ ಮಾಡಲಿಲ್ಲ. ಆರ್ಡಿನೆನ್ಸ್ ಹೊರಡಿಸಿದಮೇಲೆ ಇದು ರಾವಣನ ರಾಜ್ಯವಾಗಿದೆ ಎಂದು ಆ ಕಡೆಯ ಸದಸ್ಯರು ಕೂಡ ಹೇಳಿದ್ದಾರೆ. ಆರ್ಡಿನೆನ್ಸ್ ಹೊರಡಿಸಿದೆ, ಒಂದೇ ಸಲ ಈ ತಿದ್ದುಪಡಿಮಸೂದೆಯನ್ನು ಸಭೆಯ ಮುಂದೆ ತಂದಿದ್ದರೆ ಅನೇಕ ಕಾಂಗ್ರೆಸ್ ಸದಸ್ಯರು ಕೂಡ ಓಟು ಮಾಡುತ್ತಿರಲಿಲ್ಲವೆಂದುಕೊಂಡು ಆರ್ಡಿನೆನ್ಸ್ ಹೊರಡಿಸಿದಿರಿ. ಇವತ್ತಿನದಿವಸ ಎಂ. ಆರ್. ಪಾಟೀಲ್ ಅವರು ಸಭೆಯಲ್ಲಿ ಇಲ್ಲ. ಅವರು ಈ ಬಿಲ್‌ನ ಪರವಾಗಿ ಓಟು ಮಾಡದಾರದೆಂದುಕೊಂಡು ಮನೆಗೆ ಹೋಗಿದ್ದಾರೆಂದು ನಾನು ತಿಳಿದಿದ್ದೇನೆ. ಡಾಕ್ಟರ್ ನಾಗನಗೌಡರು ಕೂಡ ಇಂತಹ ಅನ್ಯಾಯ ಮಸೂದೆಗಳನ್ನು ತಂದು ಪಾಸ್ ಮಾಡುತ್ತಾರೆ ಎಂದುಕೊಂಡು ಸತ್ತರು ಎಂದು ಕಾಣುತ್ತದೆ. ಈ ಮೂಲಕ ತಾವು ಅಡಳಿತವನ್ನು ದುರುಪಯೋಗ ಮಾಡಿಕೊಂಡು ತಮ್ಮ ಕಡೆಯ ಸದಸ್ಯರಿಂದ ಪಕ್ಷದ ಶಿಸ್ತಿನ ಭೀತಿಯಿಂದ ಕೈಎತ್ತಿಸಿ ಇಂತಹ ಮಸೂದೆಗಳನ್ನು ಪಾಸ್ ಮಾಡಿಕೊಳ್ಳುತ್ತಿದ್ದೀರಿ. ಇದರಿಂದ ತಮ್ಮ ಅಧಿಕಾರದ ಅಂತ್ಯವಾಗುತ್ತಿದೆ ಎಂದು ಕಾಣುತ್ತದೆ. ಅವತ್ತಿನದಿವಸ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮಾತನಾಡುತ್ತಾ ಈ ರೀತಿ ಹೇಳಿದ್ದಾರೆ :

> "We have started to regulate. Sir, this Bill will further facilitate starting of regulated market committees in the remaining areas also."

ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯನ್ನು ಪ್ರಾರಂಭ ಮಾಡುತ್ತೇವೆ ಎಂಬ ಮಾತನ್ನು ಮಾನ್ಯ ರಾಮಕೃಷ್ಣಹೆಗ್ಡೆಯವರು 1963ರಲ್ಲಿಯೇ ಹೇಳಿದ್ದಾರೆ. 1963ರಲ್ಲಿ ಹೇಳಿದ್ದು 1966ರಲ್ಲಿ ಕಾಯಿದೆ ಆಯಿತು. 1968ರಲ್ಲಿ ಅಮರ್‌ನಲ್ಲಿ ಬಂತು. ಅಮರ್‌ನಲ್ಲಿ ಬಂದ ಕೆಲವೇ ತಿಂಗಳಲ್ಲಿ ಹೈಕೋರ್ಟಿಗೆ ಹೋಯಿತು. ಈ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗಳಿಗೆ ಚುನಾವಣೆಯನ್ನು ನಡೆಸಿದರೆ ಈಗ ತಮ್ಮ ಕೈಯಲ್ಲಿರುವ ಅಧಿಕಾರ ತಪ್ಪಿಹೋಗಬಹುದು, ಆದ್ದರಿಂದ ಅಧಿಕಾರಿಗಳನ್ನು ನಾಮಕರಣ ಮಾಡುವುದು ಒಳ್ಳೆಯದು ಎಂಬ ವಿಚಾರಗಳು ಮಾನ್ಯ ನಾಡಗೌಡರ ಕಿವಿಯಲ್ಲಿ ಬಿಡಿಯುತ್ತಿದೆ. ಒಂದುವೇಳೆ ತಮ್ಮಅಧಿಕಾರವನ್ನು ಉಳಿಸಿಕೊಳ್ಳಲು, ತಮಗೆ ಬೇಕಾದವರನ್ನು ಈ ಕಮಿಟಿಗಳಿಗೆ ನಾಮಕರಣ ಮಾಡಲು ಹೊರಟರೆ ಬಹಳ ಮಂದಿಯನ್ನು ತಾವು ಅಸಮಾಧಾನ ಮಾಡಬೇಕಾಗುತ್ತಿತ್ತು. ಏಕೆಂದರೆ ಬಹಳ ಮಂದಿ ತಮ್ಮ ಸುತ್ತ ಮುತ್ತಿಕೊಂಡಿದ್ದರು. ಬಾಗಲಕೋಟೆಯ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗೆ ಮುರ್ನಾಳ್ ಅವರನ್ನು ನೇಮಿಸಬೇಕೋ, ಎಡಹಳ್ಳಿ ಅವರನ್ನು ನೇಮಿಸಬೇಕೋ ಎಂಬ ಬಗ್ಗೆ ವಿವಾದವೆದ್ದು ಕೊನೆಗೆ ತಹಶೀಲ್‌ದಾರರನ್ನು ನೇಮಕ ಮಾಡಿದಿರಿ. ಮಾನ್ಯ ಮಂತ್ರಿಗಳಾದ ನಾಡಗೌಡರು ಮೈಸೂರು ರಾಜ್ಯದ ಸಿಂಡಿಕೇಟಿನ ಸದಸ್ಯರಾಗಿದ್ದಾರೆ. ಜನನಾಯಕರೆಂದು ಕರೆಸಿಕೊಳ್ಳುವವರ ಶಿಷ್ಯರಾಗಿದ್ದಾರೆ. ಮಾನ್ಯ ಮಂತ್ರಿಗಳನ್ನು ನಾನು ಒಂದು ಮಾತನ್ನು ಕೇಳುತ್ತೇನೆ. ತಮಗೆ ಸೌಜನ್ಯ ಏನಾದರೂ ಇದ್ದರೆ, ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ ಜಾಗ್ರತೆ ಚುನಾವಣೆಯನ್ನು ನಡೆಸಬೇಕು. ಚುನಾವಣೆ ಜಾಗ್ರತೆನಡೆಸುತ್ತೇವೆಂದು ಹೇಳುತ್ತಾರೆ, ಆದರೆ ಇದುವರೆಗೆ ಯಾವ ಒಂದು ನೋಟಿಫಿಕೇಷನ್ನನ್ನು ಕೂಡ ಅಡ್ಮಿನಿಸ್ಟ್ರೇಟರ್ ಮೂಲಕ ಹೊರಡಿಸಿಲ್ಲ. ತಮ್ಮ ಕಡೆಯ ಸದಸ್ಯರುಗಳೇ ಈ ಬಿಲ್‌ನ ಪರವಾಗಿ ಎಲ್ಲಿ ಓಟು ಮಾಡುವುದಿಲ್ಲವೋ ಎಂಬ ಕಾರಣದಿಂದ ಆರ್ಡಿನೆನ್ಸ್ ಹೊರಡಿಸಿದಿರಿ. ಈಗ ತಮ್ಮ ಕಡೆಯ ಸದಸ್ಯರಿಗೆ ಏನು ಹೇಳುತ್ತಿದ್ದೀರಿ ಎಂದರೆ, ಮಾಡಿದ್ದು ತಪ್ಪಾಗಿದೆ, ತಾವಾಗಳು ಪರವಾಗಿ ಓಟು ಕೊಡದಿದ್ದರೆ ವೀರೇಂದ್ರಪಾಟೀಲರ ಮಂತ್ರಿ ಮಂಡಲ ಪತನವಾಗುತ್ತದೆ ಎಂಬುದಾಗಿ. ಹೊಲನು ಮಾಡಿದ ಮಕ್ಕಳನ್ನು ತಾಯಿಯಾದವಳು ಎತ್ತಿಕೊಳ್ಳುವಂತೆ, ತಮ್ಮ ಕಡೆಯ ಸದಸ್ಯರುಗಳು ಸರಿಯೋ ತಪ್ಪೋ ತಾವು ಹೇಳಿದಂತೆ ಪಕ್ಷದ ಮಮತೆಯಿಂದಾಗಿ ಕೇಳಬೇಕಾಗಿದೆ. ಆರ್ಟಿಕರ್ 213 ಪ್ರಕಾರ ಆರ್ಡಿನೆನ್ಸ್ ಹೊರಡಿಸಿದ್ದೀರಿ. ಆ ರೀತಿ ಆರ್ಡಿನೆನ್ಸ್ ಹೊರಡಿಸಬೇಕಾದ ಅವಶ್ಯಕತೆ ಏನಿತ್ತು ? ಒಂದೇ ಸಲ ಮಸೂದೆಯನ್ನೇ ಸಭೆಯಮುಂದೆ ತರಬಹುದಿತ್ತು. ಅಲ್ಲದೆ ಆರ್ಟಿಕರ್ 304ರ ಪ್ರಕಾರ ಆರ್ಡಿನೆನ್ಸ್ ಹೊರಡಿಸಲು ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಸಹ ತಾವು ಪಡೆದಿಲ್ಲ. ಈ ಬಗ್ಗೆ ಮಾನ್ಯ ಸಿದ್ಧವೀರಪ್ಪನವರು ಮತ್ತು ಮಾನ್ಯ ನಾಗಪ್ಪನವರು ವಿವರಣೆ ಕೇಳಿದಾಗ ರಾಷ್ಟ್ರಾಧ್ಯಕ್ಷರ ಅನುಮತಿಯ ಅವಶ್ಯಕತೆ ಇಲ್ಲ ಎಂದು ಹೇಳಿದಿರಿ. ಇದುಕ್ರಮಬದ್ಧ ವರ್ತನೆಯೇ ?

ಇದಕ್ಕೆ ಕಾನ್‌ಸ್ಟಿಟ್ಯೂಷನಲ್ ರೈಟ್ ಪ್ರಕಾರ ಗವರ್ನರವರು ಪರ್ಮಿಷನ್ ಕೊಡಲೇಬೇಕು. ಆರ್ಟಿಕಲ್ 304 ರ ಪ್ರಕಾರ ಪ್ರೆಸಿಡೆಂಟ್‌ರವರ ಅಸೆಂಟು ಪಡೆಯುವುದು ಅವಶ್ಯ ಇದೆ. ಹಾಗಿದ್ದರೂ ಇದರ ಅವಶ್ಯಕತೆ ಇಲ್ಲ ಎಂದು ತಾವು ಇಲ್ಲಿ ಬಿಲ್ ತಂದು ಇದನ್ನು ಪಾಸು ಮಾಡಬೇಕೆಂದು ಕೇಳುತ್ತಿದ್ದೀರಿ. ಇದರಿಂದ ನೀವು ಗವರ್ನರ್‌ರವರಿಗೆ ಕೆಟ್ಟ ಹೆಸರು ತರುತ್ತಿದ್ದೀರಿ. ಇದರ ಬಗ್ಗೆ ನೀವೇ ಆದರೂ ಕೂಡ ನಿಮ್ಮ ಲೀಗರ್ ಡಿಪಾರ್ಟುಮೆಂಟ್ ಮೂಲಕ ನರಿಯಾದ ವಿವರಣೆಗಳನ್ನು ಪಡೆದು ಇಲ್ಲಿಗೆ ಈ ಬಿಲ್‌ನ್ನು ತಂದಿದ್ದೀರಾ ಎಂದು ನಾನು ಕೇಳಬೇಕಾಗಿದೆ. ನಾಳೆ ಇಂತಹ ಒಂದು ಕಾಯಿದೆ ಕೋರ್ಟಿಗೆ ಹೋದರೆ ಅವರು ಇದನ್ನು ಇನ್‌ವ್ಯಾಲಿಡ್ ಎಂದು ಹೇಳಿದರೆ ಆಗ ನಿಮ್ಮ ಲಾ ಇಲಾಖೆಯ ಅಧಿಕಾರಿಗಳ ಮುಖಕ್ಕೆ ಮಸಿ ಬಳಿದಂತಾಗುವುದಿಲ್ಲವೇ? ಇದರ ಬಗ್ಗೆ ತಾವು ಇಲ್ಲಿಯವರೆಗೂ ಏಕೆ ಆಲೋಚನೆ ಮಾಡಲಿಲ್ಲ? ಆರ್ಟಿಕಲ್ 304 ಪ್ರಕಾರ್ಯಾಗಿ ಇಂಪೋಸ್ ಮಾಡಿದ್ದಾರೆ ಎನ್ನುವುದನ್ನಾದರೂ ತಾವು ಮನಸ್ಸಿಗೆ ತೆಗೆದುಕೊಂಡಿದ್ದೀರಾ ಎಂದು ಇಲ್ಲ ತಮ್ಮನ್ನು ಕೇಳಬೇಕಾಗಿದೆ. ಘಟನಾತ್ಮಕವಾಗಿ ಕೊಟ್ಟಿರುವ ಅಧಿಕಾರವನ್ನು ನೀವು ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ. ಫ್ರೀ ಚ್ರೇಡ್ ಎನ್ನುವುದು ಒಂದೊಂದು ಕಡೆ ಒಂದೊಂದು ರೀತಿಯಲ್ಲಿರಕೂಡದು. ಇಲ್ಲಿ ಒಂದು ರೀತಿ ಆಂಧ್ರದಲ್ಲಿ ಒಂದು ರೀತಿ ಮಹಾರಾಷ್ಟ್ರದಲ್ಲಿ ಒಂದು ನಮೂನೆ ಆಗಬಾರದೆಂದು ಇದನ್ನೆಲ್ಲಾ ಪ್ರೆಸಿಡೆಂಟ್‌ರವರು ಪರಿಶೀಲನೆ ಮಾಡಿ ಎಲ್ಲ ರಾಜ್ಯಗಳಿಗೂ ಅನುಕೂಲವಾಗುವಂತೆ ಅವರು ತಮ್ಮ ಅಸೆಂಟ್ ಕೊಡಬೇಕು. ಇದೂ ಅಲ್ಲದೆ ಇದರಲ್ಲಿರುವ ಕೆಲವು ಕಲಮುಗಳು ರಿಡಂಡೆಂಟ್ ಆಗಿವೆ. ಇದರಂತೆ ನೀವು ಹೊರಡಿಸುವ ಎಷ್ಟೋ ನೋಟಿಫಿಕೇಷನ್‌ಗಳು ಹಾಗೂ ನರಕಾರದ ಆರ್ಡರುಗಳೂ ಕೂಡ ರಿಡಂಡೆಂಟು ಆಗುತ್ತವೆ. ಇಂತಹ ಬಿಲ್ಲನ್ನು ಗವರ್ನರ್‌ರವರ ಕಡೆಗೆ ಕೊಟ್ಟು ಅವರ ಅಸ್ಸೆಂಟು ಪಡೆಯಲು ಏತಕ್ಕಾಗಿ ಹಿಂಜರಿಯುತ್ತಿದ್ದೀರಿ? ಎಂದು ನಾನು ಇಲ್ಲಿ ತಮ್ಮನ್ನು ಕೇಳುತ್ತೇನೆ. ಮೊಟ್ಟಮೊದಲಿಗೇ ಇಂತಹ ಆರ್ಡಿನೆನ್ಸ್‌ನ್ನು ಗವರ್ನರ ಮೂಲಕ ಹೊರಡಿಸಲು ಅಧಿಕಾರವೇ ಇಲ್ಲ ಮತ್ತು ಆರ್ಟಿಕಲ್ 213 ರಂತೆ ಇದನ್ನು ಹೊರಡಿಸಿರುವುದು ತಪ್ಪು. ಇದರ ಬಗ್ಗೆ ನಾವು ಇಲ್ಲಿ ಪಾಯಿಂಟ್ ಆಫ್ ಆರ್ಡರು ಎತ್ತಿದರೂ ನಹೆ ಅದಕ್ಕೆ ಸರ್ಕಾರದ ಪರ ತಕ್ಕ ಗಮನ ಕೊಡಲೇ ಇಲ್ಲ. ಎರಡನೆಯದು ಇದರಲ್ಲಿ ನರಿಯಾದ ಒಂದು ಫೈನಾನ್‌ಷಿಯಲ್ ಮೆಮೊರಾಂಡಂನ್ನು ಕೊಟ್ಟು ಎಷ್ಟು ಖರ್ಚು ಬರುತ್ತದೆ ಎನ್ನುವ ವಿವರಗಳನ್ನು ಕೊಡಬೇಕಾಗಿತ್ತು. ಆದರೆ ಇಲ್ಲಿ ಅದನ್ನೂ ಕೊಡಲಿಲ್ಲ. ಇದಕ್ಕೆಲ್ಲಾ ಕಾನ್‌ಸ್ಟಿಟ್ಯೂಷನಲ್ ಪದ್ಧತಿಗಳನ್ನು ಅನುಸರಿಸಬೇಕಾಗಿದೆ. ಇದರಂತೆ ತಾವು ಯಾವುದನ್ನು ಯೋಚಿಸದೇ ಇಲ್ಲ ಬಿಲ್ಲನ್ನು ತಂದು ತಪ್ಪು ಮಾಡಿದ್ದೀರಿ. ಇಂತಹ ಒಂದು ಬಿಲ್‌ನ್ನು ಈಗ ತರಬೇಕಾದಂತಹ ಎಮರ್ಜೆನ್ಸಿಯಾದರೂ ಏನಿತ್ತು? ನರಿಯಾದ ರೀತಿಯಲ್ಲ ಬಿಲ್ಲನ್ನು ತರಲು ನೀವು ಅಸಮರ್ಥರಾಗಿದ್ದೀರಿ ಎಂದು ಹೇಳದೆ ವಿಧಿ ಇಲ್ಲ. ಇದರ ಬಗ್ಗೆ ಬಾರಿಬಾರಿಗೂ ಪಾಯಿಂಟ್ ಆಫ್ ಆರ್ಡರುಗಳನ್ನು ತೆಗೆದು ಮನಮುಟ್ಟುವಂತೆ ಹೇಳಿದರೂ ನೀವು ಯಾವುದಕ್ಕೂ ಕಿವಿಗೊಡಲಿಲ್ಲ. ನಿಮಗೆ ಹೇಳಿ ಹೇಳಿ ಸಾಕಾಯಿತು. ನಿಮ್ಮ ಉದ್ದೇಶ ನಾವು ಪುನಃ ಈ ಕಾಯಿದೆಯನ್ನು ಹೈ ಕೋರ್ಟಿಗೆ ತೆಗೆದು ಕೊಂಡು ಹೋಗಬೇಕೆಂದು ಇಲ್ಲಿ ಇಂತಹ ಘಟನಾ ವಿರೋಧಿ ಕಾನೂನುಗಳನ್ನು ಮಾಡುತ್ತಿದ್ದೀರಾ ಎಂದು ಕೇಳಬೇಕಾಗಿದೆ. ಇಂತಹ ಕಾನೂನು ಮಾಡಲಿಕ್ಕೆ ನಿಮಗೆ ಯಾವ ನ್ಯಾಯ ಇಲಾಖೆಯವರು ಸಲಹೆ ಕೊಟ್ಟರು? ನಿಮ್ಮ ಅಧಿಕಾರಿಗಳು ಮಾಡಿರುವುದು ಅಕ್ರಮವಾಗಿದೆ ಎಂದು ನಾವು ಇಲ್ಲ ಪದೇ ಪದೇ ಹೇಳುತ್ತಿದ್ದರೂ ಅದನ್ನು ಗಮನಿಸದೇ ಮಂತ್ರಿಮಂಡಲದ ಒಪ್ಪಿಗೆ ಪಡೆದು ಇಂತಹ ಅಕ್ರಮವಾದ ಕಾಯಿದೆಯನ್ನು ಏಕೆ ಮಾಡುತ್ತೀರಿ? ಇದಕ್ಕಾಗಿ ನಾವು ಹೈ ಕೋರ್ಟಿಗೆ ಹೋಗಿ ಈ ಕಾಯಿದೆ ನ್ಯಾಯಬದ್ಧವಾಗಿಲ್ಲ, ಇದನ್ನು ರದ್ದು ಮಾಡಬೇಕೆಂದು ಹೇಳಿ ಅಲ್ಲ ಕೇಳಬೇಕೇನು? ಇದಕ್ಕಾಗಿ ಇನ್ನೊಂದು ರಿಟ್ ಪಿಟಿಷನ್ ಫೈಲ್ ಮಾಡಿ ನಿಮ್ಮ ಅಡ್ವೋಕೇಟ್ ಜನರಲ್‌ರವರಿಗೆ ದಿನಕ್ಕೆ ಎರಡೂವರೆ ಸಾವಿರದಂತೆ ಫೀಸು ಕೊಟ್ಟು ಅವರ ಜೇಬನ್ನು ತುಂಬಿಸುವುದೇ ನಿಮ್ಮ ಉದ್ದೇಶವೇನು? ಹೀಗೆ ಬಡ ಬೋರೇಗೌಡನ ರೊಕ್ಕವನ್ನು ವಿನಾಕಾರಣ ಏತಕ್ಕಾಗಿ ಖರ್ಚುಮಾಡುತ್ತೀರಿ? ಬೇರೆ ಯಾವುದಾದರೂ ಉಪಯೋಗವಾಗುವ ಕೆಲಸಗಳಿಗೆ ಹಣ ಬೇಕು ಎಂದು ಕೇಳಿದರೆ ಹಣವಿಲ್ಲ ಎಂದು ಹೇಳುತ್ತೀರಿ. ಆದರೆ ಇಲ್ಲಿ ಹೀಗೆ ಅನ್ಯಾಯವಾಗಿ ಹಣವನ್ನೆಲ್ಲಕೆ ಖರ್ಚು ಮಾಡುತ್ತೀರಿ! ಅಲ್ಲದೆ ಇದರಲ್ಲಿರುವ ಮೂರನೇ ತೊಂದರೆ ಎಂದರೆ ಇದರಲ್ಲಿ ಅನೇಕ ರಿಡಂಡೆಂಟ್ ಆದ ಕ್ಲಾಸುಗಳಿವೆ. ಹೀಗಿರುವಾಗ ನೀವು ಇಲ್ಲಿ ಎಲ್ಲ ಸೆಕ್ಷನ್‌ಗಳನ್ನೂ ತರುವುದಕ್ಕೆ ಬದಲಾಗಿ ಬರೀ ಹತ್ತನೇ ಕಲಮು ಒಂದನ್ನೇ ತಿದ್ದುಪಡಿ ತಂದು ಪಾಸು ಮಾಡಿಸಿಕೊಳ್ಳಬಹುದಾಗಿತ್ತು. ನಿಮ್ಮಲ್ಲಿ ದುರುದ್ದೇಶವೇನೂ ಇಲ್ಲದಾಗಿದ್ದರೆ ಉಳಿದ ಇತರ ಕ್ಲಾಸುಗಳನ್ನು ಹಾಗೇ ಬಿಡಬಹುದಾಗಿತ್ತು. ಹೀಗೆ ನೀವು ಮಾಡುತ್ತಿರುವುದು ಪ್ರಜಾಪ್ರಭುತ್ವಕ್ಕೆ ಶೋಭಿತವೇ!

ಮತ್ತೆ, ಇದರಲ್ಲಿ ನೀವು ಎಕ್ಸ್‌ಪ್ಲೆನೇಟರಿ ಸ್ಟೇಟುಮೆಂಟು ಎಂದು ಕೊಟ್ಟಿದ್ದೀರಿ. ಇದನ್ನು ನಿಮ್ಮ ನ್ಯಾಯ ಇಲಾಖೆಯ ಅಧಿಕಾರಿಗಳು ಯಾರಾದರೂ ನರಿಯಾಗಿ ಓದಿ ನೋಡಿದ್ದಾರೆಯೇ!

(ಶ್ರೀ ಕೆ. ಎಚ್. ಪಾಟೀಲ್)

